ಐಕ್ಯರಂಗ

ಸಂಪುಟ 15
ಸಂಚಿಕೆ 32
ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

15 ಆಗಸ್ಟ್ 1993

ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಮಸೂದೆಗಳು

ಗೊಂದಲ ಹುಟ್ಟಿಸಿದ ಕೇಂದ್ರ ಸರ್ಕಾರದ ಕ್ರಮ

-- ಕಾಂ. ಪ್ರಕಾಶ್ ಕಾರಟ್

ನರಸಿಂಹರಾವ್ ಸರಕಾರ ಧರ್ಮ ಮತ್ತು ರಾಜಕೀಯವನ್ನು ಬೇರ್ಪಡಿಸುವ ಉದ್ದೇಶದಿಂದ ಸಂಸತ್ತಿನಲ್ಲಿ ಎರಡು ಮಸೂದೆಗಳನ್ನು ಮಂಡಿಸಿದೆ. ಆದರೆ ಅದನ್ನು ಅತ್ಯಂತ ತರಾತುರಿಯಿಂದ ತಯಾರಿಸಿದ್ದು ಎಂದಿನಂತೆ ಈ ಬಗ್ಗೆಯೂ ಸರಕಾರಕ್ಕೆ ಗಂಭೀರ ಆಸಕ್ತಿಯಿಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಾಟ್ ಹೇಳಿದ್ದಾರೆ. ಈ ಮಸೂದೆಗಳು ಕೋಮುವಾದದ ಸಮಸ್ಯೆ ಹಾಗೂ ರಾಜಕೀಯದಲ್ಲಿ ಧರ್ಮದ ಬಳಕೆ , ಇವುಗಳ ಮೇಲೆಯೇ ಗಮನ ಕೇಂದ್ರೀಕರಿಸಬೇಕಿತ್ತು. ಏಕೆಂದರೆ ನಮ್ಮ ಜಾತ್ಯತೀತ ಗಣತಂತ್ರಕ್ಕೆ ಬಂದಿರುವ ಮುಖ್ಯ ಅಪಾಯ ಇದು. ಈ ಮಸೂದೆಗಳಲ್ಲಿ ಕೆಲವು ಮುಖ್ಯ ಕೊರತೆಗಳಿದ್ದು ಅವನ್ನು ನಿವಾರಿಸದರೆ ಮಾತ್ರವೇ ಇವುಗಳ ಉದ್ದೇಶ ಈಡೇರಲು ಸಾಧ್ಯ ಎಂದು ಅವರು ಹೇಳಿದ್ದಾರೆ.

ಬಾಬ್ರಿ ಮಸೀದಿ ಧ್ವಂಸಕ್ಕೆ ಕಾರಣವಾದ ಕೋಮುವಾದಿಗಳ ಪ್ರಚಾರದ ಹಿನ್ನೆಲೆಯಲ್ಲಿ ಧರ್ಮವನ್ನು ರಾಜಕೀಯದಿಂದ, ಆಡಳಿತದಿಂದ ಪ್ರತ್ಯೇಕಿಸುವ ಹಾಗೂ ಚುನಾವಣಾ ಉದ್ದೇಶಗಳಿಗೆ ಧರ್ಮದ ದುರುಪಯೋಗವನ್ನು ತಡೆಯುವ ಶಾಸನವೊಂದು ಅಗತ್ಯ ಎಂದು ಬಹುಮಂದಿಗೆ ಅನಿಸಿತ್ತು. ನರಸಿಂಹರಾವ್ ಸರಕಾರವೂ ಕಳೆದ ಕೆಲವು ತಿಂಗಳ ಈ ಶಾಸನದ ಬಗ್ಗೆ ಹೇಳುತ್ತಿತ್ತು. ಸಿಪಿಐ(ಎಂ) ಇಂತಹ ಶಾಸನವನ್ನು ಬೆಂಬಲಿಸುವುದಾಗಿ ಹೇಳುತ್ತಾ, ಆದರೆ ಇದನ್ನು ಸಂಸತ್ತಿನಲ್ಲಿ ಮಂಡಿಸುವ ಮೊದಲು ಎಲ್ಲಾ ಪಕ್ಷಗಳೊಡನೆ ಸಮಾಲೋಚಿಸಿ ಕರಡನ್ನು ತಯಾರಿಸಬೇಕು, ಆ ಕರಡನ್ನು ನೋಡಿಯೇ ಪಕ್ಷ ತನ್ನ ಅಭಿಪ್ರಾಯ ನೀಡುವುದಾಗಿಯೂ ಹೇಳಿತ್ತು. ಆದರೆ ನರಸಿಂಹರಾವ್ ಸರಕಾರ ಪ್ರಸ್ತುತ ಮಳೆಗಾಲದ ಅಧಿವೇಶನದ ಹಿಂದಿನ ದಿನವಷ್ಟೇ ತರಾತುರಿಯಿಂದ ಸಮಾಲೋಚಿಸದೆ ಅದನ್ನು ತಯಾರಿಸಿ ಅಷ್ಟೇ ತರಾತುರಿಯಿಂದ ಸಿಪಿಐ(ಎಂ), ಸಿಪಿಐ ಮುಖಂಡರನ್ನು ಕರೆದು ತೋರಿಸಿ ತಕ್ಷಣ ಅಭಿಪ್ರಾಯ ಕೇಳಿತು. ಮರುದಿನ ಬರಲಿದ್ದ ಅವಿಶ್ವಾಸ ಠರಾವಿನ ಹಿನ್ನೆಲೆಯಲ್ಲಿ ಈ ತರಾತುರಿ ಎಂದು ಸ್ಪಷ್ಟವಾಗಿತ್ತು. ಆದ್ದರಿಂದ ಸಿಪಿಐ(ಎಂ) ಹಾಗೂ ಸಿಪಿಐ ಆ ಕರಡನ್ನು ಅಧ್ಯಯನ ಮಾಡಿದ ಮೇಲೆಯೇ ಅಭಿಪ್ರಾಯ ನೀಡುವುದಾಗಿ ಹೇಳಿದವು ಎಂದು ಕಾಂ. ಪ್ರಕಾಶ್ ಕಾರಾಟ್ ಸಿಪಿಐ(ಎಂ) ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಬರೆದ ಲೇಖನದಲ್ಲಿ ಹೇಳಿದ್ದಾರೆ. ಬಿಜೆಪಿ ಇದನ್ನು ವಿರೋಧಿಸುತ್ತದೆಂಬುದು ಎಲ್ಲರಿಗೂ ಗೊತ್ತಿತ್ತು. ನರಸಿಂಹರಾವ್ ಸರಕಾರ ಜಾತ್ಯಾತೀತ ವಿರೋಧ ಪಕ್ಷಗಳ ಸಹಕಾರವನ್ನು ಪಡೆಯಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರೆ ಅದನ್ನು ಜಂಟಿ ಸಂಸದೀಯ ಸಮಿತಿಗೆ ಕಳಿಸುವ ಅಗತ್ಯ ಬರುತ್ತಿರಲಿಲ್ಲ. ಬಿಜೆಪಿ ಈ ಮಸೂದೆಗಳು ಸರ್ವಾಧಿಕಾರಿ, ರಾಜಕೀಯ ಹಕ್ಕುಗಳನ್ನು ದಮನಿಸುವಂತದ್ದು ಎಂದೆಲ್ಲಾ ಹೇಳಿ ತನ್ನ ಜಾತ್ಯಾತೀತ-ವಿರೋಧಿ ನಿಲುವನ್ನು ಮರೆಮಾಚಿಕೊಳ್ಳಲು ಅವಕಾಶವಾಗುತ್ತಿರಲಿಲ್ಲ ಎಂದು ಕಾಂ. ಪ್ರಕಾಶ್ ಕಾರಾಟ್ ಈ ಲೇಖನದಲ್ಲಿ ವಿವರಿಸಿದ್ದಾರೆ.

ಒಟ್ಟಾರೆಯಾಗಿ ಈ ಮಸೂದೆಗಳು ಒಟ್ಟು ಸರಿಯಾದ ದಿಕ್ಕಿನಲ್ಲೇ ಇವೆ. ಆದರೆ ಕೆಲವು ಮುಖ್ಯ ಕೊರತೆಗಳಿದ್ದು ಅದು ಈ ಮಸೂದೆಗಳ ಮುಖ್ಯ ಉದ್ದೇಶವೇ ಈಡೇರದಂತೆ ಮಾಡಲು, ಸರ್ಕಾರ ಅವುಗಳ ದುರುಪಯೋಗ ಮಾಡಲು ಅವಕಾಶ ಮಾಡಿಕೊಡುತ್ತವೆ ಎಂದು ಈ ಕೊರತೆಗಳನ್ನು ಅವರು ವಿವರಿಸಿದ್ದಾರೆ. ಮುಖ್ಯವಾಗಿ ಈ ಮಸೂದೆಗಳು ಧರ್ಮಕ್ಕಷ್ಟೇ ಸೀಮಿತಗೊಳ್ಳದೆ ಭಾಷೆ, ಜಾತಿ, ಜನಾಂಗ ಪ್ರಶ್ನೆಗಳನ್ನು ಅನಗತ್ಯವಾಗಿ ಒಳಗೊಂಡಿವೆ. ಜಾತ್ಯತೀತತೆಯನ್ನು ಸರಿಯಾಗಿ ನಿರ್ವಚಿಸಿಲ್ಲ. ಕೋಮುವಾದಿ ಚಟುವಟಿಗಳ ಬಗ್ಗೆ ಸ್ಪಷ್ಟ ನಿರೂಪಣೆಯಿಲ್ಲ, ಪಕ್ಷಗಳನ್ನು ಧರ್ಮದ ದುರುಪಯೋಗದ ಆಧಾರದ ಮೇಲೆ ಅಮಾನ್ಯಗೊಳಿಸುವ ಕುರಿತಾದ ಕಲಮು ಅಸ್ಪಷ್ಟವಾಗಿದೆ ಎಂದು ಅವರು ಹೇಳಿದ್ದಾರೆ.

ಮೊದಲನೆಯದಾಗಿ, ಈ ಮಸೂದೆ "ಪ್ರಭುತ್ವ ಎಲ್ಲಾ ಧರ್ಮಗಳಿಗೆ ಸಮಾನ ಗೌರವ ನೀಡುತ್ತದೆ" ಎಂದಿದೆ. ಇದು ಸಾಲದು. ಪ್ರಭುತ್ವ ಯಾವುದೇ ಧರ್ಮವನ್ನು ಪ್ರತಿ ಪಾದಿಸುವುದಿಲ್ಲ, ಪ್ರೋತ್ಸಾಹಿಸುವುದಿಲ್ಲ, ಭಾರತ ವೈವಿಧ್ಯಮಯ ಸಂಯುಕ್ತ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕು. ಇಲ್ಲವಾದರೆ ಇದುವರೆಗಿನ ಸರಕಾರಗಳು ಮಾಡಿದಂತೆ ಪ್ರಭುತ್ವದ ವ್ಯವಹಾರಗಳಲ್ಲಿ ಮೂಗು ತೂರಿಸಲು ಎಲ್ಲಾ ಧರ್ಮಗಳಿಗೆ ಪ್ರೋತ್ಸಾಹ ಮುಂದುವರಿಯುತ್ತದೆ.

ಎರಡನೆಯದಾಗಿ, ಧರ್ಮದ ಹೆಸರಲ್ಲಿ ಎರಡು ಕೋಮುಗಳ ನಡುವೆ ದ್ವೇಷ ಹರಡುವ ಸಂಘಟನೆಗಳ ನಿಷೇಧಕ್ಕೆ ಸಂಬಂಧಪಟ್ಟ ಕಲಮಿನಲ್ಲಿ ಹೀಗೆ ದ್ವೇಷ ಹರಡುವ ಚಟುವಟಿಕೆಗಳು ಯಾವವು ಎಂದು ನಿರ್ದಿಷ್ಟವಾಗಿ ಪಟ್ಟಿಮಾಡಬೇಕು. ಇಂಡಿಯನ್ ಪೀನಲ್ ಕೋಡ್‌ನ 153(B) ಸೆಕ್ಷನ್‌ನಲ್ಲಿ ಇದು ಸ್ಪಷ್ಟವಾಗಿದೆ. ಇದನ್ನು ಸೇರಿಸಿ ಈ ತಿದ್ದುಪಡಿಯಲ್ಲಿರುವ ಅಸ್ಪಷ್ಟತೆಯನ್ನು ನಿವಾರಿಸಬೇಕು.

ಪುಟ 8ನೋಡಿ

ಆಗಸ್ಟ್ 5 - ವಿದ್ಯಾರ್ಥಿ ವಿಧಾನ ಸೌಧ ಚಲೋ

ಪ್ರತಿಭಟನೆಯ ಧೀರ ದನಿ

ಪ್ರೌಢ ಶಾಲ ಹಂತದಲ್ಲಿ ಹಿಂದಿ ಕಡ್ಡಾಯ ನೀತಿಯನ್ನು ವಿರೋಧಿಸಿ, ಏರಿಸಿರುವ ಪಿ. ಯು.ಸಿ. ಮತ್ತು ಪದವಿ ಶುಲ್ಕಗಳನ್ನು ಇಳಿಸಬೇಕೆಂದು ಒತ್ತಾಯಿಸಿ, ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸುಪ್ರಿಂ ಕೋರ್ಟ್ ತೀರ್ಪಿನ ಸ್ಫೂರ್ತಿಯನ್ನು ಪರಿಗಣಿಸಿ ಜಾರಿಗೊಳಿಸಬೇಕು, ಹಾಗೂ ಖಾಸಗೀ ಸಂಸ್ಥೆಗಳ ಮಾಲಿಕರು - ಮಠಾಧಿಪತಿಗಳ ಬೆದರಿಕೆ ಮೂರು ನಿಗದಿತ ಶುಲ್ಕಗಳನ್ನು ಮತ್ತೆ ಏರಿಸುವ ಯಾವ ಯೋಚನೆಯನ್ನು ಮಾಡಬಾರದೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ದಲಿತ ವಿದ್ಯಾರ್ಥಿ ಸಂಘಟನೆ (DSF) ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (AISF) ಸಂಘನೆಗಳು ಸೇರಿ ಆಗಸ್ಟ್ 5 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಿದರು.

ರಾಜ್ಯದ ಮೂಲೆ ಮೂಲೆಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳು ಮಧ್ಯಾಹ್ನ 12-0 0 ಕ್ಕೆ ಚಿಕ್ಕಲಾಲ್ ಬಾಗ್‌ನಿಂದ ಸಾಲುಸಾಲಾಗಿ ಹೊರಟರು. "ಅರಿವು ಕೆಲವರ ಸೊತ್ತೆನ್ನುವ ನೂತನ ಶಿಕ್ಷಣ ನೀತಿಗೆ ಧಿಕ್ಕಾರ" 'ಹಿಂದಿ ಹೇರಿಕೆಯನ್ನು ಸಹಿಸುವುದಿಲ್ಲ' 'ಕ್ಯಾಪಿಟೇಷನ್ ಡೊನೇಷನ್ ಪದ್ಧತಿಗೆ ಧಿಕ್ಕಾರ' ಮುಂತಾದ ಘೋಷಣೆಗಳು ಮೊಳಗಿಸಿದವು.

ಕಾಂ. ವೈ. ವೆಂಕಟೇಶ್ವರ ರಾವ್ ಅವರು ವಿದ್ಯಾರ್ಥಿ ಸಮಸ್ಯೆಗಳ ಆಧಾರದಲ್ಲಿ ಹೋರಾಟಕ್ಕಿಳಿದ ವಿದ್ಯಾರ್ಥಿಗಳನ್ನು ಎಸ್.ಎಫ್.ಐ ಕೇಂದ್ರ ಸಮಿತಿಯ ಪರವಾಗಿ ಅಭಿನಂದಿಸಿ, ಕರ್ನಾಟಕದಲ್ಲಿ ಶಿಕ್ಷಣ ವ್ಯಾಪಾರದ ವಸ್ತುವಾಗಿದೆ. ಪ್ರತಿಭೆಯನ್ನು ಮೂಲೆಗೆ ತಳ್ಳಿ ಹಣಕ್ಕೆ ವಿದ್ಯೆಯನ್ನು ಮಾರಲಾಗುತ್ತಿದೆ ಎಂದು ಮಠಾಧಿಪತಿಗಳ ಬ್ಲಾಕ್‌ಮೇಲ್ ಬಗ್ಗೆ ಸರಕಾರವನ್ನು ಅವರು ಎಚ್ಚರಿಸಿದರು.

ಶ್ರೀ ಲಕ್ಷ್ಮಿನಾರಾಯಣ ಅವರು ಮಾತನಾಡಿ 'ಹಿಂದಿ ಹೇರಿಕೆ' ನೀತಿ ದೇಶದ ಕೋಮು ಶಕ್ತಿಗಳ ಪಿತೂರಿ ಎಂದು ಖಂಡಿಸಿದರು.

ಕಾಂ. ಸೋನಿ ತಗಂ ಅವರು ಶಿಕ್ಷಣದ ಖಾಸಗೀಕರಣವನ್ನು ಖಂಡಿಸಿ ಶಿಕ್ಷಣ ಮೂಲಭೂತ ಹಕ್ಕಾಗಲೆಂದು ಒತ್ತಾಯಿಸಿದರು.

ಸರ್ವರಿಗೂ ಉದ್ಯೋಗ ಮತ್ತು ಶಿಕ್ಷಣವನ್ನು ನೀಡಿರುವ ಕ್ಯಾಬಾದಲ್ಲಿ 'ಕ್ಯಾಸ್ಟ್ರೋ ಜಿಂದಾಬಾದ್' ಎಂಬುದು ಕೇಳಿಬಂದರೆ ಇಲ್ಲಿ ಯಾವಾಗಲೂ 'ಧಿಕ್ಕಾರ'ಗಳೇ ಎಂದ ಕಾಂ. ಸೂರ್ಯನಾರಾಯಣ ರಾವ್ ಅವರು ವಿದ್ಯಾರ್ಥಿ ಹೋರಾಟಕ್ಕೆ ಕಾರ್ಮಿಕರ ಬೆಂಬಲ ಸೂಚಿಸಿದರು.

ವಿದ್ಯಾರ್ಥಿ ಸಂಘಟನೆಗಳಿಂದ ಜೈಲ್ ಭರೋ ಎಚ್ಚರಿಕೆ:

ತಮ್ಮ ಬೇಡಿಕೆಗಳನ್ನು ಆಗಸ್ಟ್ 18ರ ಒಳಗೆ ಈಡೇರಿಸದಿದ್ದಲ್ಲಿ ದಿನಾಂಕ 19-8-1993 ರಂದು ವಿದ್ಯಾರ್ಥಿಗಳು 'ಜೈಲ್‌ಭರೋ' ಕಾರ್ಯಕ್ರಮ ನಡೆಸುವ ಎಚ್ಚರಿಕೆಯ ನಿರ್ಣಯವನ್ನು ಕೈಗೊಳ್ಳಲಾಯಿತು. ನಿರ್ಣಯವನ್ನು ಕಾಂ. ಪ್ರಕಾಶ್ ಮಂಡಿಸಿದರು.

ನಗರದ ಕಬ್ಬನ್ ಪಾರ್ಕಿನಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ಎಸ್.ಎಫ್.ಐ. ಅಖಿಲ ಬಾರತ ಅಧ್ಯಕ್ಷರಾದ ವೈ. ವೆಂಕಟೇಶ್ವರ್, ಮತ್ತು ಎ.ಐ.ಎಸ್.ಎಫ್ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸೋನಿ ತಂಗಮಂ ಹಾಗೂ ಎಸ್.ಎಫ್ ಐ ರಾಜ್ಯಾಧ್ಯಕ್ಷರಾದ ಜೆ.ಸಿ. ಬಯ್ಯಾರೆಡ್ಡಿ, ಡಿ.ಎಸ್.ಎಫ್ ರಾಜ್ಯ ಸಂಘಟನಾ ಸಂಚಾಲಕ ಲಕ್ಷ್ಮಿನಾರಾಯಣ ಎ.ಐ.ಎಸ್.ಎಫ್ ರಾಜ್ಯ ಕಾರ್ಯದರ್ಶಿ ಚಿ ಅಹುಜದ್ ಮುಂತಾದವರು ಮಾತನಾಡಿದರು.

ಹೋರಾಟಕ್ಕೆ ಶುಭ ಕೋರಿ, ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್, ಎ.ಐ.ಟಿ.ಯು.ಸಿ. ರಾಜ್ಯ ಪ್ರಧಾನ ಕಾರ್ಯದರ್ಶಿ ಅನಂತ ಸುಬ್ಬರಾವ್, ಡಿ.ಎಸ್.ಎಫ್ ರಾಜ್ಯ ಸಂಘಟನಾ ಡಿ.ಜಿ.ಸಾಗಾರ್ ಮಾತನಾಡಿದರು.

ಈ ಕಾರ್ಯಕ್ರಮವನ್ನು ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಶಾಂತಾರಾಮ್ ನಾಯಕ್, ಡಿ.ಎಸ್.ಎಫ್. ಸಂಚಾಲಕ ದೇವೇಂದ್ರ ಹೆಗ್ಗಡೆ ಹಾಗೂ ಟಿ. ಶ್ರೀನಿವಾಸ್‌ರವರ ಅಧ್ಯಕ್ಷೀಯ ಮಂಡಲಿ ನಿರ್ವಹಿಸಿಕೊಟ್ಟಿತು.

ಸಭೆ ಪ್ರಾರಂಭದಲ್ಲಿ ಎಂ.ಆರ್. ಬೇರಿ ಸ್ವಾಗತಿಸಿದರು. ಕೊನೆಯಲ್ಲಿ ಸೌಕತ್‌ಅಲಿಯವರ ವಂದನಾರ್ಪಣೆಯೊಂದಿಗೆ ಬಹಿರಂಗ ಸಭೆ ಮುಕ್ತಾಯವಾಯಿತು. ಮನವಿಯನ್ನು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಎಸ್.ಎಂ. ಯಾಹ್ಯರವರಿಗೆ 3 ಸಂಘಟನೆಯ ನಿಯೋಗ ಭೇಟಿ ಮಾಡಿ ಅರ್ಪಿಸಿತು.

ವಿದ್ಯುತ್ ದರ ಏರಿಕೆ

ರಾಜ್ಯ ಸಮಿತಿ ಖಂಡನೆ

ಯಾವುದೇ ಮುನ್ಸೂಚನೆಯಿಲ್ಲದೆ ದಿಢೀರನೆ ರಾಜ್ಯ ವಿದ್ಯುತ್ ಮಂಡಳಿ ಸರ್ವ ಗೃಹ (ಎಇಹೆಚ್) ಮನೆ ದೀಪ ಹಾಗೂ ಕೈಗಾರಿಕಾ ಬಳಕೆದಾರರ ಮೇಲೆ ಆಗಸ್ಟ್ ಒಂದರಿಂದ ಜಾರಿಯಾಗುವಂತೆ ವಿದ್ಯುತ್ ದರ ಹೆಚ್ಚಿಸಿರುವುದನ್ನು ಜುಲೈ 31 ಆಗಸ್ಟ್ 1 ರಂದು ಕೋಲಾರ ಜಿಲ್ಲೆಯ ಮಳ್ಳೂರಿನಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ವಿಸ್ತೃತ ಸಭೆ ಬಲವಾಗಿ ಖಂಡಿಸಿದೆ. ಸರಿಯಾಗಿ ವಿದ್ಯುತ್ ಸರಬರಾಜಾಗದಿರುವುದರಿಂದ ಸಾರ್ವಜನಿಕರಿಗೂ, ವಿದ್ಯಾರ್ಥಿಗಳಿಗೆ ಅನಾನುಕೂಲತೆಯಾಗುವುದು ಮಾತ್ರವಲ್ಲ, ರಾಜ್ಯದ ಕೈಗಾರಿಕೆಗಳೆಲ್ಲ ಸರಿಯಾದ ವಿದ್ಯುತ್ ಪೂರೈಕೆಯಿಲ್ಲದೆ ಅಪಾರ ನಷ್ಟಕ್ಕೆ ಒಳಗಾಗುತ್ತಿವೆ. ಆ ಕಾರಣದಿಂದಾಗಿಯೇ ಹಲವಾರು ಕೈಗಾರಿಕೋದ್ಯಮಿಗಳು ರಾಜ್ಯ ಬಿಟ್ಟು ಬೇರೆ ರಾಜ್ಯಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾರಂಭಿಸಿದ್ದಾರೆ. ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ರೈತರ ಪಂಪ್ ಸೆಟ್‌ಗಳು ಸುಟ್ಟು ಹೋಗುತ್ತಿವೆ. ಬೆಳೆಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಹೀಗೆ ಹಲವಾರು ದೋಷಗಳಿಂದ ತುಂಬಿದ ರಾಜ್ಯದ ವಿದ್ಯುತ್ ಮಂಡಳಿ ದರ ಏರಿಕೆಯನ್ನು ಕೂಡಲೇ ವಾಪಸ್ ಪಡೆಯಬೇಕೆಂದೂ, ವಿದ್ಯುತ್ ಸರಬರಾಜಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಹಾಗೂ ಸೋರುವಿಕೆಯನ್ನು ನಿಲ್ಲಿಸಿ ಸಾರ್ವಜನಿಕರಿಗೂ ಕೈಗಾರಿಕೋದ್ಯಮಿಗಳಿಗೂ ಸರಿಯಾಗಿ ವಿದ್ಯುತ್ ವಿತರಣೆಯಾಗುವಂತೆ ಕ್ರಮ ಕೈಗೊಳ್ಳಬೇಕೆಂದೂ ಸಿಪಿಐ(ಎಂ) ರಾಜ್ಯ ಸಮಿತಿ ಸರಕಾರವನ್ನು ಒತ್ತಾಯಿಸಿದೆ.

ಪೋಲೀಸರ ಅತ್ಯಾಚಾರದ ಖಂಡನೆ

"ಬೆಂಗಳೂರು ಗ್ರಾಮಾಂತರ ಪ್ರದೇಶದ ಪೋಲೀಸರು ಕುಂಬಳಗೋಡು ಕೈಗಾರಿಕಾ ಪ್ರದೇಶದ 'ಫ್ರುಡೆಟೆಕ್ ಇಂಡಸ್ಟ್ರೀಸ್' ಮಾಲಿಕರೊಡನೆ ಶಾಮೀಲಾಗಿ ಜುಲೈ 30, 1993 ರಂದು ಸಂಜೆ ಕಾರ್ಖಾನೆಯ ದ್ವಾರದ ಬಳಿ ಶಾಂತ ರೀತಿಯಿಂದ ಪ್ರದರ್ಶನದ ಮೂಲಕ ಕಿತ್ತು ಹಾಕಿದ ಆರು ಮಂದಿ ಖಾಯಂ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ ಅವರ ಜಾಗದಲ್ಲಿ ಕಾಂಟ್ರಾಕ್ಟ್ ಕೆಲಸಗಾರರನ್ನು ನೇಮಿಸಬಾರದೆಂದೂ ಒತ್ತಾಯಿಸುತ್ತಿದ್ದ ಸಿಐಟಿಯು ಕಾರ್ಮಿಕರ ಮೇಲೆ ಹಠಾತ್ತನೆ ಲಾಠಿ ಚಾರ್ಜ್ ಮಾಡಿ, ನಂತರ ಗೇರುಪಾಳ್ಯದ ಗ್ರಾಮಸ್ಥರ ಮನೆಗಳಿಗೆ ನುಗ್ಗಿ ಹಲ್ಲೆ ನಡೆಸಿ, ಮೂರು ಮಂದಿ ಮಹಿಳೆಯರೂ ಸೇರಿ ಒಟ್ಟು 14 ಮಂದಿ ಕಾರ್ಮಿಕರನ್ನು ಮತ್ತು ಗ್ರಾಮಸ್ಥರನ್ನು ದಸ್ತಗಿರಿ ಮಾಡಿ ಬಿಡದಿ ಪೋಲೀಸ್ ಸ್ಟೇಷನ್ನಿನಲ್ಲಿ ರಾತ್ರಿ ಚಿತ್ರಹಿಂಸೆ ಕೊಟ್ಟು, ಸಿಐಟಿಯು ನೇತೃತ್ವದಲ್ಲಿ ನಡೆಯುತ್ತಿರುವ ಐಕ್ಯ ಹೋರಾಟವನ್ನು ಹತ್ತಿಕ್ಕಲು ಮತ್ತು ಆ ಪ್ರದೇಶದಲ್ಲಿ ಅತೀವ ಭಯದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವುದುನ್ನು ಈ ಸಭೆಯು ತೀವ್ರವಾಗಿ ಖಂಡಿಸಿದೆ.

ಹಾಗೆಯೇ ಜೈ ಹಿಂದ್ ಗ್ರಾನೈಟ್ ವರ್ಕ್ಸ್ ಕಳೆದೆರಡು ತಿಂಗಳಿಂದ ಮುಚ್ಚಲ್ಪಟ್ಟಿದ್ದು, ಕಾರ್ಮಿಕರು ಅದರ ಪುನರಾರಂಭಕ್ಕಾಗಿ ಧರಣಿ ಮಾಡುತ್ತಿರುವಾಗ ಅವರು ಹಾಕಿಕೊಂಡ ಶೆಡ್ಡಿಗೆ ಬೆಂಕಿ ಹಚ್ಚಲಾಗಿದೆ ಮಾತ್ರವಲ್ಲ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದನ್ನು ಈ ಸಭೆ ಖಂಡಿಸಿದೆ.

ಕಾನೂನಿನ ವಿರುದ್ಧ ಕಾಂಟ್ರಾಕ್ಟ್ ಕಾರ್ಮಿಕರನ್ನು ಕೆಲಸ ಮಾಡಿಸಿಕೊಳ್ಳಲು ಫ್ರುಡೆಟೆಕ್ ಮಾಲೀಕರಿಗೆ ಕೊಡುತ್ತಿರುವ ಪೋಲೀಸ್ ಸಹಾಯವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ, ಈ ದೌರ್ಜನ್ಯವೆಸಗಿದ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಿ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಭೆಯು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

"ಗೊಂದಲ ಉಂಟುಮಾಡಿದ ಪುಸ್ತಕ"

ಇದು ಜುಲೈ ೩ರ "ಸಂಯುಕ್ತ ಕರ್ನಾಟಕ"ದಲ್ಲಿ ಒಂದು ಸುದ್ದಿಯ ತಲೆಬರಹ. ಕಾಂಗ್ರೆಸ್(ಐ)ನವರು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ತಮ್ಮ 'ಸಾಧನಾ ಸಮಾವೇಶ ' ನಡೆಸಿದಾಗ ಒಂದು ಪುಸ್ತಕ ಬಗ್ಗೆ ಉಂಟಾದ ಗೊಂದಲ ಕೋಮುವಾದದ ವಿರುದ್ಧ ಹೋರಾಟದಲ್ಲಿ ಕಾಂಗ್ರೆಸ್ಸಿಗರಲ್ಲಿ ಇರುವ ಗೊಂದಲದ ಪ್ರತೀಕವೆಂದರೆ ತಪ್ಪಾಗುತ್ತದೆಯೇ? ಈ ಪುಸ್ತಕ ಉತ್ತರ ಕನ್ನಡ ಜಿಲ್ಲೆಯ 'ಚಿಂತನ' ವೇದಿಕೆಯವರು ಪ್ರಕಟಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರ **'What is this Hindu Rashtra'** ದ ಕನ್ನಡ ಅನುವಾದ (ಇದು ನಮ್ಮ 'ಐಕ್ಯರಂಗ ಅಕ್ಷರವಿನ್ಯಾಸ'ದಲ್ಲಿ ಮುದ್ರಣಗೊಂಡ ಪುಸ್ತಕ) ಈ ಗೊಂದಲ ಏನು? ಆ ಜಿಲ್ಲೆಯ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನೇ ನೋಡಿ.

ಸಭೆಗೆ ಮೊದಲು ಮತ್ತು ಸಭೆ ನಡೆಯುತ್ತಿರುವಾಗ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಜಿಲ್ಲೆಯ ಚಿಂತನ ವೇದಿಕೆ ಪ್ರಕಟಿಸಿದ ನೂರಾರು ಪುಸ್ತಕಗಳು ಮಾರಲ್ಪಟ್ಟವು. ಎರಡು ಮೂರು ರೂಪಾಯಿಯಗಳ ಬೆಲೆಯ ಈ ಪುಸ್ತಕಗಳನ್ನು ವ್ಯಕ್ತಿಯೊಬ್ಬರು ಎಲ್ಲರಿಗೂ ತೋರಿಸಿ ಮಾರುತ್ತಿದ್ದರು. ಒಬ್ಬೊಬ್ಬರು ಮೂರು-ನಾಲ್ಕರಂತೆ ನೂರಾರು ಪುಸ್ತಕಗಳು ಅಲ್ಲಿನ ಹಲವರ ಕೈ ಸೇರಿದವು.

ನಂತರ ಸಭೆಯಲ್ಲಿ ಶಿರಸಿ ತಾಲೂಕಾ ಕಾಂಗ್ರೆಸ್ ಅಧ್ಯಕ್ಷ ಎಂ.ಎನ್. ಭಟ್ಟ ಈ ಪುಸ್ತಕಗಳ ಬಗ್ಗೆ ಕೆಂಡಕಾರಿದರು. "ಈ ಪುಸ್ತಕಗಳಲ್ಲಿ ಪಕ್ಷದ ಜನಪ್ರಿಯತೆ ಕುಗ್ಗಿಸುವ ವಿಚಾರಗಳು ತುಂಬಿಕೊಂಡಿವೆ. ಇದನ್ನು ಇಲ್ಲೊಬ್ಬರು ಮಾರುತ್ತಿದ್ದಾರೆ. ಇದು ತೀರಾ ಖಂಡನೀಯ" ಎಂದಾಗ ಹಲವರು ಎದ್ದು ನಿಂತು ಧ್ವನಿಗೂಡಿಸಿದರು. ಪುಸ್ತಕ ಮಾರುತ್ತಿದ್ದವರನ್ನು ಸಭೆಯಿಂದ ಹೊರಗೂ ಕಳಿಸಿದರು.

ಆದರೆ ಸಭೆಯಲ್ಲಿ ನಂತರ ಮಾತನಾಡಿದ ಹಲವರು ಆ ಪುಸ್ತಕಗಳಲಿದ್ದ "ಸುಳ್ಳುಗಳ"ನ್ನು ಹಲವು ವಿಚಾರಗಳಲ್ಲಿ ತಮ್ಮ ಮಾತಿನಲ್ಲಿ ಸಾಕಷ್ಟು ಬಳಸಿಕೊಂಡರು. ಏಕೆಂದರೆ ಆ ಪುಸ್ತಕದ ಒಳಗೆ ಆದಾಗಲೇ ಅವರೆಲ್ಲ ಕಣ್ಣು ಹಾಯಿಸಿದ್ದರು. ಪುಸ್ತಕದಲ್ಲಿದ್ದ ವಿಷಯಗಳು ಕೋಮುಸೌಹಾರ್ದತಾ ಭಾಷಣಕ್ಕೆ ಗ್ರಾಸ ಒದಗಿಸುವಂತಿದ್ದವು!

ಇದಕ್ಕೂ ಕುತೂಹಲವೆಂದರೆ ರಾಣೆ ಈ ಪುಸ್ತಕಗಳನ್ನು ಹೊಗಳಿದರು ಅಷ್ಟೇ ಅಲ್ಲ, ತಮ್ಮ ಮಾತಿನ ಸಮರ್ಥನೆಗಾಗಿ ಆ ಪುಸ್ತಕಗಳಲ್ಲಿದ್ದ ಅಂಕಿ-ಅಂಶಗಳನ್ನು, ಹಲವು ವಾಕ್ಯಗಳನ್ನು ಸಭೆಯ ಮುಂದೆ ಓದಿದರು!!

"ಇದರಲ್ಲಿ ಒಂದು ಪುಸ್ತಕ ಮಾತ್ರ ನಮ್ಮ ವಿರುದ್ಧ ಇದೆ. ಉಳಿದೆಲ್ಲ ನಮ್ಮ ಅನುಕೂಲವಾಗಿಗೇ ಇದೆ. ಪುಸ್ತಕಗಳ್ಲಲಿ ನಿಜ ಸಂಗತಿಗಳನ್ನು ಹೇಳಲಾಗಿದೆ. ಎಡಪಂಥೀಯ ಜನರ ಪುಸ್ತಕ ಇದು ಜಾತಿವಾದಕ್ಕೆ ಪುಷ್ಠಿ ಕೊಟ್ಟಿಲ್ಲ....." ಓಗೆ ಹೇಳುತ್ತಾ ರಾಣೆ ಪುಸ್ತಕಗಳಿಗೆ 'ಪ್ರಮಾಣ ಪತ್ರ' ಕೊಟ್ಟರು.

"ಎಂ.ಎನ್. ಭಟ್ಟ ಹಾಗೆ ಪುಸ್ತಕಗಳನ್ನು ವಿರೋಧಿಸಬಾರದಿತ್ತು" ಈ ಹಲವರು ಧ್ವನಿಗೂಡಿಸಿದರು.

"ಧ್ಯೇಯ ನಿಷ್ಟ ಪತ್ರಕರ್ತ"

"ಪುಸ್ತಕ ಓದದೇ ಮಾಡಿದ ಪ್ರಮಾದ"

"ಏನಿದು ಈ ಒಂದೂ ರಾಷ್ಟ್ರ?" ಈ ತಲೆ ಬರಹದ ಸಣ್ಣ ಪುಸ್ತಿಕೆಯ ಒಳಗೆ ಏನು ಬರೆದಿದೆ ಎಂದು ಓದದೇ ಕೆಲವು ಕಾಂಗ್ರೆಸ್ಸಿಗರು ಪುಸ್ತಕಗಳನ್ನು ಮಾರುತ್ತಿರುವ ಸಿ.ಆರ್. ಶ್ಯಾನಭಾಗ್ ಅವರನ್ನು ವಿಶ್ವ ಒಂದೂಪರಿಷತ್‌ನವನೆಂದು ತಿಳಿದು ಕಾಂಗ್ರೆಸ್ ಸಭೆಯಿಂದ ಹೊರ ಹೋಗಲು ಹೇಳಿದ ಅನುಚಿತ ಪ್ರಸಂಗ ನಿನ್ನೆ ನಗರ ಕಾಂಗ್ರೆಸ್ ಕೋಮು ಸೌಹಾರ್ಧ ಸಭೆಯಲ್ಲಿ ನಡೆಯಿತು.

"ಏನಿದು ಈ ಒಂದೂರಾಷ್ಟ್ರ" ಎಂಬ ಈ ಪುಸ್ತಕ ಸಿಪಿಐ(ಎಂ)ನವರು ಹೊರಡಿಸಿದ ಆರ್.ಎಸ್.ಎಸ್.ನ ಗೋಲ್ವಾಲ್ಕರ್ ಅವರ ತಪ್ಪುಗಳನ್ನು ವಿಶ್ಲೇಷಿಸುವ ಒಂದು ಸಂಶೋಧನಾತ್ಮಕ ಪುಸ್ತಕವಾಗಿದೆ. ಸಚಿವ ರಾಣೆ ನಂತರ ಭಾಷಣದಲ್ಲಿ ಈ ಪುಸ್ತಕದ ಮಹತ್ವವನ್ನು ತಮ್ಮ ಕಾರ್ಯಕರ್ತರಿಗೆ ವಿವರಿಸಿದಾಗ ತಾವು ಮಾಡಿದ ತಪ್ಪಿನ ಅರಿವು ಕಾಂಗ್ರೆನವರಿಗೆ ಗೊತ್ತಾಯಿತು.

"ಜನಮಾಧ್ಯಮ"

"ಕಾಂಗ್ರೈ ನಾಮಾಂಕಿತ ಚಡ್ಡಿಗಳು"

ಕಾಂಗ್ರೈ ನಾಮಾಂಕಿತ ಬಿ.ಜೆ.ಪಿ.ಗಳ ಬಗ್ಗೆ ನಿಮಗೆ ಗೊತ್ತಿದೆಯಾ? ಕೆಲವರು ಯಾವುದೇ ಪಕ್ಷದ ಕಾರ್ಯಕರ್ತರಾಗಿದ್ದರೂ ಬುದ್ಧಿ ಭ್ರಮಣೆಯಿಂದ, ಧರ್ಮಾಂಧತೆಯ ಅಮಲಿನಿಂದ ಚಡ್ಡಿಗಳಾಗಿ ಬಿಡುತ್ತಾರೆ. ಇದಕ್ಕೆ ನಿದರ್ಶನವಾಗಿ ಒಂದು ಸಂಗತಿಯನ್ನು ಇಲ್ಲಿ ದಾಖಲಿಸಲಾಗಿದೆ.

ನಿನ್ನೆ ನಗರದಲ್ಲಿ ನಡೆದ ಕೋಮು ಸೌಹಾರ್ದ ಸಭೆಯಲ್ಲಿ ಕೋಮು ಸೌಹಾರ್ದಕ್ಕೆ ಸಂಬಂಧ ಪಟ್ಟ ಪುಸ್ತಕವನ್ನು ಒಬ್ಬರು ವಿತರಣೆ ಮಾಡುತ್ತಿದ್ದರು. ಆಗ ತಾಲೂಕು ಕಾಂಗ್ರೈ ಅಧ್ಯಕ್ಷ ಎಂ. ಎನ್. ಭಟ್ಟ ಮತ್ತು ಆರ್.ಟಿ.ಓ. ಏಜೆಂಟ್ ಎಂದು ಹೇಳಿಕೊಳ್ಳುವ ಮೋಹನ ನಾಯ್ಕ ಕ್ಯಾತೆ ತೆಗೆದು ಪುಸ್ತಕ ವಿತರಿಸುತ್ತಿದ್ದವರನ್ನು ಹೊರ ಹಾಕಿಸುವಲ್ಲಿ ಸಫಲರಾದರು.

ಆದರೆ ಮುಂದೆ ಸಚಿವ ರಾಣೆಯವರು ಮಾತನಾಡುವಾಗ ಅದೇ ಪುಸ್ತಕವನ್ನು ಉದಾಹರಿಸಿ ಬಿಜೆಪಿಯರ ಮೊಗಳೆಯನ್ನು ಬಿಚ್ಚಿಟ್ಟಾಗ ಕಾಂಗ್ರೈ ನಾಮಾಂಕಿತ ಚಡ್ಡಿಗಳು ಹರಳೆಣ್ಣೆ ಕುಡಿದವರಂತಾಗಿದ್ದರು.

"ಮುನ್ನಡೆ"

ಹೊಸ ಕೃಷಿ ನೀತಿ ಬಗ್ಗೆ ವಿಚಾರ ಸಂಕಿರಣ

ಅಖಿಲ ಭಾರತ ಕಿಸಾನ್ ಸಭಾ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಸಹಕಾರದೊಂದಿಗೆ ಸೆಪ್ಟೆಂಬರ್ 25-26 ರಂದು ಒಂದು ವಿಚಾರಸಂಕಿರಣ ಸಂಘಟಿಸಲು ನಿರ್ಧರಿಸಿದೆ. ವಿಚಾರಸಂಕಿರಣದ ವಿಷಯಗಳು 1) ಹೊಸ ಆರ್ಥಿಕ ನೀತಿ ಹಾಗೂ ಕೃಷಿಯ ಮೇಲೆ ಅದರ ಪರಿಣಾಮಗಳು 2) ಡಂಕೆಲ್ ಕರಡು ಹಾಗೂ 3) ಹೊಸ ಕರಡು ಕೃಷಿ ನೀತಿ ನಿರ್ಣಯ. ಜುಲೈ 26 ರಂದು ನವದೆಹಲಿಯಲ್ಲಿ ನಡೆದ ಎ.ಐ.ಕೆ.ಎಸ್.ನ ಪದಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

ಏಪ್ರಿಲ್ 15 ರಂದು ದೆಹಲಿಯಲ್ಲಿ ರಚನೆಗೊಂಡ ಸಾಮೂಹಿಕ ಸಂಘಟನೆಗಳ ವೇದಿಕೆಯೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡು ಅದನ್ನು ಬಲಪಡಿಸಿ, ಸಕ್ರಿಯಗೊಳಿಸಲು ಗಂಭೀರ ಪ್ರಯತ್ನ ನಡೆಸಬೇಕೆಂದು ಸಭೆ ಎ.ಐ.ಕೆ.ಎಸ್. ಕಾರ್ಯಕರ್ತರಿಗೆ ಕರೆ ನೀಡಿತು. ಬಿಹಾರದಲ್ಲಿ ಭೂ ಹೋರಾಟದಲ್ಲಿ ತೊಡಗಿರುವ ಸಂಗಾತಿಗಳನ್ನು ಅಭಿನಂದಿಸಿದ ಸಭೆ ಅದನ್ನು ವಿಸ್ತರಿಸಲು ನೆರವು ನೀಡಲು ನಿರ್ಧರಿಸಿತು. ಅದೇ ರೀತಿ ಭೂ ಹೋರಾಟ ನಡೆಸುತ್ತಿರುವ ಆಂಧ್ರಪ್ರದೇಶ ಮತ್ತಿತರ ಕಡೆಯೂ ನೆರವು ನೀಡಲು ನಿರ್ಧರಿಸಿತು.

ಪೂರ್ವ ಯುರೋಪಿನ ದೇಶಗಳು ಹಾಗೂ ರಶ್ಯಾದ ರಫ್ತು ಮಾರುಕಟ್ಟೆ ತಪ್ಪಿದುದರಿಂದ ಹಲವು ಹಣದ ಬೆಳೆಗಳ ಬೆಲೆ ಇಳಿತವಾಗಿರುವುದರ ಬಗ್ಗೆ ಕೇಂದ್ರ ಸರಕಾರದ ಗಮನಕ್ಕೆ ತರಲು ಸಭೆ ನಿರ್ಧರಿಸಿತು.

ಹಲವುರಾಜ್ಯಗಳಲ್ಲಿ ಗಂಭೀರ ಪ್ರವಾಸ ಪರಿಸ್ಥಿತಿಯ ಬಗ್ಗೆ ಗಮನಿಸಿದ ಸಭೆ ತಕ್ಷಣ ಕೇಂದ್ರ ಸರಕಾರ ಪರಿಹಾರ ತಲುಪಿಸಬೇಕು. ಇಂತಹ ನೈಸರ್ಗಿಕ ಆಘಾತುತಗಳಿಂದ ಎಲ್ಲಾ ಪ್ರದೇಶಗಳಲ್ಲಿ ಎಲ್ಲಾ ರೀತಿಯ ಬೆಳೆಗಳಿಗೆ ಅನ್ವಯವಾಗುವಂತೆ ಒಂದು ಸಮಗ್ರ ಬೆಳೆ ವಿಮಾ ಯೋಜನೆಯನ್ನು ರೂಪಿಸಬೇಕೆಂದು ಎ.ಐ.ಕೆ.ಎಸ್. ಒತ್ತಾಯಿಸಿದೆ.

ಇ. ಬಾಲಾನಂದನ್ ರಾಜ್ಯಸಭೆಯ ಸಿಪಿಐ(ಎಂ) ಮುಖಂಡ

ರಾಜ್ಯಸಭೆಯಲ್ಲಿ ಸದಸ್ಯರ ಸಿಪಿಐ(ಎಂ) ಗುಂಪು ಜುಲೈ 26 ರಂದು ಸಭೆ ಸೇರಿ ಕಾಂ. ಇ. ಬಾಲಾನಂದನ್‌ರನ್ನು ಮುಖಂಡರನ್ನಾಗಿ ಹಾಗೂ ಕಾಂ. ಸುಕೋಮಲ್ ಸೆನ್‌ರವರನ್ನು ಉಪಮುಖಂಡರಾಗಿ ಆರಿಸಿತು. ಇದುವರೆಗೆ ಈ ಎರಡು ಸ್ಥಾನಗಳಲ್ಲಿದ್ದ ಸಮರ್ ಮುಖರ್ಜಿ ಹಾಗೂ ದಿಪೇನ್ ಘೋಷ್ ರವರು ರಾಜ್ಯ ಸಭೆ ಅವಧಿ ಮುಗಿದು ನಿವೃತ್ತರಾಗಿರುವುದರಿಂದ ಈ ಚುನಾವಣೆ ನಡೆಯಿತು. ಕಾಂ. ಎಂ.ಎ. ಬೇಬಿ ಸಿಪಿಐ(ಎಂ) ಗುಂಪಿನ ಮುಖ್ಯ ಸಚೇತಕನಾಗಿ ಚುನಾಯಿತರಾಗಿದ್ದಾರೆ.

"ರಾಜ್ಯ ಕಾರ್ಮಿಕ ಮಂತ್ರಿಗಳ ಸಮ್ಮೇಳನ ಕರೆಯಿರಿ"

ಪ.ಬಂಗಾಳ ಕಾರ್ಮಿಕ ಮಂತ್ರಿ

ಸಂಸತ್ತಿನ ಕೈಗಾರಿಕಾ ವಿವಾದ ಮಸೂದೆಯನ್ನು ಮಂಡಿಸುವ ಮೊದಲು ರಾಜ್ಯ ಕಾರ್ಮಿಕ ಮಂತ್ರಿಗಳ ಒಂದು ಸಮ್ಮೇಳನವನ್ನು ಕರೆಯಿರಿ ಎಂದು ಪಶ್ಚಿಮಬಂಗಾಳ ಸರಕಾರ ಕೇಂದ್ರ ಸರಕಾರವನ್ನು ಕೇಳಿದೆ. ಈ ಬಗ್ಗೆ ಪ. ಬಂಗಾಳ ಕಾರ್ಮಿಕ ಮಂತ್ರಿ ಶಾಂತಿ ಘಟಕ್ ಕೇಂದ್ರ ಕಾರ್ಮಿಕ ಮಂತ್ರಿ ಸಂಗ್ಮಾರಿಗೆ ಪತ್ರ ಬರೆದಿದ್ದಾರೆ.

ಕೇಂದ್ರ ಸರ್ಕಾರ ತರಬಯಸುತ್ತಿರುವ ಮಸೂದೆ 1947ರ ಕೈಗಾರಿಕಾ ವಿವಾದ ಕಾನೂನಿನ 5-ಬಿ ಕಲಮನ್ನು ರದ್ದು ಮಾಡಿ ಕೈಗಾರಿಕಾ ಘಟಕಗಳ ಮ್ಯಾನೇಜುಮೆಂಟು ರಾಜ್ಯ ಸರಕಾರಗಳ ಪೂರ್ವಾನುಮತಿ ಇಲ್ಲದೆ ಕಾರ್ಖಾನೆಗಳನ್ನು ಮುಚ್ಚಲು ಅವಕಾಶ ನೀಡಬಯಸುತ್ತದೆ.

ರಾಮಸ್ವಾಮಿ ರಾಜೀನಾಮೆ ಮುಗಿಯದ ನಾಟಕ

ದೇಶದ ನ್ಯಾಯಾಂಗ ವ್ಯವಸ್ಥೆಯ ಕಪ್ಪುಚುಕ್ಕೆಯಾಗಿ ಕಾಂಗೈನ ನೀಚತನದ ಕರಾಮತ್ತಿನಿಂದಾಗಿ ಲೋಕಸಭೆಯ ವಾಗ್ದಂಡನೆಯಿಂದ ಪಾರಾದ ಜಸ್ಟಿಸ್ (?) ರಾಮಸ್ವಾಮಿ ತಕ್ಷಣವೇ ರಾಜಿನಾಮೆ ಪ್ರಕಟಿಸಿದ್ದರು. ತಾನು ನಿರ್ದೋಷಿ ಎಂದು ಸಾಬೀತಾಗಿದೆ ಎಂದು ಕೊಚ್ಚಿಕೊಂಡ ರಾಮಸ್ವಾಮಿ ವಿಷಯ ಲೋಕಸಭೆಯಲ್ಲಿ ಪ್ರಸ್ತಾಪವಾಗುವ ಮುನ್ನ ನಟಿ ಶ್ರೀದೇವಿಯೇ ದೆಹಲಿಯಲ್ಲಿ ಬಿಡಾರ ಹೂಡಿ ಕೈವಾಡ ನಡೆಸಿದ್ದು ಇನ್ನೂ ಜನರ ನೆನಪಿನಿಂದ ಮರೆಯಾಗಿಲ್ಲ.

ತಾನೂ ಸಾಚಾ ಎಂದು ಬಡಾಯಿ ಕೊಚ್ಚಿಕೊಂಡು ರಾಜಿನಾಮೆ ಪ್ರಕಟಿಸಿದ ರಾಮಸ್ವಾಮಿ ನಿಜಕ್ಕೂ ರಾಜಿನಾಮೆ ಕೊಟ್ಟಿದ್ದಾರೆಯೆ? ಎಂಬುದು ಈಗ ದೊಡ್ಡ ವಿವಾದವಾಗಿದೆ. ಕಾಂಗೈ ನಡೆಸುವ ದರ್ಬಾರಿನತ್ತ ಮತ್ತೆ ಮತ್ತೆ ಈ ಪ್ರಕರಣ ಬೊಟ್ಟು ಮಾಡಿ ತೋರಿಸುತ್ತಿದೆ.

ಇಡೀ ರಾಜಿನಾಮೆ ಪ್ರಕರಣ ಒಂದು ದೊಡ್ಡ ನಾಟಕ ಎಂಬುದನ್ನು ಈಗ ಪತ್ರಿಕೆಗಳು ಬಯಲಿಗೆಳೆದಿವೆ. 'ನೀವು ರಾಜಿನಾಮೆ ನೀಡಿದ್ದೀರಾ' ಎಂದು ನೇರವಾಗಿ ರಾಮಸ್ವಾಮಿಯವರನ್ನೇ ಪತ್ರಕರ್ತರು ದೂರವಾಣಿಯ ಮೂಲಕ ಕೇಳಿದಾಗ 'ನಾನು ಈ ಬಗ್ಗೆ ಮಾತನಾಡುವುದಿಲ್ಲ' ಎಂದು ಹೇಳಿ ನುಣುಚಿಕೊಂಡಿದ್ದಾರೆ. ಭಾರತದ ಮುಖ್ಯ ನ್ಯಾಯಾಧೀಶರ ಕಚೇರಿಯಿಂದಲೇ ಉತ್ತರ ಪಡೆಯಲು ಹೋದರೆ "ಇದುವರೆಗೂ ನಮಗೆ ಏನೂ ಸುದ್ದಿ ಇಲ್ಲ" ಎಂದು ಆಪ್ತ ಕಾರ್ಯದರ್ಶಿ ಉತ್ತರಿಸುತ್ತಾರೆ "ನಾನು ಈ ಬಗ್ಗೆ ಮಾತನಾಡಲು ಅಧಿಕಾರ ಹೊಂದಿಲ್ಲ" ಎಂಬುದು ಸುಪ್ರೀಂ ಕೋರ್ಟ್‌ನ ಮಹಾರಿಜಿಸ್ಟಾರ್ ಅವರ ಉತ್ತರ.

ಪತ್ರಿಕೆಯವರಿಗೆ ಈ ಬಗ್ಗೆ ಸರಿಯಾದ ಉತ್ತರ ನೀಡಬೇಕಾಗಿರುವ ರಾಷ್ಟ್ರಪತಿಗಳ ಪತ್ರಿಕಾ ಕಾರ್ಯದರ್ಶಿಯವರನ್ನೇ ಈ ಬಗ್ಗೆ ಪ್ರಶ್ನಿಸಿದರೆ ಸರಿಯಾದ ಉತ್ತರ ಅಲ್ಲೂ ಇಲ್ಲ. ಹೋಗಲಿ, ಲೋಕಸಭೆಯಲ್ಲಿ ರಾಮಸ್ವಾಮಿಯವರನ್ನು ಪ್ರತಿನಿಧಿಸಿ ವಾದ ಮಾಡಿದ ಅವರ ವಕೀಲ ಕಪಿಲ್ ಸಿಬಾಲ್ ಈ ಬಗ್ಗೆ ಉತ್ತರ ನೀಡಬಹುದೇ ಎಂದು ಹೋದರೆ "ಈಗ ನಾನು ರಾಮಸ್ವಾಮಿಯವರ ಲಾಯರ್ ಅಲ್ಲ" ಎಂದಷ್ಟೇ ಅವರು ಹೇಳುತ್ತಾರೆ.

ರಾಮಸ್ವಾಮಿ ಮತ್ತು ಕಾಂಗೈ ನಡುವೆ 'ವ್ಯಾಪಾರ' ಕುದುರಿಸಿದರೆನ್ನಲಾದ ಚುನಾವಣಾ ಆಯೋಗದ ಖಳನಾಯಕ ಟಿ.ಎನ್. ಶೇಷನ್ ರಾಮಸ್ವಾಮಿ ಕೋರ್ಟ್ ಜುಲೈ 12 ರಿಂದ ಆರಂಭವಾದಾಗ ಅವರು ಬರುವುದಿಲ್ಲ ಎಂದು ಹೇಳುತ್ತಾರೆಯೇ ಹೊರತು ರಾಜಿನಾಮೆ ಬಗ್ಗೆ ತುಟಿಪಿಟಿಕ್ ಎನ್ನುವುದಿಲ್ಲ.

ಹರ್ಷದ್ ಮೆಹ್ತಾ ಬಾಂಬ್ ಸ್ಫೋಟಿಸಿದ ನಂತರ ಪಿ.ವಿ. ನರಸಿಂಹರಾಯರ ಮುಖ ಸಪ್ಪಗಿರುವುದನ್ನು ಕಂಡ ರಾಮಸ್ವಾಮಿ "ನನ್ನ ರಾಜಿನಾಮೆ ಬಗ್ಗೆ ವಿಚಾರಿಸಲು ಅವರಿಗೆಲ್ಲಿದೆ ಪುರುಸೊತ್ತು" ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಹೇಗೂ ಫೆಬ್ರವರಿಯಲ್ಲಿ ನಿವೃತ್ತಿ ಹೊಂದುತ್ತೇನೆ ಅಲ್ಲಿಯವರೆಗೆ ಓಗೆ ಕಾಲ ತಳ್ಳಿದರಾಯಿತು ಎಂಬುದು ರಾಮಸ್ವಾಮಿ ಯೋಚನೆ.

ನರಸಿಂಹರಾಯರೆ ರಾಮ(ಸ್ವಾಮಿ) ಈಗ ಮಾತನಾಡುತ್ತಿದ್ದಾನೆ.

ಸಾಯಿಬಾಬ ಒಬ್ಬ ಪಕ್ವಗೊಂಡಿರದ ಐಂದ್ರಜಾಲಿಕ

-- ಜ್ಯೂ. ಪಿ.ಸಿ. ಸರ್ಕಾರ್

ಪ್ರಶಾಂತಿನಗರದಲ್ಲಿ ತಮ್ಮವರೇ ಕೊಲೆ ಮಾಡಲು ಬಂದಾಗ ಯಾವ 'ಪವಾಡವೂ ಮಾಡಲಾಗದೆ ರಹಸ್ಯ ಬಾಗಿಲಿನಿಂದ ಇನ್ನೊಂದು ರೂಮಿನೊಳಗೆ ಓಡಿ ಹೋಗಿ ಬಾಗಿಲು ಹಾಕಿಕೊಂಡ ಸಾಯಿಬಾಬರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪಿ.ಸಿ. ಸರ್ಕಾರ್ ಅವರನ್ನು ಕೇಳಿದರೆ "ಪಾಪ! ಆತ ಇನ್ನೂ ಪಕ್ವಗೊಂಡಿರದ ಐಂದ್ರಜಾಲಿಕ" ಎನ್ನುತ್ತಾರೆ.

ಜ್ಯೂ. ಪಿ. ಸಿ. ಸರ್ಕಾರ್ ಗೊತ್ತಲ್ಲ. ಇತ್ತೀಚೆಗೆ ಬೆಂಗಳೂರಿನಲ್ಲಿ ಪುರಭವನದಲ್ಲಿ ಕಿಕ್ಕಿರಿದ ಜನರಿಗೆ ವಾರಗಟ್ಟಲೆ ಯಕ್ಷಿಣಿ ಮಾಡಿ ತೋರಿಸಿದ ಖ್ಯಾತಿ ಜಾದೂಗಾರ.

ಒಮ್ಮೆ ಸಾಯಿಬಾಬಾ ದರ್ಶನ ಪಡೆದು ಪುಣ್ಯವಂತರಾಗಲು ಪ್ರಶಾಂತಿ ನಿಲಯದ ಮುಂದೆ ದೊಡ್ಡ ಸಾಲು ನಿಂತಿತ್ತು. ಸಾಯಿಬಾಬ ಪ್ರತಿಯೊಬ್ಬ ಭಕ್ತನಿಗೂ ಗಾಳಿಯಲ್ಲಿ ಕೈ ಯಾಡಿಸಿ ಬೂದಿ ಕೊಡುತ್ತಲೇ ಬಂದರು. ಹಾಗೆಯೇ ಕೊನೆಯ ವ್ಯಕ್ತಿಗೂ ಬಾಬಾ ಬೂದಿಕೊಟ್ಟರು. ತಕ್ಷಣವೇ ಆ ವ್ಯಕ್ತಿಯೂ ಗಾಳಿಯಲ್ಲಿ ಕೈಯಾಡಿಸಿ "ಬಾಬಾ ಬೂದಿಯಿಂದ ಏನೂ ಪ್ರಯೋಜನವಿಲ್ಲ ಬೂಂದಿಯಾದರೂ ತಿನ್ನಲಿಕ್ಕೆ ಬರುತ್ತೆ ತಿನ್ನಿ" ಎಂದು ಹೇಳಿ ಬೂಂದಿ ಕೊಟ್ಟರು ಅವಕ್ಕಾದ ಸಾಯಿಬಾಬರಿಗೆ ಯಕ್ಷಿಣಿ ಜನರಿಗೆ ಖುಷಿ ಕೊಡಲು ಮಾತ್ರ. ಮೋಸ ಮಾಡಲು ಬಳಸುವುದು ಬೇಡ ಎಂದು ಬುದ್ಧಿವಾದ ಹೇಳಿದರು. ಆತನೇ ಜಗತ್ತಿನ ಖ್ಯಾತಿ ಯಕ್ಷಿಣಿದಾರ ಪಿ.ಸಿ. ಸರ್ಕಾರ್.

ಜ್ಯೂ. ಪಿ.ಸಿ. ಸರ್ಕಾರ್ ಅಪ್ಪನ ಹಾದಿಯಲ್ಲೇ ಹೆಜ್ಜೆ ಹಾಕಿದ್ದಾರೆ. ಜಾದೂ ರಂಜನೆಗೆ ಮಾತ್ರ ಎಂಬುದು ಇವರ ದೃಢ ನಂಬಿಕೆ.

ಜ್ಯೂ. ಪಿಸಿ. ಸರ್ಕಾರ್ ಅವರನ್ನು ಸಾಯಿಬಾಬ ಬಗ್ಗೆ ಅಭಿಪ್ರಾಯ ಕೇಳಿದಾಗ- "ಪಾಪ, ಆತ ಇನ್ನೂ ಪಕ್ವಗೊಂಡಿರದ ಐಂದ್ರಜಾಲಿಕ. ಆತ ತುಂಬಾ ಇಂಪ್ರೂವ್ ಆಗಬೇಕು. ಒಳ್ಳೆ ಯಕ್ಷಿಣಿ ಆಗಲು ಏನು ಅವಶ್ಯಕವೋ ಅದನ್ನೂ ಸರಿಯಾಗಿ ಆತ ರೂಢಿಸಿಕೊಂಡಿಲ್ಲ. ಪವಾಡಗಳ ಹೆಸರಿನಲ್ಲಿ ತುಂಬಾ ಕೆಟ್ಟ ಮ್ಯಾಜಿಕ್ ಮಾಡುತ್ತಾನೆ. ಒಂದೋ ಆತ ಕೈಚಳಕ ಸರಿಯಾಗಿ ಕಲಿಯಬೇಕು ಅದಾಗದಿದ್ದರೆ ಸುಮ್ಮನಿರಬೇಕು" ಎನ್ನುತ್ತಾರೆ.

ಕರ್ನಾಟಕದಲ್ಲಿ ಪದೇ ಪದೇ ಸುದ್ದಿಯಾಗುವ ಬಾನುಮತಿ ಕಾಟದ ಬಗ್ಗೆ ಕೇಳಿದರೆ- ಕರ್ನಾಟಕದಲ್ಲಿ ಬಾನುಮತಿ ಕಾಟ ಇದೆ ಎಂದು ಕೇಳಿದ್ದೇನೆ ಅದೊಂದು ಕ್ಷುದ್ರ ವಿದ್ಯೆ. ಇದನ್ನು ಘೋಜವಿದ್ಯಾ ಅಂತಲೂ ಕರೆಯುತ್ತಾರೆ.

ಬಾನುಮತಿಯಲ್ಲಿ ಆಗುವ ಎಲ್ಲಾ ವಿಚಿತ್ರಗಳನ್ನು ಈಗ ನಿಮ್ಮೆದುರಿಗೆ ಮಾಡಿ ತೋರಿಸಬಲ್ಲೆ! ಸೀಮೆಎಣ್ಣೆಯಲ್ಲಿ ಅದ್ದಿದ ರಂಜಕವನ್ನು ಬಟ್ಟೆಗಳ ಮಧ್ಯೆ ಉಂಡೆ ಮಾಡಿಟ್ಟರೆ ಅದು ಅರ್ಧಗಂಟೆಯ ನಂತರ ಸೀಮೆಎಣ್ಣೆ ಆವಿಯಾದ ತಕ್ಷಣ ಧಗ್ಗನೆ ಹೊತ್ತಿಕೊಳ್ಳುತ್ತದೆ. ಇದರಲ್ಲಿ ಆಶ್ಚರ್ಯ ಏನು ಬಂತು. ಇಂತಹ ನೂರಾರು ನಾನು ಮಾಡಿ ತೋರಿಸಬಲ್ಲೆ ಎನ್ನುತ್ತಾರೆ.

ಕರ್ನಾಟಕ ಸರ್ಕಾರ ಬಾನುಮತಿ ರಹಸ್ಯ ಬಯಲಿಗೆಳೆಯಲು ಒಂದು ಸಮಿತಿ ರಚಿಸಿತ್ತಂತೆ. ಅದರಲ್ಲಿ ವಿಜ್ಞಾನಿಗಳು, ವೈದ್ಯರು, ಪ್ರೊಫೆಸರ್‌ಗಳು ಇದ್ದರು. ಆದರೆ ಈ ಸಮಿತಿಯಲ್ಲಿ ಒಬ್ಬ ಇಂದ್ರಜಾಲಬಲ್ಲವನ್ನು ಇರಬೇಕಾಗಿತ್ತು ಎನ್ನುತ್ತಾರೆ.

ಭಾರತದಲ್ಲಿ ಯಾರಾದರೂ ಮಹಿಳಾ ಯಕ್ಷಿಣಿಗಾರರು ಇದ್ದಾರಾ? ಎಂದು ಜ್ಯು. ಪಿ. ಸಿ. ಸರ್ಕಾರ್ ಅವರನ್ನು ಕೇಳಿದರೆ ಹಾಂ, ಇದ್ದರು, ಇತ್ತೀಚೆಗೆ ತಾನೆ ತೀರಿಕೊಂಡರು ಯಾರು ಗೊತ್ತಾ - ಇಂದಿರಾಗಾಂಧಿ ಎಂದು ಚಟಾಕಿ ಹಾರಿಸುತ್ತಾರೆ.

ವಿಜ್ಞಾನ ಬೆಳೆಯುತ್ತಾ ಹೋದಂತೆ ನಿಗೂಢ ಎನ್ನುವುದು ಇರುವುದಿಲ್ಲ ಎಲ್ಲವೂ ಬಯಲಾಗುತ್ತದೆ. ನಮಗೆ ಎಲ್ಲವೂ ಗೊತ್ತಿಲ್ಲ ಎನ್ನುವುದು ನಿಜ. ಆದರೆ ಎಲ್ಲವನ್ನು ತಿಳಿಯಬಹುದು ಎನ್ನುವ ನಂಬಿಕೆ ನನಗಿದೆ ಎನ್ನುತ್ತಾರೆ.

ಜ್ಯೂ ಸರ್ಕಾರ್ ಜಾದೂದಂತ ತಿರುಗಿಸಿದರೆ ಸಾಕು ಆನೆ ಕುದುರೆಯಾಗುತ್ತದೆ, ಹುಡುಗಿ ಹೆಬ್ಬಾವಾಗುತ್ತೆ, ಆರಡಿ ವ್ಯಕ್ತಿ ಎರಡಡಿ ಕುಳ್ಳನಾಗುತ್ತಾನೆ.

ಜ್ಯೂ ಸರ್ಕಾರ್ ಅವರನ್ನು 1980ರಲ್ಲಿ ದೊಡ್ಡ ಗೋಣಿ ಚೀಲದಲ್ಲಿ ಹಾಕಿ ಅದರ ಬಾಯಿ ಕಟ್ಟಿದ್ದರು. ಆ ಚೀಲವನ್ನು ಹತ್ತಾರು ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಕಬ್ಬಿಣದ ಪೆಟ್ಟಿಗೆಯ ಹಾಕಿ ಬೀಗಜಡಿದರು. ನಂತರ ಪೆಟ್ಟಿಗೆಯನ್ನು ಸಮುದ್ರದೊಳಗೆ ಬಿಸಾಡಿದರು. 40 ಸೆಕೆಂಡುಗ ಅಷ್ಟೆ, ಜ್ಯೂ ಸರ್ಕಾರ್ ದಡದಲ್ಲಿ ನಿಂತಿದ್ದರು.

ಸಾಯಿಬಾಬ ಎಷ್ಟೊಂದು ಸಪ್ಪೆ ಅಲ್ಲವಾ? ಪವಾಡ ಎನ್ನುವುದು ಶುದ್ಧ ಸುಳ್ಳು ಈ ಎಲ್ಲವನ್ನೂ ಎಲ್ಲರೂ ಮಾಡಬಹುದು ಎಂದು ಸರ್ಕಾರ್ ಮುಗುಳ್ನಗುತ್ತಾರೆ.

ಮಳೆ ಬರಿಸಲು ತಿಪ್ಪೆಗೊಂಡನಹಳ್ಳಿಯಲ್ಲಿ ಜಪತಪ ನಡೆಸಿದ ತಿಪ್ಪರಲಾಗ ಹಾಕುವ ಸರ್ಕಾರಕ್ಕೆ, ಪವಾಡಗಳ ಸಾಯಿಬಾಬಾರಿಗೆ ಸರ್ಕಾರ್ ಮಾತು ಕೇಳಿಸುತ್ತಿದೆಯೇ?

ತುರ್ತು ಪರಿಸ್ಥಿತಿಯ ಕರಾಳ ದಿನಗಳ ನೆನಪು

ಕುಂಬಳಗೋಡಿನಲ್ಲಿ ಖಾಕಿ ರಾಕ್ಷಸರು

ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು, ಭಯಂಕರ ಘಟನೆಗಳನ್ನು ನೆನಪು ಮರು ಕಳಿಸುವಂತಹ ಘಟನೆ ಜುಲೈ 30,1993 ರಂದು ನಗರದ ಗ್ರಾಮಾಂತರದಲ್ಲಿರುವ ಗೇರಿಪಾಳ್ಯದಲ್ಲಿ ನಡೆದಿದೆ. ಮಾಲೀಕರ ಪರವಾಗಿಯೇ ಯಾವಾಗಲೂ ಇರುವ ಪೋಲೀಸರು ತಮ್ಮ ಪಾಶವೀ ಪ್ರವೃತ್ತಿಯ ಪ್ರದರ್ಶನಕ್ಕೆ "ತುರ್ತು ಪರಿಸ್ಥಿತಿಯಂತಹ' ಪರಿಸ್ಥಿತಿಯೇ ದೇಕೆಂದೇನೂ ಇಲ್ಲ. ಅಂತಹ ಯಾವುದೇ ಶಾಸನಗಳಿಲ್ಲದೆಯೂ ತಾವು ನಿರಪರಾಧಿಗಳನ್ನು ಮನಬಂದಂತೆ ದಂಡಿಸಲು ಸಮರ್ಥರು ಎಂದು ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ದರೋಡೆಕೋರರನ್ನು ದೇಶ ದ್ರೋಹಿಗಳನ್ನು ಹಿಡಿಯಲಾರದ ಷಂಡರಾದವರೇನಂತೆ, ಮಾಲೀಕ ವರ್ಗ ನೀಡುವ ಪುಡಿಗಾಸು, ಸಾರಾಯಿ, ಮಾಂಸದ ತುಂಡುಗಳಿಗಾಗಿ ಮುಗ್ದ ಹಳ್ಳಿಯ ಜನರನ್ನು ವಿನಾಕಾರಣ ಹಿಂಸಿಸುವ ಭಂಡತನವನ್ನೂ ತೋರಿಸಿದ್ದಾರೆಂದು ತಿಳಿದು ಬಂದಿದೆ.

ಘಟನೆ: ಕುಂಬಳಗೋಡು ಕೈಗಾರಿಕಾ ಪ್ರದೇಶಗಳಲ್ಲಿ ಒಂದಾದ ಗೇರೆಪಾಳ್ಯದಲ್ಲಿ ಒಂದು ಚಿಕ್ಕ ಕಾರ್ಖಾನೆ "ಪ್ರಡ್-ಟೆಕ್" ಒಬ್ಬ ರಾಜಾಸ್ಥಾನೀ ಉದ್ಯಮಿ ಅದರ ಮಾಲೀಕರೆಂದೂ ಈ ಮೊದಲೇ ಮೈಸೂರು ರಸ್ತೆಯಲ್ಲಿ ಒಂದು ಉದ್ಯಮವನ್ನು ಪ್ರಾರಂಭಿಸಿ ಅಲ್ಲಿ ಕಾರ್ಮಿಕರು ಸಂಘಟನೆ ಮಾಡಿಕೊಂಡರೆಂಬ ಕಾರಣಕ್ಕೆ ಉದ್ಯಮವನ್ನು ನಿಲ್ಲಿಸಿ ಗೇರೆಪಾಳ್ಯದಲ್ಲಿ ಹೊಸ ಉದ್ಯಮವನ್ನು ಪ್ರಾರಂಭಿಸಿದಾಗಿಯೂ ಆದರೆ ಸಿಐಟಿಯು ಇವನ ಬಣ್ಣ ಬದಲಾಯಿಸಿದನೆಂದೂ ಅಲ್ಲಿನ ಕಾರ್ಮಿಕರು ಸುಮ್ಮನೆ ಕೂರದೇ ಹೊಸ ಉದ್ಯಮದಲ್ಲಿಯೂ ಸಂಘಟನೆ ಪ್ರಾರಂಭವಾಗಿ ಕೆಂಬಾವುಟವನ್ನು ಹಾರಿಸೇ ಬಿಟ್ಟಿತೆಂದೂ ಇದನ್ನು ಸಹಿಸಲಾರದ ಮಾಲೀಕ ಸಂಘಟನೆಯನ್ನು ಮುರಿಯಲು ನಡೆಸಿದ ಪ್ರಯತ್ನ ಸಫಲವಾಗದಿದ್ದಾಗ ಗುತ್ತಿಗೆ ಮೇಲೆ ಕೆಲಸಗಾರರರನ್ನು ನೇಮಿಸಿಕೊಂಡು 200 ಜನ ಪೋಲೀಸರೊಡನೆ ಇಷ್ಟುದಿನ ದುಡಿಯುತ್ತಿದ್ದ ಕಾರ್ಮಿಕರಿಗೆ ವಂಚನೆ ಮಾಡಲು ಪ್ರಯತ್ನ ನಡೆದಿತ್ತೆಂದೂ ತಿಳಿದು ಬಂದಿದೆ. ಕಾರ್ಮಿಕ ಸಂಘಟನೆಯಾಗಿ, ಮಾಲೀಕ ವರ್ಗದ ಈ ಸಂಚಿಗೆ ಪ್ರತಿಭಟಿಸಿ ಕಾರ್ಮಿಕರು ಶಾಂತಿಯುತ ಧರಣಿ ನಡೆಸುತ್ತಿರುವಾಗ ರಣ ಹದ್ದುಗಳಂತೆ ಎರಗಿ ಬಂದ ಮೀಸಲು ಪಡೆಯ ಪೋಲೀಸರು ಸಿಕ್ಕಸಿಕ್ಕವರನ್ನು ಮನಬಂದಂತೆ ಚಚ್ಚಿದ್ದಲ್ಲದೇ ಅನವಶ್ಯಕವಾಗಿ ಅಶ್ರವಾಯು ಸಿಡಿಸಿ ಹಿಂಸಿಸಿದ್ದಾಗಿಯೂ, ಇಷ್ಟೇ ಸಾಲದೆಂಬಂತೆ ಇಡೀ ಊರಿನೊಳಕ್ಕೆ ನುಗ್ಗಿ ಮನೆಮನೆಯ ಗೋಡೆ, ಬಾಗಿಲುಗಳನ್ನು ಒದ್ದು ಮುರಿದು ಒಳ ಪ್ರವೇಶಿಸಿ ಹೆಂಗಸರು ಮಕ್ಕಳೆನ್ನದೆ, ದೇಹದ ಯಾವ ಭಾಗವೆಂದೂ ಲೆಕ್ಕಿಸದೆ ಬಡಿದು ಹಾಕಿದ ಪ್ರಕರಣ ನಡೆದಿದೆ.

ಹಳ್ಳಿಯ ಒಬ್ಬೊಬ್ಬ ಮಹಿಳೆಯೂ ತನ್ನ ಗೋಳನ್ನು ಹೇಳಿಕೊಳ್ಳುವಾಗ, ತಮ್ಮ ಅಂಗಾಂಗಗಳಲ್ಲಿನ ಪೋಲೀಸರ ದೊಣ್ಣೆಗಳ ಏಟುಗಳನ್ನು ತೋರಿಸುವಾಗ ಎಂತಹ ಕಲ್ಲೆದೆಯೂ ಕರಗುತ್ತದೆ.

ಲಕ್ಷಮ್ಮ, ವೆಂಕಟಲಕ್ಷ್ಮಮ್ಮ, ತಿಮ್ಮಮ್ಮ, ಶೈಲಜ, ಎಲ್ಲಮ್ಮ ಒಬ್ಬೊಬ್ಬರು ಒಂದೊಂದು ಭೀಕರ ಅನುಭವಗಳನ್ನು ಹೇಳುವಾಗ ಕೇಳುವವರ ಹೃದಯ ತಲ್ಲಣಿಸುತ್ತದೆ. ಈ ನರರಾಕ್ಷಸರು ಒಂದು ಗೃಹಪ್ರವೇಶ ಸಮಾರಂಭದ ಊಟನಡೆಯುತ್ತಿದ್ದ ಮನೆಗೆ ನುಗ್ಗಿ ಊಟಕ್ಕೆ ಕುಳಿತವರನ್ನೂ ಥಳಿಸಿದ್ದಲ್ಲದೇ ತಿನ್ನುವ ಪದಾರ್ಥಗಳನ್ನೆಲ್ಲ ಬೂಟುಕಾಲಿನಿದ ತುಳಿದು ಹೊಸಕಿ ಹಾಕಿದ್ದಾರೆಂದೂ ವರದಿಯಾಗಿದೆ. ಇಷ್ಟೇ ಸಾಲದೆಂಬಂತೆ ತುಂಬುಗರ್ಭಿಣಿ ಹೆಣ್ಣು ಮಗಳ ಮೈಮೇಲೂ ಕೈಮಾಡಿದ್ದಲ್ಲದೇ, ಹರೆಯದ ಹೆಣ್ಣು ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಮೂದಲಿಸಿ ಅಸಭ್ಯ ನಡವಳಿಕೆಗಳನ್ನು ತೋರಿಸಿರುತ್ತಾರೆಂದೂ ತಿಳಿದು ಬಂದಿದೆ. ಎಲ್ಲ ಕೃತ್ಯಗಳಿಗೆ ಒಳಗಾದ ಮಹಿಳೆಯರಲ್ಲಿ ಹೆಚ್ಚಿನವರು ಆ ಕಾರ್ಖಾನೆಯ ಕಾರ್ಮಿಕರಲ್ಲದಿರುವುದು ಮತ್ತು ಹಲವರು ಗಾರೆ, ಕೂಲಿ ಕೆಲಗಳನ್ನು ಮಾಡಿಕೊಂಡು ಬದುಕುತ್ತಿದ್ದು ಕಾರ್ಮಿಕ ಸಂಘಟನೆಯ ಸದಸ್ಯರೂ ಅಲ್ಲದಿರುವುದು ಗಮನಿಸದೇಕಾದ ಅಂಶ. ಊರಿನೊಳಗೆ ನುಗ್ಗಿ ಇಷ್ಟೆಲ್ಲ ಮಾಡಿದ್ದು ಸಾಲದೆ ಊರ ಬಾಗಿಲಲ್ಲಿ ಇರುವ ಪುಟ್ಟ ಪೆಟ್ಟಿಗೆ ಅಂಗಡಿಯೊಳಗೆ ನುಗ್ಗಿ ಸಿಕ್ಕ ಸಾಮಗ್ರಿಗಳನ್ನೆಲ್ಲ ಬಾಚಿಕೊಂಡು ಹೋಗಿರುವುದಾಗಿಯೂ ತಿಳಿದುಬಂದಿದೆ. ಇಷ್ಟೇ ಸಾಲದೆಂಬತೆ ಮಹಿಳೆಯರನ್ನು ಸೇರಿಸಿಕೊಂಡಂತೆ ಹಲವು ಜನರನ್ನು ಕಾರ್ಮಿಕ ಮುಖಂಡರಾದ ರಾಜಣ್ಣ ಮತ್ತು ವರಲಕ್ಷ್ಮಿಯವರನ್ನೊಳಗೊಂಡಂತೆ ರಾಮನಗರಂ ಪೋಲೀಸ್ ಸ್ಟೇಷನ್‌ಗೆ ಎಳೆದುಕೊಂಡು ಹೋಗಿ ರಾತ್ರಿ ಇಡೀ ಲಾಕಪ್ಪಿನಲ್ಲಿ ಹಾಕಿ ಅಲ್ಲಿಯೂ ಮನಬಂದಂತೆ ಥಳಿಸಿದ್ದಾಗಿಯೂ ತಿಳಿದುಬಂದಿದೆ. ಇಷ್ಟೆಲ್ಲ ಮಹಿಳೆಯರ ಮೇಲೆ ದೌರ್ಜನ್ಯಗಳನ್ನು ನಡೆಸಿದ್ದು ಪುರುಷ ಪೋಲೀಸರು, ನೆಪಮಾತ್ರಕ್ಕೆ ಕೆಲವು ಮಹಿಳಾ ಹೋಮ್‌ಗಾರ್ಡ್ಸ್‌ನ್ನು ಇಟ್ಟುಕೊಂಡು ಇಷ್ಟೆಲ್ಲ ಕೃತ್ಯಗಳನ್ನು ನಡೆಸಿದೆ. ಇನ್ನೂ ನೋವಿನ ಸಂಗತಿ ಎಂದರೆ ಮಹಿಳೆಯರ ಮೇಲೆ ಇಂತಹ ದೌರ್ಜನ್ಯಗಳನ್ನು ನಡೆಸಲು ಎಲ್ಲ ರೀತಿಯ ಮಸಲತ್ತು ನಡೆಸಿದ್ದು ಆ ಕಾರ್ಖಾನೆಯ ಅಧಿಕಾರಿಯಾದ ಒಬ್ಬ ಮಹಿಳೆ 'ಗೀತಾಬಾಲಿ' ಎಂದು ಅಧಿಕೃತವಾಗಿ ತಿಳಿದುಬಂದಿದೆ.

ಇಂತಹ ಎಲ್ಲ ಕೃತ್ಯಗಳು ನಡೆಯುವಾಗ ಬಿಡದಿ ಪೋಲೀಸ್ ಸ್ಟೇಷನ್ ನ ಪೋಲೀಸ್ ಅಧಿಕಾರಿಗಳು ಮಾಲೀಕರ ಪರವಾಗಿ ಕಾರ್ಮಿಕರನ್ನು ಹಿಂಸಿಸಲು ಪ್ರೋತ್ಸಾಹ ಕೊಟ್ಟರೆಂಬುದಕ್ಕೆ ಇನ್ನೂ ಪುರಾವೆಗಳು ಬೇಕಿಲ್ಲ.

ಇಷ್ಟಾಗಿ "ವಿಂಟೇಜ್ " ಎಂಬ ಫಲಕವನ್ನು ತೂಗಾಡಿಸಿಕೊಂಡು ರಾರಾಜಿಸುವ ಆ ಕಾರ್ಖಾನೆಯಿಂದ ಹೊರಬರುವ ಕಲ್ಮಶ ನೀರಿನಿಂದಾಗಿ ಸುತ್ತಲಿನ ಜನ ಮತ್ತು ಪ್ರಸಿದ್ಧವಾದ "ದೊಡ್ಡ ಆಲದ ಮರ "ಕ್ಕೆ ಹೋಗುವ ಜನ ಮೂಗು ಮುಚ್ಚಿಕೊಳ್ಳದೇ ಹೋಗುವಂತಿಲ್ಲ.

ಈ ಸಂದರ್ಭದಲ್ಲಿ ಊರಿನವರಿಂದ ತಿಳಿದು ಬಂದಂತೆ ನೈರ್ಮಲ್ಯವನ್ನು ಕಾಪಾಡಲು ಸಾಧ್ಯವಿರದ ಸಂದರ್ಭದಲ್ಲಿ ಕಾರ್ಖಾನೆಯ ಪರವಾನಿಗಿಯನ್ನು ರದ್ದುಗೊಳಿಸುವ ಬಗ್ಗೆ ಆದೇಶವಿದೆಯಂದೂ ಈ ಬಗ್ಗೆ ಊರಿನ ಜನ ಹಲವು ಭಾರಿ ಸಂಬಂಧ ಪಟ್ಟ ವ್ಯಕ್ತಿಗಳಿಗೆ ಅಹವಾಲು ನೀಡಿದ ನಂತರವೂ ಅಬಾಧಿತವಾಗಿ ಉದ್ಯಮ ಮುಂದುವರೆದುಕೊಂಡು ಹೋಗುತ್ತಿದೆಯೆಂದು ಊರಿನ ಜನ ತಿಳಿಸಿದ್ದಾರೆ.

ಆದರೆ ಅಲ್ಲಿನ ಜನ ಇಂದು ಎದ್ದು ನಿಂತಿದ್ದಾರೆ. ಪೋಲೀಸರ ದೌರ್ಜನ್ಯಕ್ಕೆ ಬಗ್ಗುವುದಿಲ್ಲ ಮಾಲೀಕರ ಬೆದರಿಕೆಗೆ ಹೆದರುವುದಿಲ್ಲವೆಂಬ ಗಟ್ಟಿನಿಲುವನ್ನು ತಾಳಿ ಪ್ರತಿಭಟನೆಗೆ, ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಗ್ರಾಮದ ನಿವಾಸಿಗಳ ಹೋರಾಟಕ್ಕೆ ಎಲ್ಲ ಜನಪರ ಶಕ್ತಿಗಳು ಕೈಗೂಡಿಸಿ ಹೋರಾಟದಲ್ಲಿ ಅಂತಿಮ ಜಯ ಜನತೆಯದೇ ಎಂದು ತೀರ್ಮಾನಿಸ ಬೇಕಾಗಿದೆ.

ವರದಿ - ಜೆ.ಎಂ.ಎಸ್.

ಸಿ.ಐ.ಟಿ.ಯುನಿಂದ ಪ್ರತಿಭಟನೆ

ಕುಂಬಳಗೋಡಿನ ಕಾರ್ಮಿಕ ಮುಖಂಡರಾದ ರಾಜಣ್ಣ ಮತ್ತು ವರಲಕ್ಷ್ಮಿ ಹಾಗೆಯೇ ಗೇರುಪಾಳ್ಯದ ನಾಗರಿಕರ ಮೇಲೆ ಬಿಡದಿಯ ಪೋಲೀಸರು ಜುಲೈ 30 ರಂದು ನಡೆಸಿದ ಅಮಾನುಷ ದಬ್ಬಾಳಿಕೆಯ ವಿರುದ್ಧ ಆಗಸ್ಟ್ 5, 1993 ರಂದು ಸಂಜೆ ನಾಲ್ಕರಿಂದ ಆರರವರೆಗೆ ಶಾಂತಿಯುತ ಪ್ರತಿಭಟನೆ ನಡೆಸಿದರು.

ಕನಕಪುರ, ಯಶವಂತಪುರ, ಕೆ.ಆರ್. ಪುರ, ಶ್ರೀರಾಂಪುರ, ಡಿ.ವೈ.ಎಫ್.ಐ., ಎಸ್.ಎಫ್.ಐ., ಜೆ.ಎಂ.ಎಸ್., ಹೋಟೇಲ್ ಕಾರ್ಮಿಕರ ಸಂಘ ಎ.ಆರ್.ಡಿ.ಯು., ಕುಂಬಳಗೋಡು ಗೇರು ಪಾಳ್ಯ ಅಸಂಘಟತ ಕಾರ್ಮಿಕರು ಬೆಂಗಳೂರಿನ ವಿವಿಧ ಭಾಗಗಳಿಂದ 500 ಕ್ಕೂ ಹೆಚ್ಚು ಜನ ಕಾರ್ಮಿಕರು ಮೆರವಣಿಗೆಯಲ್ಲಿ ಹೋಗಿ ಬಿಡದಿ ಪೋಲೀಸ್ ಸ್ಟೇಶನ್ನಿನ ಮುಂದೆ ಮತಪ್ರದರ್ಶನ ನಡೆಸಿದರು. ಮತಪ್ರದರ್ಶನ ನಡೆಯುತ್ತಿದ್ದಾಗಲೇ ಬಿಡದಿ ಪೋಲೀಸ್ ಠಾಣೆಯ ಎ. ಎಸ್.ಐಯವರು ಮತ ಪ್ರದರ್ಶಕರ ಮೇಲೆ ಕಲ್ಲೆಸೆಯುವಂತೆ ಪ್ರಚೋದನೆ ಮಾಡುತ್ತಿದ್ದು ಕಂಡು ಬಂತು. ಸಿ.ಐ.ಟಿ.ಯು. ಕಾರ್ಯಕರ್ತರು ಅದನ್ನು ತಡೆದರು. ಆದರೆ ಮತ ಪ್ರದರ್ಶನ ಮುಗಿಸಿದ ನಂತರ ಮುಖಂಡರು ತಹಶೀಲ್ದಾರರ ಮತ್ತು ಎ.ಎಸ್.ಪಿ.ಯವರೊಡನೆ ಪೋಲೀಸ್ ಸ್ಟೇಶನ್ನಿನಲ್ಲಿ ಮಾತಾಡುತ್ತಿದ್ದಾಗ, ಮತಪ್ರದರ್ಶಕರು ವಾಪಾಸ್ ಹೋಗುತ್ತಿದ್ದಾಗ ಸಮಾಜ ದ್ರೋಹಿಗಳು ಅವರ ಮೇಲೆ ಕಲ್ಲೆಸೆದರು. ಮೂರು ಜನರಿಗೆ ತೀವ್ರ ಪೆಟ್ಟಾಗಿದೆ. ಬಹಳ ಜನರಿಗೆ ಕಲ್ಲೇಟು ಬಿದ್ದಿದೆ. ಒಂದು ಟ್ರಕ್‌ಗೆ ಹಾನಿಯಾಗಿದೆ.

ಇದು ಶಾಂತ ರೀತಿಯಿಂದ ವಾಪಸ್ಸಾಗುತ್ತಿದ್ದ ಕಾರ್ಮಿಕರ ಮೇಲೆ ಪೋಲೀಸರ ಪ್ರಚೋದನೆಯಿಂದ ಗೂಂಡಾ ಜನರು ಮಾಡಿದ ದಾಳಿಎಂದು ಸಿಐಟಿಯು ಖಂಡಿಸಿದೆ.

ಬಿಡದಿ ಪೋಲೀಸರ ಮೇಲೆ ಹಾಗೆಯೇ ಗೂಂಡಾ ಜನರ ಮೇಲೆ ಉಗ್ರ ಕ್ರಮಕೈಗೊಳ್ಳದೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಕುಂಬಳಗೋಡಿನಲ್ಲಿ ಪೋಲೀಸರ ದೌರ್ಜನ್ಯ

ಬೆಂಗಳೂರು : ಕುಂಬಳಗೋಡು ಪ್ರದೇಶದಲ್ಲಿ ನಡೆದ ಪೋಲೀಸ್ ದೌರ್ಜನ್ಯವನ್ನು ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಎಸ್. ಸುಬ್ರಮಣ್ಯನವರು ಬಲವಾಗಿ ಖಂಡಿಸಿದ್ದಾರೆ.

ಖಾಯಂ ಕೆಲಸಗಾರರನ್ನು ತೆಗೆದು ಹಾಕಿದ ಜಾಗದಲ್ಲಿ ಕಾಂಟ್ರಾಕ್ಟ್ ಕೆಲಸಗಾರರನ್ನು ನೇಮಿಸುವುದನ್ನು ಪ್ರತಿಭಟಿಸಿ ಶಾಂತ ರೀತಿಯಿಂದ ಕಾರ್ಖಾನೆಯ ಮುಂದೆ ನಿನ್ನೆ ಸಂಜೆ ಸಭೆ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಹಠಾತ್ ಲಾಟಿ ಚಾರ್ಜ್ ಮಾಡಿ ಟಿಯರ್ ಗ್ಯಾಸ್ ಬಿಟ್ಟು ಮಹಿಳಾ ಕಾರ್ಮಿಕರು ಸೇರಿದಂತೆ ಹಲವಾರು ಮಂದಿ ಕಾರ್ಮಿಕರಿಗೆ ಭಾಸುಂಡೆ, ಗಾಯಗಳನ್ನು ಉಂಟು ಮಾಡಿರುವುದನ್ನು ನಂತರ ಗೇರುಪಾಳ್ಯ ಗ್ರಾಮದಲ್ಲಿ ಮನೆಮನೆಗೆ ನುಗ್ಗಿ ಗಂಡಸರು ಹೆಂಗಸರು, ಮಕ್ಕಳು ಎಂಬ ಭೇದವಿಲ್ಲದೇ ಹೊಡೆದಿರುವುದನ್ನು ಅವರು ಖಂಡಿಸಿದ್ದಾರೆ.

ಪೋಲೀಸರು ಸ್ಟೇಷನ್ನಲ್ಲಿ 12 ಘಂದಿಗೆ ಮಾಡಿದ ಹಿಂಸೆ ರಾಮನಗರದ ಆಸ್ಪತ್ರೆಯ ರಿಕಾರ್ಡ್‌ನಲ್ಲಿ ಸಿಗುತ್ತದೆ. ಪೋಲೀಸರು ಕಾರ್ಮಿಕರಿಗೆ ಸ್ಟೇಷನ್ನಿನಲ್ಲಿ ಒದೆ ಕೊಡುವಾಗ ಅವರುಗಳನ್ನು ಸಿಐಟಿಯು ಯೂನಿಯನ್‌ನಲ್ಲಿರುವುದನ್ನು ಸಹಿಸಲಾಗುವುದಿಲ್ಲ ಇಡೀ ಕುಂಬಳಗೋಡು ಪ್ರದೇಶದಲ್ಲಿ ಸಿಐಟಿಯು ಯೂನಿಯನ್‌ಗಳು ಇಲ್ಲದಂತೆ ಮಾಡುತ್ತೇವೆ ಎಂದು ಪದೇ.ಪದೇ ಹೇಳುತ್ತಿದ್ದರು. ಎಷ್ಟರ ಮಟ್ಟಿಗೆ ಪೋಲೀಸ್ ಆಡಳಿತದೊಡನೆ ಶಾಮೀಲಾಗಿ ಯೂನಿಯನ್ ಚಟುವಟಿಕೆಗಳನ್ನು ಹತ್ತಿಕ್ಕಲು ಹೋಗುತ್ತಾರೆಂಬುದು ಇದರಿಂದ ಗೊತ್ತಾಗುತ್ತದೆ ಎಂದು ಕಾಂ. ಸುಬ್ರಮಣ್ಯ ಹೇಳಿದ್ದಾರೆ.

ಪೋಲೀಸ್ ಸ್ಟೇಷನಲ್ಲಿ 12 ಮಂದಿಯ ಫೋಟೋವನ್ನು ಅವರ ಎದೆಗೆ ಅಪರಾಧಿಗಳ ಸಂಖ್ಯೆಯನ್ನು ಬರೆದು ಸ್ಲೇಟನ್ನು ತಗುಲಿಸಿ ತೆಗೆದಿರುತ್ತಾರೆ. ಅಂದರೆ ಪೋಲೀಸರು ಕಾರ್ಮಿಕ ನೇತಾರರುಗಳನ್ನು ಕೇಡಿಗಳೆಂದು ಗುರುತಿಸುವ ಮಟ್ಟಕ್ಕೆ ಹೋಗಿದ್ದಾರೆಂದು ಇದರಿಂದ ಗೊತ್ತಾಗುತ್ತದೆ ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳು ಖೇದ ವ್ಯಕ್ತಪಡಿಸಿದ್ದಾರೆ.

ಮುಖ್ಯ ಮಂತ್ರಿಯವರು ಮತ್ತು ಗೃಹಮಂತ್ರಿಯುವರು ಕೂಡಲೇ ಮಧ್ಯ ಪ್ರವೇಶಿಸಿ ವಿಚಾರಣೆ ನಡೆಸಿ ಎಸ್.ಪಿ. ಜಯಪ್ರಕಾಶ್‌ರವರನ್ನು ಮತ್ತು ಇತರ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಶಿಸ್ತಿನ ಕ್ರಮ ತೆಗೆದುಕೊಂಡು ಜನರಿಗೆ ಹಾಗೂ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಬೆಂಗಳೂರು ಜಿಲ್ಲಾ ಸಿಐಟಿಯು ಮನವಿ ಮಾಡಿದೆ.

ವಿಜಾಪುರ ಜಿಲ್ಲೆಯ ಬರ ಪರಿಹಾರಕ್ಕಾಗಿಒತ್ತಾಯಿಸಿ ಬೃಹತ್ ಮೆರವಣಿಗೆ

ಬಿಜಾಪೂರ ಜಿಲ್ಲೆಯ ಬರ ಪರಿಹಾರಕ್ಕಾಗಿ ಒತ್ತಾಯಿಸಿ ಜುಲೈ 29, 1993 ರಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಎ.ಪಿ.ಎಂ.ಸಿ. ಯಾರ್ಡ್‌ದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಬೃಹತ್ ಮೆರವಣಿಗೆ ಹೊರಡಿಸಿ ಮನವಿ ಅರ್ಪಿಸಲಾಯಿತು.

ಇದಕ್ಕೂ ಮೊದಲು ಮೆರವಣಿಗೆಯ ತಹಸಿಲ್ದಾರರ ಕಚೇರಿಯ ಮುಂದೆ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಸಭೆಯಲ್ಲಿ ಜಿಲ್ಲಾ ಅಧ್ಯಕ್ಷರಾದ ಕಾಂ. ಭೀಮಶೀ ಕಲಾದಗಿಯವರು ಹಾಗೂ ರೈತ ತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಅಣ್ಣಾ ರಾಯ ಈರಗೇರ ಅವರು ಮಾತನಾಡಿದರು.

ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿ ಜಯರಾಂ ಅವರಿಗೆ ಮನವಿ ಪತ್ರ ಅರ್ಪಿಸಲಾಯಿತು.

ಬಸವನ ಬಾಗೇವಾಡಿಯಲ್ಲಿ

ಜುಲೈ 23, 1993 ರಂದು ಬಸವನ ಬಾಗೇವಾಡಿ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕಾ ಸಮಿತಿಯಿದ ಶಾಶ್ವತ ಬರಗಾಲ ಕಾಮಗಾರಿಗಾಗಿ ಮೆರವಣಿಗೆ ಹೊರಟು ಶಾಶ್ವತ ಬರಗಾಲ ಸಾರಲೇಬೇಕು, ಮುಳವಾಡ ಯಾತ ನೀರಾವರಿ ಆಗಲೇಬೇಕು ಭ್ರಷ್ಟ ಕಾಂಗ್ರೆಸ್ಸಿಗೆ ಧಿಕ್ಕಾರ ಕೋಮುವಾದಿಗಳಿಗೆ ಧಿಕ್ಕಾರ ಎಂದು ಘೋಷಣೆ ಮಾಡುತ್ತಾ ತಹಸೀಲದಾರ ಕಚೇರಿ ಹೋಗಿ ತಹಸೀಲ್ದಾರರಿಗೆ ರೈತ ಸಂಘದ ಕಾರ್ಯದರ್ಶಿ ಡಿ.ಎಮ್. ವಾಲಿಕಾರ ನೇತೃತ್ವದಲ್ಲಿ ಹದಿನಾರು ಬೇಡಿಕೆಗಳ ಮನವಿ ಪತ್ರ ಸಲ್ಲಿಸಲಾಯಿತು.

ಪ್ರಾಂತ ರೈತ ಸಂಘ ಸಂಘದ ಅಧ್ಯಕ್ಷರು ಕಾಂ. ಭೀಮಶಿ ಕಲಾದಗಿ ಹಾಗೂ ಜಿಲ್ಲಾ ಉಪಾಧ್ಯಕ್ಷ ಬಸವಂತಪ್ಪ ಕಲ್ಲೊಳ್ಳಿ ಮಳಿಸಿದನಾಮಿ ಕೋಡಿ ತಾಲೂಕಾ ಅಧ್ಯಕ್ಷ ಸಾಯಿಬಣ್ಣ ಹಂದಿಗನೂರ, ಉಪಾಧ್ಯಕ್ಷ ಮಮ್ಮೂಸಾಬ ಚಪ್ಪರ, ಬಂದ ಶರಣಪ್ಪ ಮಾರಪ್ಪನ ಹಳ್ಳಿ, ಸೋಮಲೂ ರಾಠೋಡ ಇನ್ನಿತರರು ಭಾಗವಹಿಸಿದರು. ಪ್ರಾಂತ ರೈತ ಸಂಘ ತಾಲೂಕು ಸಮಿತಿ ಸಾಯಬಣ್ಣ ಹಂದಿಗನೂರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆಗಸ್ಟ್ 5 ರಿಂದ 15 ರವರೆಗೆ ಬರಗಾಲ ಹಾಗೂ ಕೋಮುವಾದಿ ಹಾಗೂ ಹೊಸ ಆರ್ಥಿಕ ನೀತಿಯ ವಿರುದ್ಧ ಜನ ಜಾಗೃತಿಗೊಳಿಸಲು ಜಾತಾ ಮಾಡುವುದು ಹಾಗೂ ಸಾಮೂಹಿಕ ಸಂಘಟನೆಗಳ ಕರೆಯ ಮೇರೆಗೆ ಆಗಸ್ಟ್ 19 ಜೈಲ್ ಭರೋ ಹಾಗೂ ಸೆಪ್ಟೆಂಬರ್ 9 ಭಾರತ್ ಬಂದ್ ಇದರಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಆಗಸ್ಟ್ 23 ರಂದು ಬೆಂಗಳೂರು ಚಲೋ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತೀರ್ಮಾನಿಸಲಾಯಿತು.

ಆಗಸ್ಟ್ 5-15: ಬಿಜಾಪುರದಲ್ಲಿ ಕಾಲು ನಡಿಗೆ ಜಾಥಾ

ಜುಲೈ 13, 1993 ರಂದು ಕಾಂ. ಭೀಮಸೀ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾಂತ ರೈತರ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಗಳು ಜಿಲ್ಲಾ ಮಟ್ಟದ ಜಂಟಿ ವಿಸ್ತೃತ ಸಭೆ ನಡೆಯಿತು. ಈ ಸಭೆಯಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್ ಅವರು ಮಾತನಾಡಿದರು.

ಸರಕಾರದ ಆರ್ಥಿಕ ನೀತಿ ವಿರೋಧಿಸುವಂತೆ, ಡಂಕೆಲ್ ಸೂಚನೆಗಳನ್ನು ವಿರೋಧಿಸುವಂತೆ ಕೋಮುಸೌಹಾರ್ದತೆಯನ್ನು ಕಾಪಾಡುವಂತೆ ಜನತಾ ದಳ, ರಾಜ್ಯ ರೈತ ಸಂಘ ಸಿಪಿಐ(ಎಂ) ದಲಿತ ಸಂಘರ್ಷ ಸಮಿತಿ ಹಾಗೂ ವಿವಿಧ ಕಾರ್ಮಿಕ ಸಂಘಟನೆ ಮುಂತಾದುವುಗಳು ಜೊತೆಗೂಡಿ ಜನ ಜಾಗೃತಿ ಮಾಡಲು ಆಗಸ್ಟ್ 5 ರಿಂದ 15 ರವರೆಗೆ ಜಿಲ್ಲೆಯಾದ್ಯಂತ ಕಾಲು ನಡಿಗೆ ಜಾಥಾ, ಸೈಕಲ್ ಜಾಥಾ, ಜೀಪ್ ಜಾಥಾ, ಮೂಲಕ ವ್ಯಾಪಕವಾಗಿ ಸಭೆ ಸಮಾರಂಭ ಮುಂತಾದ ಕಾರ್ಯಕ್ರಮ ಹಾಕಿಕೊಳ್ಳಲು ಸಭೆ ನಿರ್ಧರಿಸಿದರು. ಅಲ್ಲದೆ ಆಗಸ್ಟ್ 19 ರಂದು ಜೈಲ್ ಭರೋ ಹಾಗೂ ಸೆಪ್ಟೆಂಬರ್ 9 ರಂದು ಭಾರತ ಬಂದ್ ಕಾರ್ಯಕ್ರಮವನ್ನು ನಡೆಸಲಾಗುವುದು.

ಉಡಪಿಯಲ್ಲಿ ಮಹಿಳಾ ಸಂಘಟನೆ ಸಭೆ

ಜನವಾದಿ ಸಂಘಟನೆಯ ಉಡುಪಿ ತಾಲೂಕು ಸಮಿತಿಯ ಸಭೆಯು ಜುಲೈ 28, 1993 ರಂದು ಶ್ರೀಮತಿ ಕಲ್ಯಾಣಿಯವರ ಅಧ್ಯಕ್ಷತೆಯಲ್ಲಿ ಸೇರಿ ಮುಂಬರುವ ಆಗಸ್ಟ್ 19 ರ ಜೈಲಭರೋ ಚಳುವಳಿಯನ್ನು ಸಂಪೂರ್ಣ ಬೆಂಬಲಿಸಿ ಭಾಗವಹಿಸಲು ಕರೆ ನೀಡಿದೆ.

ಕಾರ್ಯದರ್ಶಿ ಕುಮಾರಿ ವಸಂತಿ ಹಾಗೂ ಶ್ರೀಮತಿಯವರಾದ ಗೋಪಿ, ಇಂದಿರಾ, ಆನಂದಿ, ರಾಜಮ್ಮ ಜಾನಕಿ ಮೊದಲಾದವರು ಸಭೆಯಲ್ಲಿ ಮಾತನಾಡಿ ಕೇಂದ್ರದ ನರಸಿಂಹರಾಯರ ಸರಕಾರದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳಿಂದಾಗಿ ತೀವ್ರವಾದ ಬೆಲೆ ಏರಿಕೆಯು ಗೃಹಣಿಯರನ್ನು ತಟ್ಟಿದೆ ಮತ್ತು ಜನಜೀವನವನ್ನು ಸಂಕಷ್ಟಮಯವಾಗಿಸಿದೆ ಎಂದು ತಿಳಿಸಿದರು.

1993 ನೇ ಸಾಲಿನ ಸದಸ್ಯತ್ವನ್ನು ಆಗಸ್ಟ್ ತಿಂಗಳಲ್ಲಿ ಮುಗಿಸಿ ತಾಲೂಕು ಮಟ್ಟದ ಸಮ್ಮೇಳನವನ್ನು ಸೇರಿಸಲು ವ್ಯಾಪಕವಾದ ಸಿದ್ಧತೆ ನಡೆಸಲು ನಿರ್ಣಯಿಸಲಾಯಿತು.

ಕುಮಾರಿ ಸುಮಿತ್ರವರು ವಂದನಾರ್ಪಣೆ ಮಾಡಿದರು.

ಜೈಲ್ ಭರೋ ಕಾರ್ಯಕ್ರಮಕ್ಕೆ ರೈತ ಸಂಘದ ಬೆಂಬಲ

ಕುಂದಾಪುರ ತಾಲೂಕು ರೈತ ಸಂಘ (ಪ.ಐ.ಕೆ.ಎಸ್.) ಸಭೆಯು ದಿನಾಂಕ ಜುಲೈ 25, 1993 ರಂದು ಗ್ರೋವಿಂದ ಸೆಟ್ಟಿಗಾರ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ ರಾಜೀವ್ ಪಡಕೋಣೆಯವರು ಚಟುವಟಿಕೆ ವರದಿ ಮಂಡಿಸಿದರು. ಜಿಲ್ಲಾ ರೈತ ತಸಂಘ ಕಾರ್ಯದರ್ಶಿ ಅಬ್ರಹಂ ಕರ್ಕಡ ಜಿಲ್ಲಾ ಸಮಿತಿಯ ಮುಖ್ಯ ತೀರ್ಮಾನಗಳನ್ನು ಹಾಗೂ ಆಗಸ್ಟ್ 19 ರಂದು ನಡೆಯುವ ಜೈಲ್ ಭರೋ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಮುಂಚಿತವಾಗಿ ಪ್ರಚಾರಾರ್ಥ ಗ್ರಾಮ ಮಟ್ಟದ ಸಭೆಗಳನ್ನು ನಡೆಯಿಸಿ, ಆಗಸ್ಟ್ 15 ರಂದು ಕುಂದಾಪುರದಲ್ಲಿ ನಡೆಯುವ ಸಬೆ ಮೆರವಣಿಗೆ ಯಶಸ್ವಿಗೊಳಿಸಲು ಹಾಗೂ ಮುಖ್ಯ ಬೇಡಿಕೆಗಳ ಸಂಬಂಧ ಕರಪತ್ರವನ್ನು ಗ್ರಾಮಗಳಲ್ಲಿ ಹಂಚಲು ತೀರ್ಮಾನಿಸಲಾಯಿತು.

ಬೇಡಿಕೆ : 9 — ದೇಶವಿರೋಧಿ ಡಂಕೆಲ್ ಪ್ರಸ್ತಾಪಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು

ಆರ್ಥರ್ ಡಂಕೆಲ್ ಗ್ಯಾಟ್ ಎಂಬ ಸಂಸ್ಥೆಯ ಮಾಜಿ ಮಹಾ ನಿರ್ದೇಶಕ ಗ್ಯಾಟ್ (GATT) ಎಂದರೆ 'ಸುಂಕಪಟ್ಟಿಗಳು' ಹಾಗೂ ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ ಎಂಬ ಅರ್ಥದ ಇಂಗ್ಲೀಷ್ ಪದಗಳ ಸಂಕ್ಷಿಪ್ತ ರೂಪ. 1986 ರಿಂದ ಅಂತರ್ರಾಷ್ಟ್ರೀಯ ವ್ಯಾಪಾರ ಹಾಗೂ ಸುಂಕಗಳ ಕುರಿತಾದ ಮಾತುಕತೆಗಳು ದಕ್ಷಿಣ ಅಮೇರಿಕಾದ ಉರುಗ್ವೇ ಎಂಬ ದೇಶದಲ್ಲಿ ಆರಂಭವಾಗಿವೆ. ಅತ್ಯಂತ ವ್ಯಾಪಕವಾದ ಉರುಗ್ವೇ ಮಾತುಕತೆಗಳು 1986 ರಿಂದ ನಡೆಯುತ್ತಿದ್ದು ಇನ್ನೂ ಒಂದು ಒಪ್ಪಂದಕ್ಕೆ ಬರಲಾಗಿಲ್ಲ. ಒಂದೆಡೆ ಅಭಿವೃದ್ಧ ಬಂಡವಾಳಶಾಹಿ ದೇಶಗಳ ನಡುವೆ ಕೃಷಿ ಸಬ್ಸಿಡಿ ಬಗ್ಗೆ ಭಿನ್ನಾಭಿಪ್ರಾಯ, ತಮ್ಮ ಹಿತಾಸಕ್ತಿಗಳಿಗೆ ಮಾರಕವಾದ ಅಂಶಗಳ ಬಗ್ಗೆ ಮೂರನೇಯ ಜಗತ್ತಿನ ದೇಶಗಳ ವಿರೋಧ ಇನ್ನೊಂದೆಡೆ ಇದರಿಂದಾಗಿ ಒಮ್ಮತದ ಒಪ್ಪಂದ ಈ ವರೆಗೆ ಸಾಧ್ಯವಾಗಿಲ್ಲ. ಡಂಕೆಲ್ ಪ್ರಸ್ತಾಪಗಳು ಶ್ರೀಮಂತ ದೇಶಗಳ ಪರವಾದ ಇತ್ಯರ್ಥವನ್ನು ಹೇರುವ ಒಪ್ಪಂದದ ಕರಡು.

ಡಂಕೆಲ್ ಪ್ರಸ್ತಾಪಗಳು 1986 ರಲ್ಲಿ ಆರಂಭವಾದಾಗ ಹಲವಾರು ಹೊಸ ವಿಷಯಗಳನ್ನು ಸೇರಿಸುವ ಪ್ರಯತ್ನವನ್ನು ಶ್ರೀಮಂತ ದೇಶಗಳು ಮಾಡಿದವು. ಸರಕುಗಳ ವ್ಯಾಪಾರ, ಅವಕ್ಕೆ ಸಂಬಂಧಪಟ್ಟ ಸುಂಕಗಳ ಬಗ್ಗೆ ಸೀಮಿತವಾಗಿದ್ದ ಗ್ಯಾಟ್ (GATT) ಒಪ್ಪಂದದಲ್ಲಿ ಬ್ಯಾಂಕಿಂಗ್, ವಿಮೆ ಮುಂತಾದ ಸೇವಾ ವಿಭಾಗಗಳ, ಬೌದ್ಧಿಕ ಆಸ್ತಿ ಹಕ್ಕು (ಅಥವಾ ಪೇಟೆಂಟ್) ಕೃಷಿ ಸಬ್ಸಿಡಿ ಬಗೆಗಿನ ಕಲಮುಗಳನ್ನು ಸೇರಿಸಲು ಪ್ರಯತ್ನಗಳು ನಡೆದವು. ಇದನ್ನು ಭಾರತ ಹಾಗೂ ಬ್ರೆಝಿಲ್ ಆಗ ಬಲವಾಗಿ ವಿರೋಧಿಸಿದವು. ಈಗ ಡಂಕೆಲ್ ಪ್ರಸ್ತಾಪಗಳಲ್ಲಿ ಇದೇ ಪ್ರಯತ್ನವನ್ನು ಮಾಡಲಾಗುತ್ತಿದೆ.

ಐ.ಎಂ.ಎಫ್ ಅಥವಾ ವಿಶ್ವಬ್ಯಾಂಕ್‌ನಂತೆ ಗ್ಯಾಟ್ ಶಾಶ್ವತ ಸಂಸ್ಥೆಯಲ್ಲಾದರೂ ಗ್ಯಾಟ್ ಒಪ್ಪಂದದ ಬಗ್ಗೆ ಡಂಕೆಲ್ ಪ್ರಸ್ತಾಪಗಳು ಇನ್ನೂ ಹೆಚ್ಚು ಅಪಾಯಕಾರಿ. ದೂರಗಾಮಿ ದುಷ್ಪರಿಣಾಮವುಳ್ಳದ್ದು. ಏಕೆಂದರೆ ಒಂದು ಬಾರಿ ಗ್ಯಾಟ್ ಒಪ್ಪಂದಕ್ಕೆ ಒಂದು ದೇಶ ಸಹಿ ಹಾಕಿದರೆ ಅದು ಶಾಶ್ವತ ಒಪ್ಪಂದ. ಜನರ ಒತ್ತಡದಿಂದ ಡಂಕೆಲ್ ಪ್ರಸ್ತಾಪ ಒಪ್ಪದ ಸರಕಾರ ಬಂದರೂ ಅದು ಈ ಅಂತರ್ರಾಷ್ಟ್ರೀಯ ಒಪ್ಪಂದವನ್ನು ಮನ್ನಿಸಬೇಕಾಗುತ್ತದೆ. ಐ.ಎಂ.ಎಫ್, ವಿಶ್ವಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡರೆ, ಹಲವಾರು ಅಪಾಯಕಾರಿ ಶರತ್ತುಗಳನ್ನು ಪಾಲಿಸಬೇಕಾಗುತ್ತವೆ. ಆದರೆ ಆ ಸಾಲವನ್ನು ತೆಗೆದುಕೊಳ್ಳದ ನಿರ್ಧಾರ ಮಾಡಿದರೆ, ಈ ಶರತ್ತುಗಳು ಮಾಯವಾಗುತ್ತವೆ.

ಆ ತರೆ ಗ್ಯಾಟ್ ಒಪ್ಪಂದ (ಡಂಕೆಲ್ ಪ್ರಸ್ತಾಪಗಳ ಮೇಲೆ ಆಧಾರಿತ) ಹಾಗಲ್ಲ. ಇದನ್ನು ಹೊಸ ಸರಕಾರವೊಂದು ಒಪ್ಪದಿದ್ದರೆ ಅದು ಒಂದು ಆರ್ಥಿಕ ಯುದ್ಧಕ್ಕೆ ಸಜ್ಜಾಗಬೇಕಾಗುತ್ತದೆ.

ಏಕೆಂದರೆ ಡಂಕೆಲ್ ಪ್ರಸ್ತಾಪಗಳಲ್ಲಿ ಕ್ರಾಸ್ ರಿಟಾಲಿಯೆಷನ್ ನಿಯಮಗಳನ್ನು ಸೇರಿಸಲಾಗಿದೆ. ಇದರ ಪ್ರಕಾರ ಅಂತರ್ರಾಷ್ಟ್ರೀಯ ವ್ಯಾಪಾರದ ಅಸಂಖ್ಯ ವ್ಯವಹಾರಗಳಲ್ಲಿ ಎಲ್ಲ ಹೆಚ್ಚು ಕಡಿಮೆಯಾದರೂ ಆ ದೇಶದ ಮೇಲೆ ಎಲ್ಲಾ ರಂಗದಲ್ಲಿಯೂ ಪ್ರತಿ ಏಟು (ರಿಟಾಲಿಯೆಷನ್) ಹಾಕಬಹುದು. ಔಷಧಿಗಳ ವಿಷಯದಲ್ಲಿಯೋ, ಅಥವಾ ಬೀಜದ ವಿಷಯದಲ್ಲಿಯೋ, ಕಬ್ಬಿಣದ ಅದುರಿನ ವಿಷಯದಲ್ಲಿಯೋ ಗ್ಯಾಟ್ ಒಪ್ಪಂದ ನಿಯಮಗಳನ್ನು ಮುರಿದರೆ ತಂತ್ರಜ್ಞಾನ, ಆಮದು ಯಂತ್ರೋಪಕರಣಗಳು, ಕಂಪ್ಯೂಟರ್‌ಗಳು, ಬಿಡಿಭಾಗಗಳು, ಈ ರೀತಿ ಎಲ್ಲಾ ವಿಭಾಗಗಳಲ್ಲಿ ಪ್ರತಿ ಏಟುಕೊಡಬಹುದು.

ಇನ್ನೊಂದು ಅಪಾಯಕಾರಿ ಅಂಶವೆಂದರೆ ಡಂಕೆಲ್ ಪ್ರಸ್ತಾಪಗಳು ಚರ್ಚೆಗೆ ತಯಾರಿಸಿದ ಕರಡಲ್ಲ. ಇದರ ಎಲ್ಲಾ ಶರತ್ತುಗಳಿಗೆ ಒಪ್ಪಬೇಕು ಅಥವಾ ಎಲ್ಲವನ್ನೂ ಬಿಡಬೇಕು ಎಂಬ ವಿಚಿತ್ರ ಶರತ್ತು ಪೂರ್ಣ ಪ್ರಮಾಣದ ಹೇರಿಕೆ ಅಲ್ಲವೇ?

ಡಂಕೆಲ್ ಪ್ರಸ್ತಾಪಗಳು ಮೊದಲ ಬಾರಿಗೆ ಆಂತರಿಕ ನೀತಿಗಳ ಬಗ್ಗೆ ಪ್ರತಿಬಂಧ, ಕಟ್ಟುನಿಟ್ಟುಗಳನ್ನು ವಿಧಿಸುತ್ತದೆ.

ಇದರಲ್ಲಿ ಮುಖ್ಯವಾದದ್ದು ಕೃಷಿಗೆ ಸಂಬಂಧಿಸಿದ್ದು, ನಮ್ಮ ರೈತರನ್ನು, ಜನಸಾಮಾನ್ಯರನ್ನು ನೇರವಾಗಿ ಕಾಡುವ ನೀತಿ. ಡಂಕೆಲ್ ಪ್ರಸ್ತಾಪಗಳ ಪ್ರಕಾರ ಕೃಷಿ ಮತ್ತು ಆಮದಿನ ಮೇಲೆ ಎಲ್ಲಾ ಪ್ರತಿಬಂಧಗಳನ್ನು ತೆಗೆಯಬೇಕು ಕೃಷಿ ಉತ್ಪಾದನೆಯ ನಿರ್ದಿಷ್ಟ ಶೇಕಡವಾರು ಆಮದು ಮಾಡಲೇಬೇಕು. (ಅಗತ್ಯವಿರಲಿ, ಅಗತ್ಯವಿಲ್ಲದಿರಲೀ ರಸಗೊಬ್ಬರ, ವಿದ್ಯುತ್, ನೀರಾವರಿ ಮುಂತಾದವುಗಳಿಗೆ ನೀಡುವ ಸಬ್ಸಿಡಿ ತೆಗೆಯಬೇಕು. ಲೆವಿಪದ್ಧತಿ ಹೋಗಬೇಕು. ಆಹಾರಧಾನ್ಯಗಳ ರೇಷನ್ ಪದ್ಧತಿ ತೆಗೆಯಬೇಕು. ಕೃಷಿ ಉತ್ಪನ್ನಗಳ ಸಾಗಾಣಿಕೆ ಇರುವ ಎಲ್ಲಾ ನಿರ್ಬಂಧಗಳನ್ನು ತೆಗೆಯಬೇಕು.

ಇದು ಕೃಷಿ ಕ್ಷೇತ್ರದಲ್ಲಿ ಈ ನಿರ್ಬಂಧಗಳ ಸರಪಣಿ. ಸರ್ಕಾರ ಒಪ್ಪಿದರೆ ನಮ್ಮದೇ ಕೃಷಿ ನೀತಿ ಎಂಬುದು ಏನೂ ಉಳಿಯುವುದೂ ಇಲ್ಲ. ರೈತರಿಗೆ ಅನುಕೂಲವಾದ ಯಾವುದೇ ನಿರ್ಣಯವನ್ನೂ ಸರಕಾರ ಕೈಗೊಳ್ಳುವಂತಿಲ್ಲ.

ಬೌದ್ಧಿಕ ಆಸ್ತಿ ಹಕ್ಕುಗಳ ಬಗ್ಗೆ ಡಂಕೆಲ್ ಪ್ರಸ್ತಾಪಗಳನ್ನು ಒಪ್ಪಿದರೆ, ಭಾರತ ತನ್ನ ಅತ್ಯಂತ ಪ್ರಗತಿಪರ ಪೇಟೆಂಟ್ ಕಾನೂನು 1970 ನ್ನು ಬದಲಾಯಿಸಬೇಕಾಗುತ್ತದೆ. 1911ರ ವಸಾಹತುಶಾಹಿ ಕಾಲದ ಕಾನೂನಿಗೆ ವಾಪಸು ಹೋಗಬೇಕಾಗುತ್ತದೆ. ಬೀಜ, ಗಿಡಮರ, ಬಳ್ಳಿ, ಪ್ರಾಣಿ ಪಕ್ಷಿಗಳು, ಎಲ್ಲಾ ವೈಜ್ಞಾನಿಕ ಸಂಶೋಧನೆಗಳು, ಗಣಿತದ ತಂತ್ರಜ್ಞಾನಗಳನ್ನು ಪೇಟೆಂಟ್ ಮಾಡಬಹುದು.

ಆ ಮೂಲಕ ಅದನ್ನು ಖಾಸಗಿ ಆಸ್ತಿ ಮಾಡಬಹುದು. ಇದರಿಂದಾಗಿ ತಕ್ಷಣ ಬೀಜ ಹಾಗೂ ಔಷಧಿಗಳ ಬೆಲೆ ವಿಪರೀತ ದುಬಾರಿಯಾಗುತ್ತವೆ. ಈ ಕ್ಷೇತ್ರವಲ್ಲಿ ಪೇಟೆಂಟ್ ಗಳನ್ನು ಹೊಂದಿರುವ ಬಹುರಾಷ್ಟ್ರೀಯ ಸಂಸ್ಥೆಗಳ ಕಪಿಮುಷ್ಟಿಯಲ್ಲಿ ಸಿಕ್ಕಿ, ಬೀಜ ಔಷಧಿಗಳ ಕೃತಕ, ಅಭಾವವೂ ತಲೆದೋರಬಹುದು. ಇದರಿಂದ ಭಾರತದ ವಿಜ್ಞಾನ-ತಂತ್ರಜ್ಞಾನ ಸಂಶೋಧನೆಯಲ್ಲಿ ಸ್ವಾವಲಂಬನೆಗೂ ತೀವ್ರ ಧಕ್ಕೆ ಉಂಟಾಗುತ್ತದೆ.

ಡಂಕೆಲ್ ಪ್ರಸ್ತಾಪಗಳ ಭಾಗವಾಗಿ ಬರುವ TRIMS (Trade Reliats Investment Measures ಅಥವಾ ವ್ಯಾಪಾರ ಸಂಬಂಧಿತ ಬಂಡವಾಳ ಹೂಡಿಕೆ ಕ್ರಮಗಳು) ನಮ್ಮ ಕೈಗಾರಿಕೆಗೆ ಅದರಲ್ಲಿ ಸಾಧಿಸಿರುವ ಸೀಮಿತ ಸ್ವಾವಲಂಬನೆಗೆ ದೊಡ್ಡ ಮಾರಿ. ನಮ್ಮ ದೇಶದ ಕೈಗಾರಿಕೆಗೆ ಉತ್ತೇಜನ ನೀಡಲು ಬೆಳೆಸಲು, ಆಮದು ತಂತ್ರಜ್ಞಾನವನ್ನು ಅರಗಿಸಿಕೊಳ್ಳಲು ದೇಶೀಯ ತಂತ್ರಜ್ಞಾನ ಬೆಳೆಸಲು, ಈಗ ವಿದೇಶೀ ಕಂಪನಿಗಳ ಮೇಲೆ ಇರುವ ಎಲ್ಲಾ ನಿರ್ಬಂಧಗಳನ್ನು ತೆಗೆದು ಹಾಕಬೇಕಾಗುತ್ತದೆ. TRIMS ಉದ್ದೇಶ ಆರ್ಥಿಕ, ಹಿಂಜರಿತದಿಂದ ತತ್ತರಿಸುವ ಸಾಮ್ರಾಜ್ಯದೇಶಗಳ ಕೈಗಾರಿಕೆಗೆ ಬಡದೇಶಗಳ ಮಾರುಕಟ್ಟೆ ಒದಗಿಸುವುದು. ಗ್ಯಾಟ್ (GATS - General Agreement on Trade in Services - ಸೇವಾವಿಭಾಗದ ವ್ಯಾಪಾರದ ಸಾರ್ವತ್ರಿಕ ಒಪ್ಪಂದ) ಮೊದಲ ಬಾರಿಗೆ ಸೇವಾವಿಭಾಗವನ್ನು ಅಂತರ್ರಾಷ್ಟ್ರೀಯ ವ್ಯಾಪಾರದ ನಿಯಮಗಳಿಗೆ ಒಳಪಡಿಸುತ್ತದೆ. ಬ್ಯಾಂಕ್‌ಗಳು, ಇನ್ಶೂರೆನ್ಸ್, ಟೆಲಿಫೋನ್, ಮುಂತಾದ ದೂರ ಸಂಪರ್ಕ ಸಾಧನಗಳು, ರೈಲು, ರಸ್ತೆ, ವಿಮಾನ, ಹಡಗು ಮುಂತಾದ ಸಾಗಾಣಿಕೆ ಇತ್ಯಾದಿಗಳು ಸೇವಾ ಕ್ಷೇತ್ರಗಳು. ನಮ್ಮ ದೇಶದ ಜನಸಂಖ್ಯೆಯ ವಿಸ್ತಾರದಿಂದಾಗಿ ಸೇವಾಕ್ಷೇತ್ರದಲ್ಲಿ ವಿಫುಲ ಅವಕಾಶಗಳಿವೆ. ಇದನ್ನು ಶೋಷಣೆಗೆ ಒಳಪಡಿಸುವ ಹವಣಿಕೆ ಗ್ಯಾಟ್‌ನದ್ದು. ಇಲ್ಲೂ ನಮ್ಮ ಸ್ವಾವಲಂಬನೆಗೆ ಅನುಗುಣವಾಗಿ ವಿದೇಶಿ ಕಂಪನಿಗಳನ್ನು ಮೇಲೆ ಇರುವ ನಿರ್ಬಂಧ ತೆಗೆದುಹಾಕುವುದು ಮುಖ್ಯ ಉದ್ದೇಶ.

ಈ ರೀತಿ ಡಂಕೆಲ್ ಪ್ರಸ್ತಾಪಗಳು, ದೇಶ-ವಿರೋಧಿ ಸ್ವರೂಪ ಸ್ಪಷ್ಟ, ಭಾರತದ ರೈತರನ್ನು, ಕಾರ್ಮಿಕರನ್ನು, ಕೈಗಾರಿಕೆಗಳನ್ನು, ಬ್ಯಾಂಕ್, ವಿಮೆ ಮುಂತಾದ ಉದ್ದಿಮೆಗಳನ್ನು ಕೊನೆಗೆ ಭಾರತದ ಜನರ ಸ್ವಯಂಮಾಡಳಿತ ಪರಮರೂಪವಾದ ಸಂಸತ್ತಿನ ಅಧಿಕಾರಗಳನ್ನು ಕತ್ತರಿಸುವ ಶಕ್ತಿ ಡಂಕೆಲ್. ಇವನ್ನು ಸಾರಸಗಟಾಗಿ ತಿರಸ್ಕರಿಸಬೇಕು.

ಆದರೆ ನರಸಿಂಹರಾವ್ ಸರಕಾರ ಇವನ್ನೆಲ್ಲಾ ವಿರೋಧಿಸುವ ಬದಲು ಅವನ್ನು ಒಪ್ಪಿಕೊಳ್ಳುವಂತೆ ದೇಶವನ್ನು ಸಜ್ಜುಗೊಳಿಸುವ ಪ್ರಯತ್ನನಡೆದಿವೆ. ದುಡಿಯುವ ಜನಗಳು, ದೇಶ ಪ್ರೇಮಿಗಳೆಲ್ಲಾ ಇವನ್ನು ಖಡಾಖಂಡಿತವಾಗಿ ವಿರೋಧಿಸಬೇಕು.

(ವಿವರಗಳಿಗೆ "ಐಕ್ಯರಂಗ" ಸಂಚಿಕೆ 15 (1993)ರ ಸಂಚಿಕೆ 18,19,20. 25-26ರ ಲೇಖನಗಳನ್ನು ನೋಡಿ)

ಆಗಸ್ಟ್ 19ರ 'ಜೈಲ್‌ಭರೋ' ಹಾಡು

ಬಂಡಿ ಹಿಂದೆ ಬಂಡಿ ಕಟ್ಟಿ
ಸಾವಿರಾರು ಬಂಡಿ ಕಟ್ಟಿ
ನಿನ್ ಬಂಗ್ಲಿಗ್ ಬರ್ತೇವ್ ನೋಡೋ
ಓ! ಮಳ್ಳ ನರಸಿಂಹರಾಯ

ಈ ನೂರು ನದಿಯ ದೇಶ
ಮಾಡ್ಲಾಕೊಂಟಿಯಾ ನೀ ನಾಶ
ಹತ್ತುರಿದೈತೆ ನಮ್ ರೋಷ
ಸುಡುತೈತಿ ನಿನ್ ಹಗಲು ವೇಷ

ಕೋಟಿ ಕೋಟಿ ಜನರ ನಾಡು
ಅವರ್ಗೊಟ್ಟೆ ಇವತ್ ಬೆಂಗಾಡು
ಬಂದ್ಹೀಟಲ್ಲೊ ನಿಂಗ ಖಬರು
ಅಹಾ! ಡಾಲರಿನದೇ ಕಾರೋಬಾರು

ನಿನ್ ಹೊಸ ಅರ್ಥ ನೀತಿ
ದಿವಾಳಿಗೆಂದೇ ಖ್ಯಾತಿ
ನೀನಲ್ಲವೋ ಪ್ರಧಾನಿ
ಐ.ಎಂ.ಎಫ್‌ನ ಪೀಕುದಾನಿ

ಕೋಮುವಾದಿ ಸೈತಾನ
ಮಸ್ತಾಗಿ ಕುಂತಾನ
ಅಂಸ್ತಂಗ ಹಾಕಿ ಹಾರ
ಸುರಿಸಿಯೋ ಖೋಟಿ ಕಂಣೀರ

ಇದೋ ತುಂಬೇವಿ ಸೆರಿಮನಿ
ಅದ್ಹಾ ನಮಗರಮನಿ
ನೀ ಕುಂತಿರೋ ಅರಮನಿ
ಆಗುತಾದೋ ಖರೆ ಸೆರಿಮನಿ

-'ಫರಾಜ್'

ಬೇಡಿಕೆ 14 — ಬಡ ಮತ್ತು ಮಧ್ಯಮ ರೈತರಿಗೆ ರಸಗೊಬ್ಬರ ಸಹಾಯಧನವನ್ನು ಮುಂದುವರೆಸಬೇಕು. ಗ್ರಾಮೀಣ ಬಡವರಿಗಾಗಿ ಉದ್ಯೋಗ ಮತ್ತು ಬಡತನ ನಿವಾರಣ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಗ್ರಾಮೀಣ ಮತ್ತು ಕೃಷಿ ಆಧಾರಿತ ಉದ್ದಿಮೆಗಳನ್ನು ಅಭಿವೃದ್ಧಿ ಪಡಿಸಬೇಕು.

ವಿಶ್ವಬ್ಯಾಂಕ್ ಐ.ಎಂ.ಎಫ್‌ಗಳ ನಿರ್ದೇಶನದಂತೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹಣಕಾಸಿನ ಖೋತಾವನ್ನು ಕಡಿಮೆ ಮಾಡಬೇಕು. ಹೀಗೆ ಹಣಕಾಸಿನ ಖೋತಾ ಕಡಿಮೆ ಮಾಡಲು ಸರ್ಕಾರ ತನ್ನ ಖರ್ಚುಗಳನ್ನ ಕಡಿಮೆ ಮಾಡಬೇಕು. ಈ ಸ್ಥಿತಿಯಲ್ಲಿ ಸರ್ಕಾರ ಎಲ್ಲ ಸಹಾಯಧನಗಳನ್ನು ಹಿಂತೆಗೆದುಕೊಳ್ಳುವ ಅಥವಾ ಕಡಿತ ಮಾಡುವ ನಿರ್ಧಾರ ಕೈಗೊಂಡಿದೆ. ಇದು ಸಾಮಾನ್ಯ ಜನತೆಯನ್ನು ಅತೀವ ಸಂಕಷ್ಟಕ್ಕೆ ಗುರಿಮಾಡಿದೆ.

ರಸಗೊಬ್ಬರಗಳಿಗೆ ಇಲ್ಲಿಯವರೆಗೆ ನೀಡುತ್ತಿದ್ದ ಸಹಾಯಧನದಲ್ಲಿ ಸರ್ಕಾರ ತೀವ್ರವಾಗಿ ಕಡಿತ ಮಾಡಿದೆ. ಇದರಿಂದ ರಸಗೊಬ್ಬರಗಳ ಬೆಲೆ ಒಂದೇ ಸಾರಿಗೆ ಶೇ. 40 ರಷ್ಟು ಏರಿದೆ. ನಂತರದಲ್ಲಿ ಇದನ್ನು ಸ್ವಲ್ಪ ಇಳಿಸಿದರೂ ಶೇ. 30 ರಷ್ಟು ಏರಿಕೆ ಮುಂದುವರಿದೇ ಇದೆ.

ಉತ್ತಮ ಬೇಸಾಯ ಮಾಡಿ ಎಕರೆಗೆ ಹೆಚ್ಚು ಬೆಳೆ ಬೆಳೆಯುವವರು ಬಡ ಮತ್ತು ಮಧ್ಯಮ ರೈತರು. ಈ ರೈತರಿಗೆ ರಸಗೊಬ್ಬರಗಳ ಅವಶ್ಯಕತೆ ಬಹಳವಿದೆ. ಆದರೆ ಅವರು ಹೆಚ್ಚಿನ ಬೆಲೆ ತೆರಲಾರರು. ಅಲ್ಲದೆ ಸಣ್ಣ ಹಿಡುವಳಿಯಲ್ಲಿ ಕೃಷಿ ಲಾಭದಾಯಕವಾಗೂ ಉಳಿಯುವುದಿಲ್ಲ. ಇವೆಲ್ಲವುಗಳ ಪರಿಣಾಮ ಈ ಬಡ ರೈತರ ಹೊಟ್ಟೆಯ ಮೇಲೆ ಹೊಡೆತ. ಅವರು ಲಾಭದಾಯಕವಾಗಿ ಉತ್ಪಾದಿಸುವುದೂ ಸಾಧ್ಯವಾಗುವುದಿಲ್ಲ. ಜೊತೆಗೆ ಸಾಲಗಳ ಸುಳಿಯಲ್ಲಿ ಸಿಕ್ಕಿ ಒದ್ದಾಡಬೇಕಾಗುತ್ತದೆ.

ಇದು ಒಟ್ಟಾರೆಯಾಗಿ ದೇಶದ ಆರ್ಥಿಕದ ಮೇಲೂ ದುಷ್ಪರಿಣಾಮ ಬೀರುತ್ತದೆ. ಎಂಬತ್ತೆಂಟು ಕೋಟಿ ಬಾಯಿಗಳಿಗೆ ಅನ್ನ ನೀಡಬೇಕಾದ ನಾವು ಕಡಿಮೆ ಉತ್ಪಾದಿಸಿದರೆ ಹಲವರು ಉಪವಾಸ ಉಳಿಯಬೇಕಾಗುತ್ತದೆ.

ಇವೆಲ್ಲವುಗಳ ಹಿನ್ನೆಲೆಯಲ್ಲಿ ದೇಶದ ಬೆನ್ನೆಲುಬಾದ ಬಡ ಮತ್ತು ಮಧ್ಯಮ ರೈತರಿಗೆ ಮೊದಲಿನಂತೆ ರಸಗೊಬ್ಬರ ಸಹಾಯಧನವನ್ನು ಮುಂದುವರಿಸಲೇಬೇಕು.

ಬೇಡಿಕೆ : 15 — ಸಾರ್ವಜನಿಕ ವಿತರಣಾ ಪದ್ಧತಿಯನ್ನು ಬಲಪಡಿಸಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಎಲ್ಲ ಅವಶ್ಯಕ ಸಾಮಗ್ರಿಗಳನ್ನು ಸುಲಭ ಬೆಲೆಯಲ್ಲಿ ಒದಗಿಸಬೇಕು. ಇತ್ತೀಚಿನ ಆಡಳಿತಾತ್ಮಕ ಬೆಲೆ ಹೆಚ್ಚಳ ಮತ್ತು ಸಾಗಾಣಿಕೆ ದರದ ಹೆಚ್ಚಳಗಳನ್ನು ಹಿಂತೆಗೆದುಕೊಳ್ಳಬೇಕು.

ದೇಶದಲ್ಲಿ ಹಣದುಬ್ಬರದ ದರ ಹೆಚ್ಚುತ್ತಲೇ ಇದೆ. ಈ ದರವನ್ನು ಕಡಿಮೆ ಮಾಡಿ ಅಂದರೆ ಕಡಿಮೆ ದರದಲ್ಲಿ ಹಣದುಬ್ಬರವಾಗಿರುವುದನ್ನೇ ಹೆಗ್ಗಳಿಕೆಯೆಂಬಂತೆ ಸರ್ಕಾರ ಪ್ರಚಾರ ಮಾಡಿಕೊಳ್ಳುತ್ತಿದೆ. ಕಳೆದ ಒಂದು ದಶಕವನ್ನು ಗಣನೆಗೆ ತೆಗೆದುಕೊಂಡರೆ ಬಳಕೆದಾರರ ಬೆಲೆ ಸೂಚ್ಯಂಕ ಶೇ. 9.2ರ ಚಕ್ರವರದಲ್ಲಿ ಏರಿದೆ. ಇದರರ್ಥ ರೂಪಾಯಿಯ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿದೆ ಎಂದರ್ಥ. ಒಂದು ದಶಕದ ಹಿಂದೆ ಒಂದು ರೂಪಾಯಿಗೆ ಏನೇನು ಸಾಮಾನುಗಳನ್ನು ಕೊಳ್ಳಬಹುದಿತ್ತೊ ಅದೇ ಸಾಮಾನುಗಳನ್ನು ಅದೇ ಪ್ರಮಾಣದಲ್ಲಿ ಇಂದು ಕೊಳ್ಳುವುದು ಸಾಧ್ಯವಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಬೆಲೆಗಳು ಏರಿವೆ ಎಂದರ್ಥ.

ಹೀಗೆ ಬೆಲೆ ಏರಿದಾಗ ಬಡವರ ಆದಾಯ ಏರುವುದಿಲ್ಲ. ಆದ್ದರಿಂದ ಅವರ ಗೋಳು ಹೆಚ್ಚಾಗುತ್ತದೆ. ಅನ್ನ ಬಟ್ಟೆಗಳನ್ನು ಕೊಳ್ಳುವುದೇ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಡಿಮೆ ದರದಲ್ಲಿ ಈ ಬಡ ಜನಸಾಮಾನ್ಯರಿಗೆ ಅವಶ್ಯಕ ಸಾಮಗ್ರಿಗಳನ್ನು ಪೂರೈಸುವ ಅಗತ್ಯವಿರುತ್ತದೆ. ನ್ಯಾಯಬೆಲೆ ಅಂಗಡಿಗಳ ಮೂಲಕ ಈ ವಿತರಣೆ ಮಾಡಬೇಕಾಗುತ್ತದೆ.

ವಿಶ್ವಬ್ಯಾಂಕ್, ಐ.ಎಂ.ಎಫ್‌ಗಳ ಒತ್ತಡಕ್ಕೆ ಮಣಿದು ಹಣಕಾಸಿನ ಖೋತಾ ಕಡಿಮೆ ಮಾಡ ಹೊರಟಿರುವ ಸರ್ಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನೇ ತೆಗೆದುಹಾಕಲು ಹೊಂಚು ಹಾಕುತ್ತಿದೆ. ಸಹಾಯಧನದಲ್ಲಿ ಆಗಲೇ ಕಡಿತ ಮಾಡಲಾಗಿದೆ. ಇದಲ್ಲದೆ ಆಡಳಿತಾತ್ಮಕವಾಗೂ ಅಂದರೆ ಸರಕಾರವೇ ಆದೇಶ ಹೊರಡಿಸಿ ಸಾಮಗ್ರಿಗಳ ಬೆಲೆಗಳನ್ನು ಹೆಚ್ಚಿಸಲಾಗಿದೆ. ರೈತರಿಗೆ ಅವರ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ನೀಡುವ ನೆವದಲ್ಲಿ ಇದನ್ನು ಮಾಡಲಾಗಿದೆ. ಇದಲ್ಲದ ಸಾಗಾಣಿಕೆ ಖರ್ಚುಗಳ ದರವನ್ನು ಹೆಚ್ಚಿಸಲಾಗಿದೆ.

ಇವೆಲ್ಲವುಗಳಿಂದಾಗಿ ಬೆಲೆಗಳು ವಿಪರೀತ ಏರಿದ್ದು ರೇಷನ್ ಅಂಗಡಿಗಳಲ್ಲೂ ಕಡಿಮೆ ದರದಲ್ಲಿ ಸಾಮಗ್ರಿಗಳು ದೊರೆಯುತ್ತಿಲ್ಲ.

ಇದು ಬಡಜನತೆಯ ಕಷ್ಟಗಳನ್ನು ಹೆಚ್ಚಿಸಿದೆ. ಆದ್ದರಿಂದ ಸರ್ಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಬಲಪಡಿಸಬೇಕು ಬಡ ಮತ್ತು ಮಧ್ಯಮ ವರ್ಗಗಳ ಜನರಿಗೆ ಎಲ್ಲ ಅವಶ್ಯಕ ಸಾಮಗ್ರಿಗಳನ್ನು ಕಡಿಮೆ ದರದಲ್ಲಿ ಒದಗಿಸಬೇಕು. ಆಡಳಿತಾತ್ಮಕ ಮತ್ತು ಸಾಗಾಣಿಕೆ ಬೆಲೆ ಹೆಚ್ಚಳವನ್ನು ಹಿಂತೆಗೆದುಕೊಳ್ಳಬೇಕು.

"ಹದ್ದು ಮಿ...
ಕೋಟ...
"ಭ...

ಬೇಡಿಕೆ : 16

ಕಾಮಪ್ರಚೋದನೆ, ಹಿಂಸಾಚಾರ, ...
ಹಾಗೂ ಅಂಧ ಶ್ರದ್ಧೆಗಳ ವೈಭವೀಕರಣ ನಮ...
ಪ್ರಮುಖ ಪ್ರಸಾರ ಮಾಧ್ಯಮಗಳಲ್ಲಿ ಕಂಡು ...
ತ್ತಿದೆ- ಚಲನಚಿತ್ರ, ಟೆಲಿವಿಷನ್, ವಿಡಿಯೋ, ...
ಕೇಬಲ್ ಹಾಗೂ ವಿದೇಶಿ ಉಪಗ್ರಹ ಟಿ.ವಿ...
ಗಳಲ್ಲಿ ಇದು ಬಹಳ ಕಾಲದಿಂದ ನಡೆಯುತ್ತಿ...
ಬಗ್ಗೆ ಇದ್ದ ಕೆಲವು ನಿರ್ಬಂಧಗಳನ್ನೂ ಉದಾರೀ...
ಹೆಸರಲ್ಲಿ ತೆಗೆದು ಹಾಕಲಾಗಿದೆ. ಉದಾಹರಣೆ...
ಎನ್.ಎಫ್.ಡಿ.ಸಿ. ಖರೀದಿಸುತ್ತಿದ್ದ ವಿದೇಶಿ ...
ಬಗ್ಗೆ ಕೆಲವು ಮಾರ್ಗದರ್ಶಕ ಸೂತ್ರಗಳನ್ನು ...
ಲಾಗುತ್ತಿತ್ತು. ಆದರೆ ಈಗಿರುವ ಒಂದೇ ಮಾರ್ಗ...
ಸೂತ್ರವೆಂದರೆ ಅದನ್ನು ಎಷ್ಟು ಹೆಚ್ಚಿನ ಬೆಲೆಗೆ...
ಟಮಾಡಬಹುದು. ಇದರಿಂದಾಗಿ ಮೇಲೆ ಹೇಳ...
ವೀಕರಣ ವಿಪರೀತ ಇರುವ ವಿದೇಶಿ ಫಿಲಂಗ...

ಬೇಡಿಕೆ : 17

ಇಡೀ ದೇಶದ ದುಡಿಯುವ ಜನ, ದೇಶಪ್ರೇ...
ನರಸಿಂಹರಾವ್ ಸರಕಾರದ ಐ. ಎಂ.ಎಫ್ -ವಿ...
ನಿರ್ದೇಶನದ ನೀತಿಗಳ ವಿರುದ್ಧ ಜಾತಿ-ಮತಗಳ ಭೇದ...
ಗಂಭೀರ ಹೋರಾಟದಲ್ಲಿ ತೊಡಗಿದ್ದಾಗ ಒಂದೆಡೆ ಆ...
ಎಸ್. -ವಿ.ಹೆಚ್.ಪಿ. -ಬಿಜೆಪಿ ನೇತೃತ್ವದ ಶಕ್ತಿಗಳು ...
ವೆಡೆ ಅಲ್ಪಸಂಖ್ಯಾತ ಮೂಲಭೂತವಾದಿಗಳು ಹಾಗ...
ಸಂಕುಚಿತ ದೃಷ್ಟಿಯ ಪ್ರತ್ಯೇಕತಾವಾದಿಗಳು ಈ ಹೋರ...
ರೂಪಿಸಿದ ಐಕ್ಯತೆಯನ್ನು ಮುರಿಯುವಲ್ಲಿ, ಜನಗಳನ...
ಮೇಲೆ ಒಬ್ಬರನ್ನು ಎತ್ತಿಕಟ್ಟುವುದಲ್ಲಿ ತಲ್ಲೀನರಾಗಿದ್ದಾರೆ...

ದುಡಿಯುವ ಜನಗಳ ಐಕ್ಯ ಹೋರಾಟ ...
ಳದಂತೆ ತಡೆಯುವುದೇ ಅವರ ಒಂದು ಮುಖ್ಯ ...
ಎಂಬುದು ಹಲವಾರು ಬಾರಿ ಸ್ಪಷ್ಟಪಟ್ಟಿದೆ. (1) ಆ...
ಎಸ್. ನೇತೃತ್ವದ ಕೋಮುವಾದಿಗಳಿಗೆ ನರಸಿಂಹರಾ...
ಕಾರದ ಆರ್ಥಿಕ ನೀತಿಗಳ ಬಗ್ಗೆ ವಿರೋಧ...
ಅವರೂ ಅಂತಹುದೇ ನೀತಿಗಳನ್ನು ಬಯಸುತ್ತಾರ ಎಂ...
ತ್ತಿನಲ್ಲಿ ಬಜೆಟ್ ಮತ್ತು ಆರ್ಥಿಕ ನೀತಿಗಳ ಮೇಲಿನ...
ಗಳ ಸಮಯದಲ್ಲಿ ಸ್ಪಷ್ಟವಾಗಿದೆ. 2) ಎರಡು ವರ್ಷಗ...
ಅಮೇರಿಕಾದಲ್ಲಿ ಅಡ್ವಾಣಿ ನರಸಿಂಹರಾವ್ ಸರಕಾರ...
ನೀತಿಗಳನ್ನು ಸಮರ್ಥಿಸಿದರು. ಇತ್ತೀಚೆಗೆ ನರಸಿ...
ಸರ್ಕಾರ ರಾಜೀನಾಮೆ ನೀಡಬೇಕು ಎಂದ ಮೇಲು...
ಪ್ರಧಾನ ಕಾರ್ಯದರ್ಶಿ ಆರ್ಥಿಕ 'ಉದಾರೀಕರಣ' ಪ್ರಕ್ರಿ...
ಲಾಗುವುದಿಲ್ಲ ಎಂದಿದ್ದಾರೆ. 3) ದುಡಿಯುವ ಜನಗಳ ...
ಹೋರಾಟ ನಡೆಯುವ ಸಂದರ್ಭದಲ್ಲೆಲ್ಲಾ ಅದಕ್ಕೆ ಈ ...
ವಾದಿಗಳು ಬೆಂಬಲ ನೀಡಿಲ್ಲ ಮಾತ್ರವಲ್ಲ, ಇತ್ತೀಚಿ...
ವರ್ಷಗಳಲ್ಲಿ ಶ್ರೀರಾಮ ಜನ್ಮಭೂಮಿ ಹೆಸರಲ್ಲಿ ಬೇ...
ಗಳ ಹೆಸರೂ ಚಳುವಳಿ ವಿಚ್ಛಿದ್ರಕಾರಿ ಸೃಷ್ಟಿಸಲಾಯಿತ...
ಬರ್ 25,1992 ರ ಐತಿಹಾಸಿಕ 'ಪಾರ್ಲಿಮೆಂಟ್ ಚ...
ಹದಿನೈದೇ ದಿನಗಳೊಳಗೆ ಬಾಬ್ರಿ ಮಸೀದಿ ಧ್ವಂಸದ ...
ಕೋಮುವಾದಿಗಳು ನಡೆಸಿದ್ದು ಕೇವಲ ಕಾಕತಾಳೀಯ...

ಬೇಡಿಕೆ : 20 — ಸ್ವದೇಶಿ ... ಸಬೇಕು ...

ಉದಾರೀಕರಣ ನೀತಿಗಳು ಸಂಶೋಧನೆ ಹಾ...
ವೃದ್ಧಿಯ ಮೇಲೆ ಭಾರಿ ಹೊಡೆತ ಕೊಟ್ಟಿವೆ. ಭಾ...
ಹೆಚ್ಚಿನ ಸಂಶೋಧನೆ ಹಾಗೂ ಅಭಿವೃದ್ಧಿಯ ಕೆಲಸ ...
ತ್ತಿದ್ದ ಸರ್ಕಾರ ಸ್ಥಾಪಿಸಿದ ರಾಷ್ಟ್ರೀಯ ವೈಜ್ಞಾನಿಕ ಪ್ರಯೋ...
ಲೆಗಳಲ್ಲಿ ಅಥವಾ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಯ...
ಗಗಳಲ್ಲಿ ಸರ್ಕಾರದ ಖಾಸಗೀಕರಣದ ನೀತಿಯೇ ಇ...
ತೀವ್ರ ಹೊಡೆತ ಕೊಟ್ಟಿವೆ.

ರಾಷ್ಟ್ರೀಯ ವೈಜ್ಞಾನಿಕ ಪ್ರಯೋಗಶಾಲೆಗಳಿಗೆ ...
ನೀಡುತ್ತಿದ್ದ ಹಣದಲ್ಲಿ ತೀವ್ರ ಕಡಿತ ಮಾಡಲಾಗುತ್ತಿದೆ. ...
ಪ್ರಯೋಗಶಾಲೆಗಳು ಶೇಕಡಾ 30 ರಷ್ಟು ಅವಶ್ಯ...
ತಾವೇ ಪೂರೈಕೊಳ್ಳಬೇಕೆಂದು ಸರ್ಕಾರದ ನಿರ್ಬಂಧ ...

ಸ್ವದೇಶಿ ತಂತ್ರಜ್ಞಾನಕ್ಕೆ ಹಾಗೂ ತಂತ್ರಜ್ಞಾನವನ್ನು...
ವಾಗಿ ಅರಗಿಸಿಕೊಳ್ಳುವ ಪ್ರಯತ್ನಕ್ಕೆ ಪ್ರೋತ್ಸಾಹ ನೀಡ...
ಜ್ಞಾನ ಆಮದಿನ ಮೇಲೆ ಹಲವಾರು ಶರತ್ತುಗಳನ್ನು ...

...ತ್ತಿದ್ದೀಯೇ ನರಸಿಂಹರಾವ್" ಎಂದು ...ೋಟಿ ಜನರು ಎಚ್ಚರ ವೀಯುವ ...ರತ್ ಬಂದ್" ಏಕೆ?

...ೋದನೆ, ಹಿಂಸಾಚಾರ, ಅಪರಾಧ, ಹಾಗೂ ಅಂಥ ಶ್ರದ್ಧೆಗಳ ವೈಭವೀಕರಣವನ್ನು ಪ್ರಸಾರಮಾಧ್ಯಮ ...ಯಲು ಕ್ರಮಕೈಗೊಳ್ಳಬೇಕು.

...ರದಲ್ಲಿವೆ.

ಕೇಬಲ್ ಟಿವಿ ಹಾಗೂ ಸ್ಯಾಟಿಲೈಟ್ ಟಿವಿ ಬಗ್ಗೆ ಸರ್ಕಾರದ ನಿಷ್ಕ್ರಿಯತೆಯಿಂದಾಗಿ ಅದು ಯಾವುದೇ ಲಂಗುಲಂಗಾಮಿಲ್ಲದೆ ದೇಕಾಬಿಟ್ಟಿ ಬೆಳೆಯುತ್ತಿದೆ. ಈಗಿರುವ ಕಾನೂನುಗಳ ಪ್ರಕಾರ ಇದು ತಪ್ಪಾದರೂ ಸರ್ಕಾರ ಕಣ್ಣು ಮುಚ್ಚಿ ಕೂತಿದೆ. ಈಗ ಅದನ್ನು ಸ್ಥಿರೀಕರಿಸುವ ಹೆಸರಲ್ಲಿ ಕಾನೂನು ಮಾಡಹೊರಟಿದೆ. ಇದರಲ್ಲೂ ಯಾವುದೇ ಸ್ಪಷ್ಟ ನೀತಿ, ಮಾರ್ಗದರ್ಶಕ ಸೂತ್ರಗಳು ಇದ್ದಂತಿಲ್ಲ.

ದೂರದರ್ಶನದ ಕಾರ್ಯಕ್ರಮಗಳು ಸರ್ಕಾರಿ ತುತ್ತೂರಿಗಳಾಗುತ್ತಾ ಜನಪ್ರಿಯತೆ ಕಳೆದು ಕೊಳ್ಳುತ್ತಿದ್ದು, ದೂರದರ್ಶನ ಆಕಾಶವಾಣಿಯ ಅಭಿವೃದ್ಧಿಗೆ ಬೇಕಾದ ಸ್ವಯಂಮಾಡಳಿತ ಇರುವ ಕಾರ್ಪೋರೇಷನ್ ಮಾಡುವ ...ಸಾರ-ಭಾರತಿ ಮಸೂದೆ ಧೂಳು ಮುಕ್ಕುತ್ತಾ ಕೂತಿದೆ. ಪ್ರಾದೇಶಿಕ ಭಾಷೆಗಳಿಗೆ ಪ್ರಾಧಾನ್ಯತೆ ಕೊಡುತ್ತಿಲ್ಲ. ಇಂಗ್ಲೀಷ್-ಹಿಂದಿಗಳನ್ನು ತುರುಕಲಾಗುತ್ತಿದೆ. ದೂರದರ್ಶನ ತನ್ನ ಕಾರ್ಯಕ್ರಮವನ್ನು ಅರ್ಥಪೂರ್ಣ ಹಾಗೂ ಜನಪ್ರಿಯಗೊಳಿಸುವ ಬದಲು ಕೇಬಲ್ ಟಿ.ವಿ. ಸ್ಯಾಟಿಲೈಟ್ ಟಿ.ವಿ. ಜತೆಗೆ ಪೈಪೋಟಿಗಿಳಿದಿದೆ. ಇದಕ್ಕಾಗಿ ಫಿಲಂ ಆಧಾರಿತ ಕಾರ್ಯಕ್ರಮಗಳನ್ನು ಹೆಚ್ಚಿಸಿದೆ. ಇದು ಮೇಲೆ ಹೇಳಿದ ವೈಭವಿಕರಣವನ್ನು ಹೆಚ್ಚಿಸಿದೆ.

ದೂರದರ್ಶನ ಆರಂಭಸಲಿರುವ ಸ್ಯಾಟಿಲೈಟ್ ಚಾನೆಲ್‌ಗಳಿಗೆ ಸಮಯ ಮಾರಾಟಮಾಡುವ ವಿಧಾನ ದೊಡ್ಡ ಹಗರಣವಾಗಿದೆ, ಹಾಸ್ಯಾಸ್ಪದವಾಗುತ್ತಿದೆ. ಪ್ರಸಾರ ಮಾಧ್ಯಮಗಳ ಮೇಲೆ ಗುತ್ತೇದಾರಿ ಬಂಡವಾಳದ ನಿಯಂತ್ರಣದ ಹೆಚ್ಚುತ್ತಿದೆ. ವ್ಯಾಪಾರೀಕರಣದ ಹೆಸರಲ್ಲಿ ಇದು ವಿಪರೀತ ಹೆಚ್ಚುತ್ತಿದೆ.

...ಿ ಹಾಗೂ ಸಂಕುಚಿತ ಕುರುಡು ವಿಚಾರಗಳ ಪ್ರಚಾರವನ್ನು ಹಾಗೂ ಧರ್ಮವನ್ನು ರಾಜಕೀಯಕ್ಕೆ ಬಳಸುವು...ಸಬೇಕು.

ಆದ್ದರಿಂದಲೇ ಕೋಮುವಾದಿಗಳು ಹಾಗೂ ಮೂಲಭೂತವಾದಿಗಳನ್ನು ಬಿಟ್ಟು ಎಲ್ಲಾ ದುಡಿಯುವ ಜನಗಳು, ದೇಶಪ್ರೇಮಿ ಜನಗಳು ಮುಖ್ಯವಾಗಿ ಡಿಸೆಂಬರ್ 6 ರ ಕುಕೃತ್ಯದ ನಂತರ ನಡೆದ ರಕ್ತದೋಕುಳಿಯನ್ನು ಕಂಡಮೇಲೆ ದೇಶದಲ್ಲಿ ಎಲ್ಲಾ ರೀತಿಯ ಕೋಮುವಾದಿ ಪ್ರಚಾರಗಳನ್ನು ನಿಷೇಧಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಮುಂಬೈ, ಅಹಮದಾಬಾದ್, ಭೋಪಾಲ್, ಮತ್ತಿತರ ಕಡೆಗಳಲ್ಲಿನ ಮುಗ್ಧ ಜನರ ರಕ್ತದೋಕುಳಿಗೆ, ಬಾಂಬ್ ಸ್ಫೋಟಗಳಿಗೆ ರಾಜಕೀಯ ಲಾಭಕ್ಕಾಗಿ ಧರ್ಮವನ್ನು ದುರುಪಯೋಗಪಡಿಸಿದ್ದೇ ಕಾರಣ ಎಂದು ಈಗ ಯಾರಿಗೂ ಏನೂ ಸಂಶಯವೇ ಉಳಿದಿಲ್ಲ. ಆದ್ದರಿಂದ ಧರ್ಮವನ್ನು ರಾಜಕೀಯ ಉದ್ದೇಶಗಳಿಗೆ ಬಳಸುವುದರ ಮೇಲೆ ನಿಷೇಧ ಹಾಕಬೇಕು ಎಂಬುದು ದೇಶಪ್ರೇಮಿ ಶಕ್ತಿಗಳ ಒಕ್ಕೊರಲಿನ ಕೂಗು.

> **ದುಡಿಯುವ ಜನಗಳ,**
> **ದೇಶ ಪ್ರೇಮಿಗಳ ಐಕ್ಯತೆಯನ್ನು**
> **ಧರ್ಮದ ಹೆಸರಲ್ಲಿ ಮುರಿಯಲು ಬಿಡುವುದಿಲ್ಲ**

ಇದರಿಂದ ರಾಜಕೀಯ ಅಧಿಕಾರ ಗಿಟ್ಟಿಸುವ ಸುಲಭ ಮಾರ್ಗ ತಮಗೆ ದಕ್ಕದೇ ಹೋಗಬಹುದು ಎಂದು ಕುಪಿತರಾದ ಕೋಮುವಾದೀ ಮುಖಂಡರು 'ಧರ್ಮ' ಎಂದರೆ ಕೇವಲ ಮತೀಯ ನಂಬಿಕೆಗಳಲ್ಲ, ನೈತಿಕ ಹಾಕೂ ಸಾಂಸ್ಕೃತಿಕ ಮೌಲ್ಯಗಳ ಮೊತ್ತ ಎಂಬ ತರ್ಕ ಹೂಡುತ್ತಿದ್ದಾರೆ.

ಆದರೆ ಅವರ ಯಾವ ಕೃತ್ಯದಲ್ಲೂ ಈ ಮೌಲ್ಯಗಳು ಕಾಣಿಸುತ್ತಿಲ್ಲ. (1) ದೇಶದ ಸಂವಿಧಾನವನ್ನು, ನ್ಯಾಯಾಲಯಗಳನ್ನು ಉಲ್ಲಂಘಿಸಿ ಬಾಬ್ರಿಮಸೀದಿ ಧ್ವಂಸ ಮಾಡುವಲ್ಲಿ ಯಾವ ನೈತಿಕ, ಸಾಂಸ್ಕೃತಿಕ ಮೌಲ್ಯ ಅಡಗಿದೆ? 2) ಮಸೀದಿ ಧ್ವಂಸದ ನಂತರ ಡಿಸೆಂಬರ್ 1992 ರಲ್ಲಿ ರಸ್ತೆಯಲ್ಲಿ 'ಮಹಾ ಆರತಿ'ಗಳು ಹಾಗೂ ನಮಾಜಿನ ನೆಪದಲ್ಲಿ ಜನವರಿ 1993 ರಲ್ಲಿ ನಡೆದ ದಂಗೆಗಳಲ್ಲಿ ಮುಂಬೈಯಲ್ಲಿ ದಕ್ಷಿಣ ಭಾರತದ ಹಾಗೂ ಉತ್ತರ ಭಾರತದ ಅಂದರೆ ಎಲ್ಲಾ ಮರಾಠಿಯೇತರ ಜನಗಳನ್ನು ಯಾವುದೇ ಧರ್ಮದ ಭೇದ ಭಾವವಿಲ್ಲದೆ ಹೊಡೆದೋಡಿಸಿವವರಿಗೆ ಸ್ಫೂರ್ತಿ ನೀಡಿದ ಮೌಲ್ಯ ಯಾವುದು, ಸಂಸ್ಕೃತಿ ಯಾವುದು? 3) ದಲ್ಲಾದಲ್ಲಿ ಸಿಮೆಂಟ್ ಕಾರ್ಮಿಕರ, ಮೇಲೆ ಭಿಲ್ಯಾನಲ್ಲಿ ಬಡಕಾರ್ಮಿಕರ ಮೇಲೆ ಗೋಲೀಬಾರು ನಡೆಸಿದಾಗ ಯಾವ ನೈತಿಕ ಮೌಲ್ಯ ಸ್ಫೂರ್ತಿ ನೀಡಿತು? 4) ಮಹಿಳೆಯರ ಸ್ಥಾನ ಮನೆಯಲ್ಲಿ ಮಾತ್ರ ಎನ್ನುವವರು, ಸತಿ ಪದ್ಧತಿಯನ್ನು ಸಮರ್ಥಿಸುವವರು, ರೈತರಿಗೆ ಅಕ್ಷರ ಜ್ಞಾನವೇಕೆ ಎನ್ನುವವರು ಯಾವ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವವರು?

ಆದ್ದರಿಂದ 'ಧರ್ಮ'ವನ್ನು ರಾಜಕೀಯದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ ಎನ್ನುವವರು ನಿಜವಾಗಿ ಬಹುಸಂಖ್ಯಾತ ಜನರ ಧಾರ್ಮಿಕ ಭಾವನೆಗಳ ದುರುಪಯೋಗ ಮಾಡಿ ಜನಗಳಲ್ಲಿ ಧರ್ಮದ ಹೆಸರಲ್ಲಿ ಒಡಕು ತಂದು, 'ವೋಟ್ ಬ್ಯಾಂಕು'ಗಳನ್ನು ಸೃಷ್ಟಿಸಿಕೊಂಡು ,ದಿಲ್ಲಿ ಗದ್ದುಗೆ ಗಿಟ್ಟಿಸಲು ಯಾರೂ ಅಡ್ಡಿ ಮಾಡಲಾಗದು ಎಂದೇ ಹೇಳುತ್ತಿದದಾರಷ್ಟೆ. ದೇಶದ ಜನಸಾಮಾನ್ಯರನ್ನು ಇಂತಹ ಕುತರ್ಕಗಳ ಮೂಲಕ ವಂಚಿಸಲು ಬಿಡಬಾರದು.

ಕೂತೂಹಲಕರ ಸಂಗತಿಯೆಂದರೆ ದುಡಿಯುವ ಜನರ ಹಕ್ಕುಗಳನ್ನು ಮೊಟಕುಗೊಳಿಸಿ, ಬಂಡವಾಳಶಾಹಿಗಳಿಗೆ ಹೆಚ್ಚೆಚ್ಚು ಉದಾರತೆ ತೋರುವಲ್ಲಿ, 'ಆರ್ಥಿಕ ಉದಾರೀಕರಣ' ಪ್ರಕ್ರಿಯೆ ಬದಲಾಗಬಾರದು ಎನ್ನುವಲ್ಲಿ ನರಸಿಂಹರಾವ್ ಸರಕಾರದೊಡನೆ ಕೋಮುವಾದಿ ರಾಜಕೀಯ ಮುಖಂಡರು ಸ್ಪರ್ಧೆಗಿಳಿದಿದ್ದರೆ, ಇತ್ತ ನರಸಿಂಹರಾವ್ ಸರಕಾರ ಧರ್ಮವನ್ನು ರಾಜಕೀಯಕ್ಕೆ ಬಳಸುವಲ್ಲಿ, ಸಾಧುಗಳು, ಸನ್ಯಾಸಿಗಳು, ಮಹಂತರುಗಳನ್ನು ತಮ್ಮೆಡೆಗೆ ಒಲಿಸಿಕೊಳ್ಳುವಲ್ಲಿ, ಯಜ್ಞ-ಯಾಗಾದಿಗಳನ್ನು ನಡೆಸುವಲ್ಲಿ ಕೋಮುವಾದಿಗಳೊಡನೆ ಸ್ಪರ್ಧೆಗಿಳಿದಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಬೇಡಿಕೆಗೆ ಇನ್ನೂ ಮಹತ್ವ ಬರುತ್ತಿದೆ.

...ನ ಹಾಗೂ ಕೈಗಾರಿಕೆ ಬೆಳೆಸಬೇಕು. ಸಂಶೋಧನೆ ಹಾಗೂ ಅಭಿವೃದ್ಧಿಯ ಮೂಲಕ ಸ್ವಾವಲಂಬನೆ ಸಾಧಿ...

...ತ್ತಿದೆ. ನಿಗದಿತ ಅವಧಿಯ ಒಳಗೆ ಹಂತಹಂತವಾಗಿ ಈ ತಂತ್ರಜ್ಞಾನವನ್ನು ಅರಗಿಸಿಕೊಂಡು ಸ್ವದೇಶೀಕರಿಸುವ ಕಲಮು ಇಂತಹ ಒಪ್ಪಂದಗಳ ಭಾಗವಾಗಿರುತ್ತಿತ್ತು. ಈಗ ಉದಾರೀಕರಿಸುವ ಆಮದು-ರಫ್ತು ನೀತಿ ಹಾಗೂ ತ್ರಜ್ಞಾನ ನೀತಿಯಲ್ಲಿ ಇಂತಹ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಿದೆ. ಹಿಂದೆ ಈಗಾಗಲೇ ದೇಶದಲ್ಲಿ ಯಾವುದೇ ರೂಪದಲ್ಲಿ ಲಭ್ಯವಿರುವ ತಂತ್ರಜ್ಞಾನ, ವಸ್ತು ಉಪಕರಣಗಳನ್ನು ಆಮದು ಮಾಡಲು ಸಂಪೂರ್ಣ ನಿಷೇಧವಿತ್ತು. ಈಗ ನಿರ್ಬಂಧಗಳನ್ನು ತೆಗೆದುಹಾಕಿದ್ದು, ಅನಗತ್ಯ ಆಮದಿಗೆ ಅವಕಾಶ ಮಾಡಿಕೊಟ್ಟಿವೆ. ಉದಾಹರಣೆಗೆ ಬಿ.ಹೆಚ್.ಇ.ಎಲ್. ಬಳಿ ವಿದ್ಯುತ್ ಉಪಕರಣ, ಥರ್ಮಲ್ ಸ್ಥಾವರಗಳಿಗೆ ಬೇಕಾದ ಉಪಕರಣಗಳ ತಂತ್ರಜ್ಞಾನವಿದ್ದಾಗ್ಯೂ ಇದನ್ನು ಆಮದು ಮಾಡಲಾಗುತ್ತಿದೆ- ವಿಶ್ವಬ್ಯಾಂಕ್ ಸಾಲದಲ್ಲಿ ಖರೀದಿಸುವುದರಿಂದ. ಅದೇ ರೀತಿ ಸಿಡಾಟ್ ಎಂಬ ಸಂಸ್ಥೆಯ ಟೆಲಿಫೋನ್ ಎಕ್ಸ್‌ಚೇಂಜ್ ವಿನ್ಯಾಸದ ಅಂತಿಮ ಹಂತದಲ್ಲಿದ್ದರೂ ಇದನ್ನು ಆಮದು ಮಾಡಲು ಜಾಗತಿಕ ಟೆಂಡರ್ ಕರೆಯಲಾಗಿದೆ.

ವಿಶ್ವವಿದ್ಯಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಭೋಧನ ಸಂಸ್ಥೆಗಳಿಗೆ ವೆಚ್ಚ ತೀವ್ರಕಡಿತ ಮಾಡಲಾಗಿದೆ. ಒಟ್ಟಾರೆಯಾಗಿ ಸ್ವದೇಶಿ ವಿಜ್ಞಾನ ತಂತ್ರಜ್ಞಾನಕ್ಕೆ ಪ್ರೋತ್ಸಾಹದ ಅಭಾವದಿಂದಾಗಿ ನಿಪುಣ ವಿಜ್ಞಾನಿ ತಂತ್ರಜ್ಞಾನಿಗಳು ಪಾಶ್ಚಿಮಾತ್ಯ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಪ್ರತಿಭಾಪಲಾಯನದ ಮೂಲಕ ದೇಶಕ್ಕೆ ಅಪಾರ ನಷ್ಟವಾಗುತ್ತಿದೆ.

ಡಂಕೆಲ್ ಪ್ರಸ್ತಾಪಗಳ ಭಾಗವಾದ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಒಪ್ಪಿಕೊಂಡರೆ ಜೈವಿಕ-ತಂತ್ರಜ್ಞಾನ ಮುಂತಾದ ಆಧುನಿಕ ಕ್ಷೇತ್ರದಲ್ಲಿ ನಮ್ಮ ಸಂಶೋಧನೆಗೆ ತೀವ್ರ ಅಡ್ಡಿ ಆತಂಕಗಳು ಒದಗುತ್ತವೆ.

ಪುಟ 6ಕ್ಕೆ

ಧಣಿಗಳಿಗೆ ಭರವಸೆ

-- ಜಿ.ಎಸ್. ಮಣಿ

ಐ.ಎಂ.ಎಫ್. ಧಣಿಗಳಿಗೆ ಸರ್ಕಾರದ ಪರವಾಗಿ ಡಾ. ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಭರವಸೆ ನೀಡಿದ್ದಾರೆ. ಹಣಕಾಸು ಹಿಡಿತದ ಕ್ರೋಢಿಕರಣ ಭಾರತದಲ್ಲಿ ಅಡೆತಡೆಯಿಲ್ಲದೆ ಮುಂದುವರಿಯುತ್ತದೆ ಎಂದು ಸುಧಾರಣಾ ಕಾರ್ಯಕ್ರಮದ ಯೋಜನೆಯನ್ನು ಅವರು ಈಗ ಭಾರತಕ್ಕೆ ಬಂದಿರುವ ಐ.ಎಂ.ಎಫ ನಿಯೋಗಕ್ಕೆ ವಿವರಸಿದ್ದಾರೆ.



ನರಸಿಂಹರಾವ್ ಸರಕಾರದ 26ನೇ ತಿಂಗಳಲ್ಲಿ

ವಿಸ್ತೃತ ನಿಧಿ ಸೌಲಭ್ಯ ಎಂಬ ಸಾಲಕ್ಕಾಗಿ ಗೋಗೆರೆಯುತ್ತಿರುವ ಭಾರತದ ಪರವಾಗಿ ಈ ಹಣಕಾಸಿನ ಕಾರ್ಯದರ್ಶಿ ಹೀಗೆ ನಡೆದುಕೊಳ್ಳುತ್ತಿರುವುದು.

ಆರ್ಥಿಕದ ನಿರ್ವಹಣೆಗೆ ಏನೇನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೆಂದು ಈ ದೇಶದ ಪ್ರಭುವಾದ ಜನಸಾಮಾನ್ಯರಿಗೆ ವಿವರಿಸುವುದು ಬೇಕಿಲ್ಲ. ಆದರೆ ಐ.ಎಂ. ಎಫ್ ಧಣಿಗಳಿಗೆ ವಿವರಿಸಬೇಕು. ಇದೂ ನಿಜವಲ್ಲ. ಐ.ಎಂ.ಎಫ್ ದೇಶದ ಆರ್ಥಿಕವನ್ನು ಹೇಗೆ ಸುಧಾರಿಸಬೇಕೆಂದು ಹೇಳುತ್ತದೊ ಹಾಗೆ ಮಾಡುವುದು. ಹೇಗಿದೆ, ನಮ್ಮ ಸಾರ್ವಭೌಮತ್ವ?!!

ಭಾರತ ತಿಪ್ಪೆ ಗುಂಡಿ

ತಿಪ್ಪೆಗುಂಡಿಗಳಲ್ಲಿ ಬೇಡವಾದದ್ದನ್ನೆಲ್ಲ ತಂದು ಸುರಿಯುವುದಿಲ್ಲವೆ? ಹಾಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಭಾರತ ತಿಪ್ಪೆಗುಂಡಿ. ಬೇರೆಲ್ಲೂ ಮಾರಲಾಗದ ವಸ್ತುಗಳನ್ನು ಅವು ಭಾರತಕ್ಕೆ ತಂದು ಸುರಿಯುತ್ತವೆ. ಈಗ ಫಿಕ್ಕಿ (ಫೆಡರೇಷನ್ ಆಫ್ ಇಂಡಿಯನ್ ಚೆಂಬರ್ಸ್ ಆಫ್ ಕಾಮರ್ಸ್) ಎಂಬ ಸಂಸ್ಥೆ ಈ ಸುರಿವ ಕಾರ್ಯಾಚರಣೆಯ ವಿರುದ್ಧ ಕಾನೂನುಗಳನ್ನು ಬಲಪಡಿಸಬೇಕು ಎಂದಿದೆ. ಸಂತೋಷ. ಆದರೆ ಐ.ಎಂ.ಎಫ್ ವಿಶ್ವಬ್ಯಾಂಕ್ ಷರತ್ತುಗಳು ನಿರ್ದೇಶನಗಳು ಭಾರತವನ್ನು ತಿಪ್ಪೆಗುಂಡಿ ಮಾಡುವ ಎಲ್ಲ ಹುನ್ನಾರಗಳನ್ನು ಹೊಂದಿವೆ. ಅಭಿವೃದ್ಧಿಶೀಲ ದೇಶಗಳಿಗೆ ಬೇಡವಾದ ಆರ್ಥಿಕ ನೀತಿಗಳನ್ನೂ ನಮ್ಮ ಮೇಲೆ ಸುರಿಯಲಾಗುತ್ತಿದೆ. ಭಾರತ ಈ ದೇಶಗಳಿಗೆ ಒಳ್ಳೆಯ ಗೊಬ್ಬರವಾಗಲೆಂದು ಜಾಳಿಗೆಯಲ್ಲಿ ನೀರು ತುಂಬುವ ಪ್ರಯತ್ನ ಇದಲ್ಲವೆ?

ಎಬಿಬಿಗೆ ರೈಲ್ವೆಯ ಗುತ್ತಿಗೆ

ಎಬಿಬಿ ಟ್ರಾನ್ಸ್‌ಪೋರ್ಟೇಷನ್ ಸಿಸ್ಟಮ್ಸ್ ಎಂಬ ಏಷಿಯಾ ಬ್ರೌನ್ ಬೋವೇರಿಯ ಅಂಗ ಸಂಸ್ಥೆಗೆ ಭಾರತೀಯ ರೈಲ್ವೆಯ ಗುತ್ತಿಗೆಯೊಂದು ಸಿಕ್ಕಿದೆ. ಎಲೆಕ್ಟ್ರಿಕ್ ಲೋಕೊಮೊಟಿವನ್ ತಂತ್ರಜ್ಞಾನ ವರ್ಗಾವಣೆಗೆ ಈ ಗುತ್ತಿಗೆ.

ಹತ್ತು ವರ್ಷಗಳ ಈ ಗುತ್ತಿಗೆಗೆ ಹಣಕಾಸು ನೆರವು ಯಾರದು ಗೊತ್ತೇ? ವಿಶ್ವಬ್ಯಾಂಕ್ ತಮ್ಮ ಏಶಿಯಾ ಅಭಿವೃದ್ಧಿ ಬ್ಯಾಂಕ್.

ನೂರಾರು ಕೋಟಿಗಟ್ಟಲೆ ವ್ಯವಹಾರಗಳನ್ನು ಭಾರತೀಯ ರೈಲ್ವೆ ಎಬಿಬಿಗೆ ನೀಡಿ ಅದು ಹಗರಣವಾಗಿ ಕಾಡುತ್ತಿರುವಾಗಲೇ ಈಗ ಈ ಸಂಸ್ಥೆಗೆ ಇಂತಹ ಗುತ್ತಿಗೆ. ಈ ಗುತ್ತಿಗೆಯಲ್ಲಿ ಎಂತಹ ಹಗರಣ ನಡೆದಿದೆಯೊ ಯಾರಿಗೆ ಗೊತ್ತು?

ಸಾಲ ಬೇಕೆ? ಶ್ರೀಮಂತರಾಗಿ

ಬಡವರಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ಅಂದ ಮೇಲೆ ಸಾಲ ನೀಡಲು ಆಧಾರವನ್ನೇನು ಅವರು ಕೊಡುತ್ತಾರೆ? ಆಧಾರ ನೀಡುವವರಿಗೆ, ಸಾಲ ತೀರಿಸುವ ತಾ...ರುವವರಿಗಲ್ಲವೇ ಸಾಲ ನೀಡಬೇಕಾದ್ದು?


ಹೌದು ಅನ್ನಿ ಭಾರತೀಯ ರಿಸರ್ವ್‌ಬ್ಯಾ... ನಿಮ್ಮೊಂದಿಗಿದೆ. ದೇಶದ ಈ ಕೇಂದ್ರೀಯ ಬ್ಯಾ ್ ಹೊಸ ಆರ್ಥಿಕ ನೀತಿಗಳಿಗನುಗುಣವಾಗಿ ಮುಂದಿನ ಹತ್ತು ವರ್ಷಗಳಿಗಾಗಿ ಕರಡು ಯೋಜನೆಯೊಂದನ್ನು ತಯಾರಿಸಿದೆ. ಈ ಕರಡು ಯೋಜನೆಯಲ್ಲಿ ಆದ್ಯತೆಯ ವ...ಕ್ಕೆ ಯಾವುದೇ ಪ್ರಾಮುಖ್ಯತೆ ನೀಡುವ ಮಾತಿಲ್ಲ. ಅಂದರೆ?

ಅಂದರೆ ಸಾಲ ನೀಡುವುದು ಲಾಭಕ್ಕಾಗಿ. ಹೆಚ್ಚಿನ ಬಡ್ಡಿ ನೀಡಬಲ್ಲರಿಗೆ ಆದ್ಯತೆ. ಇವರೇ ಈಗ ಆದ್ಯತೆಯ ಕ್ಷೇತ್ರಕ್ಕೆ ಸೇರಿದವರು.

ಬ್ಯಾಂಕುಗಳು ಸಾರ್ವಜನಿಕ ಹಣವನ್ನು ಠೇವಣಿಯಾಗಿ ಸ್ವೀಕರಿಸುತ್ತವೆ. ಇದೇ ಹಣವನ್ನು ಅವರು ಸಾ... ನೀಡಲು ಬಳಸುವುದು. ಈ ಠೇವಣಿಯಲ್ಲಿ ಬಡ... ಹಣವೇ ಹೆಚ್ಚು. ಆದರೆ ಈ ಹಣ ಸಾರ್ವಜನಿಕರ ಹಿತಕ್ಕಾಗಿ ಸಿಗುವುದಿಲ್ಲ. ಇದು ಶ್ರೀಮಂತರ ಹಿತಕ್ಕಾಗಿ- ಹೇಗಿದೆ ಈ ನ್ಯಾಯ?

ಸುಳ್ಳು ಪರೀಕ್ಷೆಯ ಯಂತ್ರದ ಮುಂದೆಯಾದರು ಪ್ರಧಾನಿ ಹಾಜರಾಗುವರೆ

ಶೇರು ಹಗರಣ



ಇದು ಸತ್ವ ಪರೀಕ್ಷೆಯಲ್ಲ, ಸತ್ಯ ಪರೀಕ್ಷೆ ಕಂಪ್ಯೂಟರ್‌ಗಳ ಸಹಾಯದಿಂದ ನಡೆಸುವ ಪಾಲಿಗ್ರಾಪ್ ಎಂಬ ಪರೀಕ್ಷೆ, ಈ ಪರೀಕ್ಷೆ ಪ್ರಶ್ನೆಗಳಿಗೆ ಉತ್ತರಿಸುವ ವ್ಯಕ್ತಿ ನಿಜ ಹೇಳುತ್ತಿದ್ದಾನೆಯೋ ಅಥವಾ ಸುಳ್ಳು ಹೇಳುತ್ತಿದ್ದಾನೆಯೋ ಎಂಬುದನ್ನು ಹೇಳುತ್ತದೆ. ಆಂಗ್ಲ ಸಂಸ್ಥೆಯೊಂದು ಹರ್ಷದ್ ಮೆಹ್ತ ಮತ್ತು ಅಶ್ವಿನ್ ಮೆಹ್ತರನ್ನೂ ಈ ಪರೀಕ್ಷೆಗೆ ಒಳಪಡಿಸಿದೆ. ಈ ಪಾಲಿಗ್ರಾಫ್ ಪರೀಕ್ಷೆಯ ಪ್ರಕಾರ ಇಬ್ಬರೂ ಸಹೋದರರರು ನಿಜ ಹೇಳುತ್ತಿದ್ದಾರೆ.

ಅಂದರೆ ಅವರು ಪ್ರಧಾನ ಮಂತ್ರಿಗಳಾದ ನರಸಿಂಹರಾಯರಿಗೆ ಒಂದು ಕೋಟಿ ರೂಪಾಯಿ ನೀಡಿದ್ದು ದಿಟ.

ಏನು ಹೇಳುತ್ತಾರೆ ಮಾನ್ಯ ಪ್ರಧಾನ ಮಂತ್ರಿಗಳು?

ಹರ್ಷದ್‌ಗೆ ಖಾಂಡೇಕರ್ ಪರಿಚಯವಿತ್ತು

ಇದನ್ನು ಜಂಟಿ ಪಾರ್ಲಿಮೆಂಟರಿ ಸಮಿತಿಯ ಪ್ರಶ್ನಾವಳಿಗೆ ಉತ್ತರಿಸುತ್ತ ಹರ್ಷದ್‌ನ ಸಹೋದರ ಅಶ್ವಿನ್ ಮೆಹ್ತ ಹೇಳಿದ್ದಾನೆ. ತನ್ನ ಸಹೋದರ ಹರ್ಷದ್ ಮೆಹ್ತ ಪ್ರಧಾನ ಮಂತ್ರಿಗಳ ಆಪ್ತಾ ಕಾರ್ಯದರ್ಶಿ ಖಾಂಡೇಕರ್ ಪರಸ್ಪರರನ್ನು ಚೆನ್ನಾಗಿ ಬಲ್ಲವರು ಎಂದಿದ್ದಾನೆ. ಆತ ಇದಲ್ಲದೆ ಹರ್ಷದ್‌ಗೆ ಹಿಂದಿನ ಹಣಕಾಸು ರಾಜ್ಯ ಸಚಿವ ಶ್ರೀ ರಾಮೇಶ್ವರ್ ಠಾಕೂರ್‌ರ ಪರಿಚಯವೂ ಇತ್ತು ಎಂದಿದ್ದಾನೆ ಆತ.

ಪ್ರಧಾನಿಗಳಿಗೆ ಇವ್ಯಾವೂ ಪುರಾವೆಗಳೇ ಅಲ್ಲ ಅಲ್ಲವೇ?

ಹರ್ಷದ್‌ನ ಇನ್ನೊಂದು ಧ್ವನಿಮುದ್ರಿಕೆ

ಪ್ರಧಾನ ಮಂತ್ರಿಗಳಿಗೆ ಒಂದು ಕೋಟಿ ರೂಪಾಯಿ ನೀಡಿದ್ದರ ಪುರಾವೆಯಾಗಿ ಹರ್ಷದ್ ಮೆಹ್ತ ಇನ್ನೊಂದು ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿದ್ದಾನೆ. ಇದು ಆತ ಮತ್ತು ಆತನ ಸಹಾಯಕ ಖಾಂಡೇಲವಾಲನ ನಡುವೆ ಒಂದು ಕೋಟಿ ರೂಪಾಯಿಗಳ ಬಗೆಗೆ ನಡೆದ ಟೇಲಿಫೋನ್ ಸಂಭಾಷಣೆಯದ್ದು.

ಈ ಹಿಂದೆ ಖಾಂಡೇಲ್‌ವಾಲ ತನಗೆ ಒಂದು ಕೋಟಿ ರೂಪಾಯಿಗಳ ವ್ಯವಹಾರದ ಬಗೆಗೆ ಏನೇನೂ ಗೊತ್ತಿರಲಿಲ್ಲ ಎಂದು ಹೇಳಿಕೆ ನೀಡಿದ್ದ.

ಶೇರು ತಿಮಿಂಗಿಲಗಳ ಸೆರೆ

ಸಿಬಿಐ ನಾಲ್ಕು ಶೇರು ದಲ್ಲಾಳಿಗಳನ್ನು ಸೆರೆ ಹಿಡಿದಿದ್ದಾರೆ. ಭೂಪೇನ್ ದಲಾಲ್ ಅಭಯ ನರೋತ್ತಮ, .ಜೆ.ಪಿ. ಗಾಂಧಿ ಮತ್ತು ಟಿ.ಬಿ. ರೊಯಿಯಾ ಇವರೇ ಆ ನಾಲ್ವರು ದಲ್ಲಾಳಿಗಳು. ಭಾರತೀಯ ಜೀವ ವಿಮಾ ನಿಗಮದ ಮ್ಯುಚ್ಯುಯಲ್ ಫಂಡ್‌ನ ದೂರಿನ ಅನ್ವಯ ಇವರನ್ನು ಬಂಧಿಸಲಾಗಿದೆ. ಇವರ ಮೇಲಿನ ಅಪಾದನೆ ಎಂದರೆ ಅವರು 173 ಕೋಟಿ ರೂಪಾಯಿಗಳ ಬೆಲೆಯ ದಸ್ತಾವೇಜುಗಳ ಫೋರ್ಜರಿ ಮಾಡಿದ್ದು.

ಈ ಫೋರ್ಜರಿ ಹೊರಬರಲು ಇಷ್ಟೊಂದು ತಡವಾದದ್ದೇಕೆ ಎಂಬುದು ಇನ್ನು ಬಯಲಾಗಬೇಕಾಗಿದೆ.

ಮಮತಾಬ್ಯಾನರ್ಜಿ ಅವತಾರದ ಬಗ್ಗೆ ಕಲ್ಕತ್ತಾ ಪತ್ರಿಕೆಗಳು

“ಪ್ರಜಾಪ್ರಭುತ್ವದ ದಾರಿಯಲ್ಲಿ ಭಯೋತ್ಪಾದನೆಯ ದಾರಿ”

-- ಆನಂದ್ ಬಜಾರ್ ಪತ್ರಿಕಾ

"ಮಮತಾ ಬ್ಯಾನರ್ಜಿಯ ಈ ಚಳುವಳಿಯ ಒಟ್ಟು ಫಲಿತಾಂಶ ಏನು ಎಂಬ ಬಗ್ಗೆ ಪ್ರಶ್ನೆಗಳನ್ನೆತ್ತಬಹುದು. ಇನ್ನೊಂದು ಜನಾಂಗ ಬದಲಿಗೆ ಯುವ ಕಾಂಗ್ರೆಸ್ ಸಾಧಿಸಿದ್ದೇನು? ಆಕೆ ರಾಜಕೀಯ ರಂಗಸ್ಥಳದ ಮಧ್ಯೆ ಮಮತಾ ಹಿಂದುಳಿದಿದ್ದಾರೆಂದು ತೋರುತ್ತಿದೆಯೇ? ಕಾಂಗ್ರೆಸ್ ರಾಜಕೀಯದಲ್ಲಿ ಮೂಲೆಗುಂಪಾಗಿರುವ ಆಕೆ ಅದನ್ನು ಮೀರಿ ಬಂದಿದ್ದಾರೆಯೇ? ಆಕೆ ಉತ್ಸಾಹದ ಬುಗ್ಗೆಯಾಗಿರಬಹುದು, ಧೀರೆಯಾಗಿರಬಹುದು, ಸ್ವಲ್ಪ ಮಟ್ಟಿನ ಸಂಘಟನಾ ಸಾಮರ್ಥ್ಯವನ್ನು ಹೊಂದಿರಬಹುದು. ಆದರೆ ಪ್ರಶ್ನೆ ಆಕೆ ಈ ಶಕ್ತಿಸಾಮರ್ಥ್ಯಗಳನ್ನು ಯಾವುದಕ್ಕಾಗಿ ಬಳಸುತ್ತಿದಾರೆ ಎಂದು ದೇಶದ ಎಲ್ಲಾ ಮೂಲಭೂತ ಸಮಸ್ಯೆಗಳನ್ನು ಸಂಪೂರ್ಣ ನಿರ್ಲಕ್ಷಿಸಿದಾಕೆ- ಬಾಬ್ರಿಮಸೀದಿ ಧ್ವಂಸವಾಗುತ್ತಿದ್ದಾಗ ಆಕೆಯ ಪತ್ತೆಯೇ ಇರಲಿಲ್ಲ. ತನ್ನದೇ ಕಾರ್ಮಿಕ ಸಂಘವನ್ನು ಅತ್ಯುತ್ಸಾಹದಿಂದ ರಚಿಸಿಕೊಂಡರೂ ಕಾಂಗ್ರೆಸ್‌ನ ಹೊಸ ಆರ್ಥಿಕತೆಗಳ ಪರವಾಗಿಯಾಗಲೀ, ವಿರುದ್ಧವಾಗಿಯಾಗಲೀ ಆಕೆಯಿಂದ ಯಾವ ಮಾತನ್ನು ಯಾರೂ ಕೇಳಿಲ್ಲ. ಜ್ಯೋತಿಬಸು ಸರಕಾರವನ್ನು ವಜಾಮಾಡಬೇಕೆಂದು ಬಡಬಡಿಸುತ್ತಿದ್ದಾರೆ. ಆದರೆ ಆ ಸರಕಾರವನ್ನು ಎದುರಿಸುವ ಒಂದು ಅವಕಾಶ ಲಭ್ಯವಾಯಿತು ಚುನಾವಣೆಗಳಲ್ಲಿ ಇದ್ದಾಗ ಆಕೆ ಕಾಣೆಯಾದರು. ಕೇರು ಹಗರಣ, ಹರ್ಷದ್ ಮೆಹ್ತಾ ಆಪಾದನೆಗಳ ದೇಶ ಅಲ್ಲೋಲ ಕಲ್ಲೋಲಗೊಂಡಿರುವಾಗ ಮಮತಾ ರೈಟರ್ಸ್ ಬಿಲ್ಡಿಂಗ್‌ಗೆ ಅಕ್ರಮದ ಮುತ್ತಿಗೆ ಹಾಕಲು ನಿರ್ಧರಿಸಿದ್ದರು.... ಈ ರಾಜಕೀಯವನ್ನು ಬೆಂಬಲಿಸಲು ಸಾಧ್ಯವಿಲ ಈ ಚಳುವಳಿ ಸಾಕಷ್ಟು ಜನಗಳೊಂದಿಗೆ ಆರಂಭವಾಗಿದ್ದು ಇದು ಪ್ರಜಾಪ್ರಭುತ್ವದ ದಾರಿಯಲ್ಲ, ಭಯೋತ್ಪಾದನೆಯ ದಾರಿ..."

ಈ ಕಟು ಮಾತುಗಳು ಯಾವುದೇ ಎಡಪಂಥೀಯ ಪತ್ರಕರ್ತರದ್ದಲ್ಲ ನಿಷ್ಪಕ್ಷಪಾತಿ ಪತ್ರಕರ್ತರದ್ದೂ ಅಲ್ಲ, ಮಮತಾಬ್ಯಾನರ್ಜಿಗೆ ಈ ಬಹುಮಾನ ದೊರೆತಿರುವುದು ಬಹಳ ಕಾಲದಿಂದ ಆಕೆಯ ಓತ್ಸೈಷಿಯಾಗಿರುವ, ಆಕೆಯ ಮಂಗಾಟಗಳನ್ನೆಲಾ ದೊಡ್ಡ ಪ್ರಚಾರ ಕೊಟ್ಟು ಓರಿಯಾಗಿಸಿಕೊಂಡು ಬಂದ ಕಲ್ಕತ್ತೆಯ "ಆನಂದ ಬಝಾರ್ ಪತ್ರಿಕೆ"ಯಿಂದ ತನ್ನ "ಪ್ರೀತಿಯ ರಾಜಕುವರಿ"ಗೆ ಬೆಂಬಲ ನೀಡಲಿಲ್ಲ. "ಆನಂದ ಬಝಾರ್ ಪತ್ರಿಕೆ" ಗುರಿ ಸಾಧ್ಯವಾಗಲಿಲ್ಲ. 'ಜುಲೈ 21 ರಂದು ಕಲ್ಕತ್ತೆಯ ಕೇಂದ್ರಭಾಗ ಲೂಟಿಕೋರ ಮಂದೆಗಳ ಕೈಗೆ ಹೋಯಿತು' ಎಂದಿತು. ಆ ಪತ್ರಿಕೆಯ ಜುಲೈ 23ರ ಸಂಪಾದಕೀಯ...

"ಅಪ್ರಬುದ್ಧ, ಬೇಜವಾಬ್ದಾರಿ ನಾಯಕಿ"
- ಟೆಲಿಗ್ರಾಫ್

ಮಮತಾ ಬ್ಯಾನರ್ಜಿಗೆ ಈ "ಬಹುಮಾನ" ದೊರೆತದ್ದು ಇದೊಂದು ಪತ್ರಿಕೆಯಿಂದ ಮಾತ್ರವೇ ಅಲ್ಲ. ಸದಾ ಮಮತಾ ಬ್ಯಾನರ್ಜಿಯ ಬೆನ್ನು ತಟ್ಟಿ ಹುರಿದುಂಬಿಸುತ್ತಿದ್ದ 'ಟೆಲಿಗ್ರಾಫ್' ಪತ್ರಿಕೆಯ ಜುಲೈ 22 ರ ಸಂಪಾದಕೀಯ ನೋಡಿ-

".........ಹಿಂಸಾಚಾರ ಪ್ರಚೋದಿಸಿದ ಹೊಣೆ ಮಮತಾ ಬ್ಯಾನರ್ಜಿಯ ಮೇಲೆಯೇ ಬೀಳುತ್ತದೆ. ಈ ಕಾಂಗ್ರೆಸ್ ನಾಯಕಿ ಇದುವರೆಗೆ ತನ್ನ ಆಂದೋಲನಗಳಲ್ಲಿ ಜನಜಂಗುಳಿಯನ್ನು ಉದ್ರೇಕಿಸುವುದು ಬಿಟ್ಟು ಬೇರೇನನ್ನೂ ಸಾಧಿಸಿಲ್ಲ. ಜ್ಯೋತಿ ಬಸು ಸರಕಾರಕ್ಕೆ ಮುಜುಗರವುಂಟುಮಾಡುವುದನ್ನು ಬಿಟ್ಟು ಬೇರೆ ಯಾವುದೇ ರಾಜಕೀಯ ಕಾರ್ಯಕ್ರಮ ಆಕೆಯ ಬಳಿಯಿಲ್ಲ. ರಾಜಕೀಯ ಮುನ್ನೋಟವಿಲ್ಲದ ಆಕೆ ಆ ಅಭಾವವನ್ನ ತನ್ನ ಉತ್ಸಾಹದ ಮೂಲಕ ಮುಚ್ಚಲು ಪ್ರಯತ್ನಿಸಿದ್ದಾರೆ. ಆಕೆಯ ಉತ್ಸಾಹ ವಿಶೇಷವಾಗಿ ಹಿಂಸಾಚಾರ ಪ್ರಚೋದಿಸುವ ಪ್ರವೃತ್ತಿ ಹೊಂದಿದೆ. ಮುಖ್ಯ ಆಡಳಿತ ಕಚೇರಿಗೆ ಮುತ್ತಿಗೆಯ ಕಾರ್ಯಕ್ರಮ ಒಂದು ಶಕ್ತಿಶಾಲೀ ಪ್ರತಿಭಟನೆಯ ಸಂಕೇತವಾಗಿತ್ತು. ಆದರೆ ಇಂತಹ ಕೃತ್ಯ ಪೋಲೀಸರೊಂದಿಗೆ ಬಹಿರಂಗ ಘರ್ಷಣೆಯಾಗಿ ಬಿಟ್ಟಾಗ ಅದಕ್ಕೆ ಯಾವ ರಾಜಕೀಯ ನ್ಯಾಯ ಬದ್ಧತೆಯೂ ಉಳಿಯುವುದಿಲ್ಲ. ಕಮ್ಮಿ ಶಿಸ್ತಿನ ಪಾರ್ಟಿ ಕಾರ್ಯಕರ್ತರು ಹಾಗೂ ಗಲಭೆಕೋರ ವ್ಯಕ್ತಿಗಳಿಂದ ಕೂಡಿದ ಒಂದು ಕಾಂಗ್ರೆಸ್ ರ್‍ಯಾಲಿ ಅಹಿಂಸಾತ್ಮಕವಾಗಿರುತ್ತದೆ ಎಂದು ಅರಿಯುವಷ್ಟು ರಾಜಕೀಯ ಪ್ರಬುದ್ಧತೆ ಆಕೆಗಿರಬೇಕಿತ್ತು. ಕಲ್ಕತ್ತೆಯ ಬೀದಿಗಳಲ್ಲಿ ಕಂಡು ಬಂದ ಹಿಂಸಾಚಾರ ಈ ಮುತ್ತಿಗೆಯ ಕಾರ್ಯಕ್ರಮ ಸಂಪೂರ್ಣವಾಗಿ ಕುಮಾರಿ ಬ್ಯಾನರ್ಜಿಯ ಕೈಮೀರಿ ಹೋಯಿತು ಎಂಬುದನ್ನು ತೋರಿಸಿತಷ್ಟೇ ಅಲ್ಲ. ಆಕೆಯ ಸ್ಥಿರತೆ ಹಾಗೂ ಸಾಮಾನ್ಯ ಸ್ಥಿತಿಯ ಬಗ್ಗೆ ಏನೊಂದು ಕಾಳಜಿಯಿಲ್ಲದ ಒಬ್ಬ ಬೇಜವಾಬ್ದಾರಿ ನಾಯಕಿ ಎಂಬ ಕುಖ್ಯಾತಿ ಗಳಿಸುತ್ತಿದ್ದಾರೆ....."



ಇದು 'ಶಾಂತಿಯುತ'ವೇ ಗಾಡ್ಗೀಲರೆ
-- ಟೆಲಿಗ್ರಾಫ್

ಇಷ್ಟೇ ಅಲ್ಲ. ಈ ದಿನಪತ್ರಿಕೆಯಲ್ಲಿ ಪ್ರಕಟವಾದ ಅಶೋಕ್ ಮಲಿಕ್ ಎಂಬುವರ ಲೇಖನದಲ್ಲಿ ಪಶ್ಚಿಮ ಬಂಗಾಳದ ರಾಜಕೀಯ ರೋಗವಾಗಿ ಪರಿಣಮಿಸುವ ಅಪಾಯ ಮಮತಾ ಬ್ಯಾನರ್ಜಿ ಒಡ್ಡಿದ್ದಾರೆ ಎನ್ನಲಾಗಿದೆ. "ಜುಲೈ 21ರ ಚಳುವಳಿ 'ಶಾಂತಿಯುತವಾಗಿತ್ತು' ಎಂದು ಕಾಂಗ್ರೆ ವಕ್ತಾರ ವಿ.ಎನ್. ಗಾಡ್ಗೀಳ್ ಅನೇಕ ದಿನಗಳ ಕಾಲ ಪ್ರತಿಪಾದಿಸಿದರು. ಮೂರ್ಖರು ಮತ್ತು ಸುಳ್ಳುಗಾರರು- ಹೀಗೆ ಕಾಂಗ್ರೆಸ್‌ನಲ್ಲಿ ಎರಡು ವಿಧದವರಿದ್ದಾರೆ. ಎಂಬ ನಂಬಿಕೆಯನ್ನು ಇದು ದೃಢಪಡಿಸಿದೆ. ಅಂಗಡಿಗಳ ಲೂಟಿ, ನಾಗರಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವುದು, ಪೋಲೀಸರ ಮೇಲೆ ಧಾಳಿ, ಎಂದೂ ಶಾಂತಿಯುತ ಎಂದು ಕಾಣಿಸಲಾರದು." ಎಂದಿದೆ ಈ 'ಟೆಲಿಗ್ರಾಫ್' ಲೇಖನ ಕೂಡಾ.

ಕಲ್ಕತ್ತೆಯ ಇನ್ನೊಂದು ದೈನಿಕ ಏನಂದಿದೆ. ನೋಡಿ ".............ಕಾಂಗ್ರೆಸ್(ಐ)ನ ಯುವ ವಿಭಾಗದ ಅಪ್ರಬುದ್ಧ ಮುಖಂಡತ್ವದ ಯೋಜಿತ ಹಾಗೂ ಪೂರ್ವಸಿದ್ಧತೆಯಿಂದ ಕೂಡಿದ ಹಿಂಸಾಚಾರವನ್ನಾಗಲೀ, ರಾಜ್ಯದಲ್ಲಿ ಪಕ್ಷದ ಪೂರ್ಣ ನಿಷ್ಪಾಯಕತೆಯನ್ನಾಗಲೀ ಸಮರ್ಥಿಸಿಕೊಳ್ಳಲು ಸಾಧ್ಯವೇ ಇಲ್ಲ. ಪಕ್ಷದೊಳಗೆ ತನ್ನ ಮಾತು ನಡೆಸುವಲ್ಲಿ ಕುಮಾರಿ ಬ್ಯಾನರ್ಜಿಗೆ ಸಮಸ್ಯೆಗಳಿದ್ದರೆ ಅದನ್ನು ಮುಗ್ಧ ನಾಗರಿಕರ ಮೇಲೆ ತೀರಿಸಿಕೊಳ್ಳುವುದು ತಪ್ಪು.. ಆಕೆ ತನ್ನ ವರ್ತನೆಗಳನ್ನು ಸರಿಪಡಿಸಿಕೊಳ್ಳದಿದ್ದರೆ ಸತ್ತ ಹೆಣಗಳು ವಿಶೇಷವಾಗಿ ತನ್ನದೇ ಬೆಂಬಲಿಗರ ಸತ್ತ ಹೆಣಗಳು ಅಧಿಕಾರದತ್ತ ಸಾಗುವ ಅಥವಾ ಆಕೆ ಎಲ್ಲಿ ತಾನು ಹೋಗುತ್ತೇನೆಂದು ಭಾವಿಸಿದ್ದಾಳೋ ಅಲ್ಲಿಗೊಯ್ಯುವ ದಾರಿಯ ಕಲ್ಲುಗಳಾಗುವುದು. ಏಳ್ದಂ ಸೂಕ್ತ ಎಂದು ಅರಿಯಲು ಭಾರೀ ಬೆಲೆ ತೆರಬೇಕಾಗುತ್ತದೆ"

ಜಂಗಲ್ ಮಾರ್ಗ
-- ಆಜ್‌ಕಲ್

ಇದುವರೆಗೆ ಮಮತಾ ಬ್ಯಾನರ್ಜಿ ಬಗ್ಗೆ ಮೃದವಾಗಿದ್ದ "ಆಜ್‌ಕಲ್" ಬಂಗಾಳೀ ದೈನಿಕ ಕೂಡಾ ದೇಸರದಿಂದ ಆಕೆಯ ಎಡರಂಗವನ್ನು ಹೇಗಾದರೂ ಅಧಿಕಾರದಿಂದ ಉರುಳಿಸುವ "ಬಂಗಾಳ ಮಾರ್ಗ" ವನ್ನು "ಜಂಗಲ್ ಮಾರ್ಗ" ಎಂದು ಹೋಲಿಕೆ ಮಾಡಿದೆ. ತಾವೆ ಸೃಷ್ಟಿಸಿದ ಭೂತದ ಚೇಷ್ಟೆಗಳನ್ನು ಕಂಡು ತಾವೇ ಈಗ ಹೌಹಾರುತ್ತಿವೆ. ಕಲ್ಕತ್ತೆಯ ಈ ಬಂಡವಾಳಶಾಹೀ ಪತ್ರಿಕೆಗಳು.

ಬೇಡಿಕೆ : 8 ಅಸಂಘಟಿತ ಕಾರ್ಮಿಕರು, ಕೃಷಿ ಕೂಲಿಕಾರರು

- ಅಸಂಘಟಿತ ಕಾರ್ಮಿಕರಿಗೆ ಕೃಷಿ ಕೂಲಿಕಾರರ ಜೀವನದ ಅಗತ್ಯಗಳನ್ನು ಪೂರೈಸುವಂತೆ ಕನಿಷ್ಠ ವೇತನ ಏರಿಕೆ
- ಕನಿಷ್ಠ ವೇತನವನ್ನು ನಿಗದಿ ಪಡಿಸುವುದಕ್ಕೆ ಆಧಾರಗಳನ್ನು ರೂಪಿಸುವುದು.
- ವರ್ಷ ಪೂರ್ತಿ ಕೆಲಸವನ್ನು ಖಾತರಿ ಪಡಿಸುವುದು.
- ಅಸಂಘಟಿತ ಹಾಗೂ ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಕೇಂದ್ರ ಕಾನೂನನ್ನು ಅಂಗೀಕರಿಸುವುದು.

ಇದು ದೇಶದೆಲ್ಲಾ ದುಡಿಯುವ ಜನರಲ್ಲಿ ಬಹುಸಂಖ್ಯಾತ ಭಾಗವಾದ ಅಸಂಘಟಿತ, ಕೃಷಿ ಕೂಲಿಕಾರರ ಬೇಡಿಕೆಗಳು. ಇಂದು ಹೊಸ ಆರ್ಥಿಕ ನೀತಿಯ ಪೆಟ್ಟು ಯಾರ ಹೊಟ್ಟೆಯ ಮೇಲಾದರೂ ಅತಿ ಹೆಚ್ಚಾಗಿ ಬಿದ್ದಿದ್ದರೆ ಅದು ಪಟ್ಟಣಗಳ ಅಸಂಘಟಿತ ಕಾರ್ಮಿಕರು. ಹಳ್ಳಿಗಳ ಕೃಷಿ ಕೂಲಿಕಾರರ ಮೇಲೆಯೆ. ಕೋಮುವಾದದ ಬೆಳವಣಿಗೆಯ ಪರಿಣಾಮವೂ, ಕೋಮು ಗಲಭೆಯ ಪರಿಣಾಮಗಳೂ ತೀವ್ರವಾಗಿ ತಟ್ಟುವುದು, ಈ ವಿಭಾಗಗಳಿಗೆ. ಬೀದಿಯಲ್ಲಿ ಬದುಕುವ, ಗುಡಿಸಲುಗಳಲ್ಲಿ ಬದುಕುವ ದೀನರ ಬದುಕು ಕೋಮುಗಲಭೆಗಳಲ್ಲಿ ಹರಿದು ಚಿಂದಿಯಾಗುತ್ತದೆ. ಕರ್ಫ್ಯೂಗಳು ಇರುವಷ್ಟು ದಿನವೂ ಇವರಿಗೆ ಉಪವಾಸವೇ ಗತಿ ಎನ್ನುವ ಸ್ಥಿತಿ.

ಹೊಸ ಆರ್ಥಿಕ ನೀತಿಗಳ ಪರಿಣಾಮವಾಗಿ ಆಗಿರುವ ಬೆಲೆ ಏರಿಕೆಯನ್ನೇ ನೋಡಿದರೆ ಸಾಕು ಕೃಷಿ ಕೂಲಿಕಾರರ ವಿಭಾಗಕ್ಕೆ ಮೀಸಲಾದ ಬಳಕೆದಾರರ ಬೆಲೆ ಸೂಚ್ಯಾಂಕದ ಪ್ರಕಾರ ಇದುಬ್ಬರ ಶೇ. 20-25 ಒಟ್ಟಾರೆ ಹಣದುಬ್ಬರ ಶೇ. 9-12 ಇತ್ತು. ಆದ್ದರಿಂದ ಕೃಷಿ ಕೂಲಿಕಾರರನ್ನು ಅಸಂಘಟಿತರನ್ನು ಹೊಸ ಆರ್ಥಿಕ ನೀತಿಗಳ ವಿರುದ್ಧ, ಕೋಮುವಾದದ ವಿರುದ್ಧ ಅಣಿ ನೆರೆಸುವುದು ಅತಿ ಮುಖ್ಯವಾಗಿದೆ.

ಬೆಲೆಗಳು ಆಕಾಶವನ್ನೇ ಬೇಧಿಸಿ ಮುನ್ನುಗ್ಗುತ್ತಿದ್ದರೂ 10-20 ವರ್ಷಗಳ ಹಿಂದೆ ನಿಗದಿ ಮಾಡಿದ ಕನಿಷ್ಠ ಕೂಲಿ ಹಾಗೆಯೇ ಉಳಿದಿದೆ. ಹೀಗಾಗಿ ಇಂದಿನ ಬೆಲೆಗಳಲ್ಲಿ ಅವರ ಜೀವನದ ಅಗತ್ಯಗಳನ್ನು ಪೂರೈಸುವ ಕನಿಷ್ಠ ವೇತನಗಳನ್ನು ನಿಗದಿ ಮಾಡಬೇಕಾದದ್ದು ಅತೀ ತುರ್ತಿನ ಕರ್ತವ್ಯವಾಗಿದೆ.

ಈ ಕನಿಷ್ಠ ವೇತನವನ್ನು ಸರ್ಕಾರಗಳು ಬೇಕಾಬಿಟ್ಟಿಯಾಗಿ ನಿಗದಿ ಮಾಡುತ್ತವೆ. ಕನಿಷ್ಠ ಕೂಲಿ ಸಲಹಾ ಸಮಿತಿಯ ಸಲಹೆಯನ್ನು ತಳ್ಳಿ ಹಾಕುತ್ತವೆ.

ಕೂಲಿಯ ನಿಗದಿಗೆ ಸರಿಯಾದ ನಿಯಮಗಳಿಲ್ಲದಿರುವುದರಿಂದ ಒಂದೊಂದು ನ್ಯಾಯಾಲಯ ಒಂದೊಂದು ರೀತಿ ತೀರ್ಪನ್ನೀಯುತ್ತವೆ. ಕನಿಷ್ಠ ಕೂಲಿ ಸೂಚನೆಗಳನ್ನು ತಡೆ ಒಡ್ಡಿಯುತ್ತವೆ. ಹೀಗೆ ಸರ್ಕಾರ ಹಾಗೂ ನ್ಯಾಯಾಲಯಗಳು ಮಾಲೀಕರುಗಳಿಗೆ ನೂರಾರು ಕೋಟಿಗಟ್ಟಲೆ ಲಾಭ ಮಾಡಿ ಕೊಡುತ್ತವೆ. ಇವನ್ನು ತಪ್ಪಿಸಲು ಸರಿಯಾದ ಆಧಾರ ನಿಗದಿಯಾಗಬೇಕಾಗಿದೆ.

ಇವೆಲ್ಲದರ ಜೊತೆಗೆ ವೇತನ ನಿಗದಿ ಪಡಿಸಿದರೆ ಸಾಲದು ಅದನ್ನು ಜಾರಿಗೊಳಿಸುವ ವ್ಯವಸ್ಥೆ ರೂಪಿತವಾಗಬೇಕು. ಈಗಿರುವ ವ್ಯವಸ್ಥೆಯಂತೂ ಭ್ರಷ್ಟರಾಗಿ ಮಾಲೀಕರಿಂದ ಹಣಪಡೆದು ಕೂಲಿಕಾರರಿಗೆ ಶತ್ರುಗಳಂತೆ ವರ್ತಿಸುತ್ತಿದೆ.

ಎಷ್ಟೇ ಕನಿಷ್ಠ ವೇತನ ನಿಗದಿಪಡಿಸಿದರೂ ಅದನ್ನು ಜಾರಿ ಮಾಡಿದರೂ ಕೂಡ ತಿಂಗಳಲ್ಲಿ ಕೆಲವೇ ಮಾತ್ರ ಕೆಲಸ ಸಿಕ್ಕಿದರೆ, ಅದರಿಂದೇನು ಪ್ರಯೋಜನ?

ಅತ್ಯಾಧುನಿಕ ಯಂತ್ರಗಳು ಇಂದು ಅಕ್ಕಿ ಗಿರಣಿ ಎಣ್ಣೆ ಗಿರಣಿ ಮೊದಲಾದ ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಪ್ರವೇಶಿಸುತ್ತಿರುವುದರಿಂದ ಕೃಷಿಯಲ್ಲಿಯೂ ಟ್ರಾಕ್ಟರುಗಳು, ಹಾರ್ವೆಸ್ಟ್ ಕಂಬೈನ್‌ಗಳೆಂಬ ದೈತ್ಯ ಒಕ್ಕಣೆ ಯಂತ್ರಗಳು ಭತ್ತ ನಾಟಿ ಹಾಕುವ ಯಂತ್ರಗಳನ್ನು ಆಮದು ಮಾಡಲು ವಿಫುಲವಾದ ಅವಕಾಶ ನೀಡಿರುವುದರಿಂದ ಕೂಲಿಕಾರರಿಗೂ, ಅಸಂಘಟಿತ ಕಾರ್ಮಿಕರಿಗೂ ಕೆಲಸಗಳು, ಕೆಲಸದ ದಿನಗಳು ಕಡಿಮೆಯಾಗುತ್ತಿವೆ. ಇವರು ಅಕ್ಷರಶಃ ಉಪವಾಸ ಬೀಳುವ ಪರಿಸ್ಥಿತಿ ಒದಗಿದೆ.

ಇವೆಲ್ಲದರ ಇವರ ಕೆಲಸಕ್ಕೆ ಯಾವುದೇ ನಿಯಮಗಳಿಲ್ಲ. ಸಮಯಾ ಸಮಯಗಳ ನಿಗದಿಯಿಲ್ಲ ಕೆಲಸ ಮಾಡುವಾಗ ಅಪಘಾತಗಳಾದರೆ, ಆರೋಗ್ಯಕ್ಕೆ ಹಾನಿಯಾದರೆ ಪರಿಹಾರವಿಲ್ಲ ಇತ್ಯಾದಿ ಅನುಕೂಲಗಳನ್ನೆಲ್ಲಾ ಖಾತರಿಗೊಳಿಸುವ ಕೇಂದ್ರ ಕಾನೂನೊಂದು ತುರ್ತು ಅವಶ್ಯಕತೆಯಾಗಿದೆ. ದೇಶದ ದುಡಿಯುವ ಜನರೆಲ್ಲ ಈ ಬೇಡಿಕೆಗಳನ್ನು ಬೆಂಬಲಿಸಿ ಈ ಸಮುದಾಯವನ್ನು ಹೋರಾಟದ ಸೆಳವಿಗೆ ಧುಮುಕಿಸಬೇಕಾಗಿದೆ. ಈ ವರ್ಗ ಎಚ್ಚೆತ್ತರೆ ಹೋರಾಟದ ಕಣಕ್ಕೆ ಧುಮುಕಿದರೆ ಭಾರತದ ಆಳುವ ವರ್ಗ ಓಡಬೇಕಾಗುತ್ತದೆ.

ಬೇಡಿಕೆ : 18 ಜೀತಗಾರರ ವಿಮುಕ್ತಿ

ಪಾಳೆಯಗಾರಿ ಸಂಬಂಧಗಳು, ಗೌಡ ದೇಸಾಯಿಗಳ ದಬ್ಬಾಳಿಕೆಗಳು ಇನ್ನು ಉಳಿದಿರುವ ನಮ್ಮ ರಾಜ್ಯದ ಹಲವು ಭಾಗಗಳಲ್ಲಿ ಬಿಜೆಪಿ ಎಲ್ಲಿ ಪ್ರಬಲವಾಗಿದೆಯೋ ಆ ಎಲ್ಲಾ ರಾಜ್ಯಗಳಲ್ಲಿ ಜೀತಗಾರರ ಶೋಷಣೆ ಗಿರಿಜನರನ್ನು, ದಲಿತರನ್ನು , ಇತರ ಬಡಜನರನ್ನು ಜೀತಗಾರರನ್ನಾಗಿ ದುಡಿಸಿಕೊಳ್ಳುವ ಪದ್ದತಿ ಮುಂದುವರೆದಿದೆ.

ಇಂದಿರಾಗಾಂಧಿಯವರ ಎಲ್ಲಾ ಗರಿಬೀ ಹಠಾವೋ ಇಪ್ಪತ್ತಂಶದ ಅಭರ್ಟಗಳನ್ನು ಮೀರಿಗಟ್ಟಿಯಾಗಿಯೇ ಮುಂದುವರೆದಿದೆ.

ಈ ಜೀತಗಾರಿಕೆಯನ್ನು-ಅತ್ಯಂತ ಕನಿಷ್ಠ ಕೂಲಿಗೆ ಕೆಲವೊಮ್ಮೆ ಕೂಲಿಯೆ ಇಲ್ಲದ ಸಾಲದ ಬಡ್ಡಿ ತೀರಿಸುವುದಕ್ಕೆ ದುಡಿಯುವ ಸೆರೆಯಾಳಿನ ಸ್ಥಿತಿಯಿಂದ ಇವರ ವಿಮೋಚನೆಯಾಗದೆ ಕನಿಷ್ಠ ಕೂಲಿ ಆಂದೋಲನ ಕೃಷಿ ಕೂಲಿಕಾರರ ಆಂದೋಲನವನ್ನು ಆ ಪ್ರದೇಶದಲ್ಲಿ ಬಲಿಷ್ಠಗೊಳಿಸುವುದು ಸಾಧ್ಯವಿಲ್ಲ.

ಜೀತಗಾರಿಕೆ ಎಂಬ ಈ ನಿರಂತರ ದೌರ್ಜನ್ಯವನ್ನು ತೊಡೆಯದೇ ಭಾರತ ನಿಜವಾದ ಪ್ರಜಾಸತ್ತೆ ಎನ್ನಿಸಿಕೊಳ್ಳುವುದಕ್ಕೆ ಅರ್ಹವಾಗುವುದಿಲ್ಲ.

ಬೇಡಿಕೆ : 19 ನ್ಯಾಯ ವ್ಯವಸ್ಥೆ

ನ್ಯಾಯ ವ್ಯವಸ್ಥೆಯನ್ನು ಎಲ್ಲರಿಗೂ ಸುಲಭವಾಗುವಂತೆ, ಜನತೆಯ ಉಸ್ತುವಾರಿಗೆ ಬದ್ಧವಾಗುವಂತೆ ಮಾಡಬೇಕು.

ಭಾರತದ ನ್ಯಾಯದಾನ ವ್ಯವಸ್ಥೆ ವಕೀಲರುಗಳು ಲಕ್ಷಾಧಿಪತಿಗಳಾಗಲು ಹಾಕಿದ ಏಣಿ, ನ್ಯಾಯವೆಂಬುದು ಅತಿ ದುಬಾರಿ ವಸ್ತುವಾಗಲೆಂದೇ ರೂಪಿಸಿದ ವ್ಯವಸ್ಥೆ. ರಾಜರುಗಳು, ಪಾಳೆಯಗಾರರುಗಳ ಕಾಲದಲ್ಲಿ ಆಳುವವನೂ, ಅನ್ಯಾಯಗಳನ್ನೂ ಮಾಡುವವನೂ ರಾಜನೇ, ನ್ಯಾಯ ನೀಡುವವನ್ನು ದಂಡಿಸುವವನೂ ರಾಜನೇ ಎಂಬ ಏಕೀಕೃತ ದಬ್ಬಾಳಿಕೆಯ ವ್ಯವಸ್ಥೆಯಿಂದ ಮುಂದುವರಿದ ಹೆಜ್ಜೆ ಎಂಬುದು ದಿಟ. ಆದರೆ ಅದೇ ಸಮಯದಲ್ಲಿ ನೂರೆಂಟು ಕಾನೂನುಗಳು ಅಡಗಿಸಿಕೊಂಡಿರುವ ಸುಳಿ, ಒಳಸುಳಿಗಳಿಂದ ತಿಳುವಳಿಕೆಯಿಲ್ಲದ ಜನರಿಗೆ ದಾರಿ ತಪ್ಪಿಸುವ ಗೊಂದಲಪುರ. ಜನ ಸಾಮಾನ್ಯರಾರಿಗೂ ತಿಳಿಯದ ಭಾಷೆಯಲ್ಲಿ ಅವರಿಗೆ ತಿಳಿಯಬಾರದೆಂದೇ ವ್ಯವರಿಸುವ ಕೂಟ ವ್ಯವಸ್ಥೆ. ನಮ್ಮ ಸಂವಿಧಾನದ ಆಸ್ತಿ ಹಕ್ಕು ಮೂಲಭೂತ ಹಕ್ಕು ಆದರೆ ಕೆಲಸದ ಹಕ್ಕು ದುಡಿಮೆಯ ಹಕ್ಕು ಮೂಲಭೂತವಲ್ಲ ಎಂಬ ಆಸ್ತಿಯುಳ್ಳ ವರ್ಗಗಳ ಪರವಾದ ನಿಲುವಿನಿಂದ, ಅವರ ಆಸ್ತಿಯನ್ನು ರಕ್ಷಿಸುವ ವ್ಯವಸ್ಥೆ ಹತ್ತಾರುವರ್ಷಗಳ ಕಾಲ ಸಾಗಿ ದಿನವೂ ಹಸಿವಿನಿಂದ ನರಳುವವರ್‍ಯಾರೂ ನ್ಯಾಯಾಲಯ ನಮಗಲ್ಲ ಎಂಬ ತೀರ್ಮಾನಕ್ಕೆ ಬರುವಂತೆ ಮಾಡುವ ಈ ವ್ಯವಸ್ಥೆಯನ್ನು ಪುನರ್ರಚಿಸಬೇಕಾಗಿದೆ. ನ್ಯಾಯಾಧೀಶರೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜನರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕಾದ ರೀತಿಯಲ್ಲಿ ಅವರ ನೇಮಕಾತಿಯನ್ನು ಮಾಡಬೇಕಾಗಿದೆ. ಜನರ ಭಾಷೆಯಲ್ಲಿ ನಡೆಯುವ ಮೊದಲ ಹೆಜ್ಜೆಯನ್ನು ಇಡಬೇಕಾಗಿದೆ. ಅದೇ ಸಮಯದಲ್ಲಿ ಇಂದಿನ ಸಂವಿಧಾನ ನೀಡಿರುವ ಹಕ್ಕುಗಳ ಉಪಯೋಗಿಸಿಕೊಳ್ಳಲು ದುಡಿಯುವ ವರ್ಗ ನ್ಯಾಯಾಲಯವನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳಬೇಕಾಗಿದೆ.

ಲೆಬನಾನ್‌ನ ದಕ್ಷಿಣದಲ್ಲಿ ಇಸ್ರೇಲ್ ಒಂದು ವಾರದಿಂದ ಫಿರಂಗಿ ದಾಳಿ ಹಾಗೂ ವಿಮಾನ ದಾಳಿಗಳಿಂದ ನರಮೇಧ ನಡೆಸುತ್ತಿದೆ. ಇದು ಹಿಜಬೊಲ್ಲಾ ಎಂಬ ಇರಾನ್-ಪರ ಮೂಲಭೂತವಾದಿ ಗೆರಿಲ್ಲಾಗಳ ದಾಳಿಗೆ ಪ್ರತೀಕಾರ. ಉತ್ತರ ಇಸ್ರೇಲ್‌ನ ಮೇಲೆ ನಡೆದ ಈ ದಾಳಿಯಲ್ಲಿ 7 ಜನ ಇಸ್ರೇಲಿಗಳು ಸತ್ತರು. ಆದರೆ ಇದಕ್ಕೆ ಇಸ್ರೇಲಿ ಪ್ರತಿಕ್ರಿಯೆ ತೀರಾ ಅತಿರೇಕದ್ದು. ಲೆಬನಾನ್‌ನ್ನು ಕಬಳಿಸುವ ದುರುದ್ದೇಶದ್ದು. ದಕ್ಷಿಣ ಲೆಬನಾನ್‌ನಿಂದ ರಾಜಧಾನಿ ಬೀರುತ್‌ನತ್ತ ಮೂರು ಲಕ್ಷಕ್ಕೂ ಹೆಚ್ಚು ನಿರಾಶ್ರಿತರು ಓಡಿಹೋಗಿದ್ದಾರೆ. ಜಗತ್ತಿನ ಇತರೆಡೆಗಳಲ್ಲಿ ಸಣ್ಣ ಪುಟ್ಟ ಕಲಹದಲ್ಲೂ ಮೂಗುತೂರಿಸುವ ಭದ್ರತಾ ಸಮಿತಿ ಹಾಗೂ ಅಮೇರಿಕ ತಮಾಷೆ ನೋಡುತ್ತಾ ಸುಮ್ಮನಿವೆ.

ದಕ್ಷಿಣಾ ಆಫ್ರಿಕಾದಲ್ಲಿ ಕರಡು ಸಂವಿಧಾನ ತಯಾರಿಸಲಾಗಿದ್ದು ಎ.ಎನ್.ಸಿ. ಹಾಗೂ ಆಳುವ ಪಕ್ಷ ಎನ್.ಪಿ. ಒಮ್ಮತಕ್ಕೆ ಬಂದಿವೆ. ಆದರೆ ಬಲಪಂಥೀಯ ಕನ್ಸರ್ವೇಟಿವ್ ಪಕ್ಷ, ಇಂಕಾತಾ, ಹಾಗೂ ಫ್ಯಾಸಿಸ್ಟ್ ಪಕ್ಷಗಳು ವರ್ಣಭೇದವನ್ನು ಕೆಲವು ಪ್ರದೇಶಗಳಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆಸುತ್ತಿವೆ. ಇದಕ್ಕಾಗಿ ಹಿಂಸಾಚಾರ ಹರಡುತ್ತಿವೆ. ಇನ್ನೂ ಹೆಚ್ಚಿನ ಹಿಂಸಾಚಾರದ ಬೆದರಿಕೆ ಹಾಕುತ್ತಿವೆ. ಆದರೆ ಎಪ್ರಿಲ್ 27 ರಂದು ಚುನಾವಣೆಯ ಘೋಷಣೆಯೊಂದಿಗೆ ವರ್ಣಭೇದ ಉಳಿಸಿಕೊಳ್ಳುವ ಪ್ರಯತ್ನಗಳು ಸಫಲವಾಗುವ ಸಂಭವಿಲ್ಲ.

ಜಪಾನ್‌ನಲ್ಲಿ ಏಳು ವಿರೋಧ ಪಕ್ಷಗಳ ರಂಗ ಸರಕಾರ ರಚಿಸಲಿವೆ. ಜಪಾನ್ ನವ ಪಕ್ಷದ ನಾಯಕ ಮೊರಿಹಿರೊ ಹೊಸೊಕೊವಾರನ್ನು ಪ್ರಧಾನ ಮಂತ್ರಿಯಾಗಿ ಚುನಾಯಿಸಿದೆ. ಜಪಾನ್ ಕಮ್ಯುನಿಸ್ಟ್ ಪಕ್ಷ ಬಿಟ್ಟು ಇತರ ಎಲ್ಲಾ ವಿರೋಧ ಪಕ್ಷಗಳು ರಂಗದಲ್ಲಿ ಭಾಗವಹಿಸಿವೆ. ಹೊಸಕೊವಾ ಹಿಂದೆ ಲಿಬರಲ್ ಡೆಮಾಕ್ರಾಟಿಕ್ ಪಕ್ಷದಲ್ಲಿದ್ದು ಬಿಟ್ಟು ಬಂದು ಬೇರೆ ಪಕ್ಷ ರಚಿಸಿದರು.

ವಿಶ್ವಸಂಸ್ಥೆ, ಭದ್ರತಾ ಸಮಿತಿ ಈಗೇನು ಮಾಡುತ್ತಿದೆ?

-- ಶರತ್ ಚಂದ್ರ

ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ಫಿರಂಗಿ ಹಾಗೂ ಯುದ್ಧ ವಿಮಾನಗಳಿಂದ ಭಾರಿ ದಾಳಿ ನಡೆಸುತ್ತಿದೆ. ಒಂದು ವಾರದಿಂದ ಈವರೆಗೆ 126 ಜನ ಸತ್ತಿದ್ದಾರೆ. 522 ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಜನ ನಿರಾಶ್ರಿತರಾಗಿ ರಾಜಧಾನಿ ಬೀರತ್‌ನತ್ತ ಧಾವಿಸುತ್ತಿದ್ದಾರೆ. 20-30 ಸಾವಿರ ಜನ ಸಂಖ್ಯೆ ಇರುವ ಹಲವಾರು ದಕ್ಷಿಣ ಲೆಬನಾನ್‌ನ ಪಟ್ಟಣಗಳು ಬಿಕೋ ಎನ್ನುತ್ತಿವೆ.

ಲೆಬನಾನ್‌ನಿಂದ ಉತ್ತರ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಹಿಜಬೊಲ್ಲಾ ಎಂಬ ಮುಸ್ಲಿಂ ಮೂಲಭೂತವಾದಿ ಗೆರಿಲ್ಲಾ ಪಡೆಗಳ ವಿರುದ್ಧ ಇದು ಪ್ರತೀಕಾರ ಎಂದು ಇಸ್ರೇಲಿ ವಾದ. ಈ ದಾಳಿಯಲ್ಲಿ ಏಳು ಜನ ಇಸ್ರೇಲಿಗಳು ಮಡಿದಿದ್ದರು. ಆದರೆ ದಾಳಿಯ ವ್ಯಾಪಕತೆ ನೋಡಿದ ಯಾರೂ ಇದು ಒಪ್ಪವಂತಹ ವಿಷಯವಲ್ಲ. ಯಾಕೆಂದರೆ ದಾಳಿ ಹಿಜಬೊಲ್ಲಾ ಗೆರಿಲ್ಲಾಗಳ ಕ್ಯಾಂಪ್‌ಗಳಿಗೆ ಸೀಮಿತವಾಗಿಲ್ಲ. ನಾಗರಿಕರು ವಾಸಿಸುವ ಪ್ರದೇಶಗಳ ಮೇಲೆ ತೀವ್ರ ದಾಳಿ ನಡೆದಿದೆ. ಇಸ್ರೇಲಿ ಪ್ರಧಾನ ಮಂತ್ರಿಯೇ ದಕ್ಷಿಣ ಲೆಬನಾನ್ 'ಆಳುವುದನ್ನು ಅಸಾಧ್ಯ' ಮಾಡುವುದು ಹಾಗೂ 'ಮಾನವ ವಸತಿಗೆ ಅಯೋಗ್ಯ' ಮಾಡುವುದು ದಾಳಿಯ ಉದ್ದೇಶ ಎಂದು ಬಹಿರಂಗವಾಗಿಯೇ ಹೇಳಿದ್ದಾರೆ. ಅಲ್ಲದೆ ಲೆಬನಾನ್ ಮೇಲೆ ದಾಳಿ ಮಾಡುವ ಮೂಲಕ, ಲೆಬನಾನ್ ಸರಕಾರ ಹಿಜಬೊಲ್ಲಾ ನಿಷೇಧಿಸಿ ನಿರ್ನಾಮ ಮಾಡುವಂತೆ ಮಾಡುವುದು, ಇಸ್ರೇಲಿ ಉದ್ದೇಶವಂತೆ. ಆ ಮೂಲಕ ಇಸ್ರೇಲ್‌ನ ಉತ್ತರ ಗಡಿಪ್ರದೇಶದ ಭದ್ರತೆ ಖಾತರಿಗೊಳಿಸುವುದು ಸರಕಾರ ಉದ್ದೇಶವಂತೆ. ಇಸ್ರೇಲಿ ಪಾರ್ಲಿಮೆಂಟಿನಲ್ಲಿ ಈ ನರಮೇಧದ ನೀತಿಯನ್ನು ಎಡಪಕ್ಷಗಳು ಬಲವಾಗಿ ವಿರೋಧಿಸಿದವು. ಇಸ್ರೇಲಿ ಸರಕಾರದ ಈ ನೀತಿ ವಿರುದ್ಧ ತೀವ್ರ ಪ್ರತಿಭಟನೆಗಳು ನಡೆದಿವೆ. ಲೆಬನಾನ್‌ನಲ್ಲಂತೂ ಭಾರಿ ಪ್ರದರ್ಶನಗಳೂ ನಡೆದಿವೆ. ಅರಬ್ ದೇಶಗಳಲ್ಲೆಲ್ಲಾ ಪ್ರತಿಭಟನೆ ನಡೆದಿವೆ. ಈ ದಾಳಿಯಿಂದ ಹಿಜಬೊಲ್ಲಾ ಮುಸ್ಲಿಂ ಮೂಲಭೂತವಾದಿ ಗುಂಪಿನ ಬಲ ಇನ್ನೂ ಹೆಚ್ಚಾಗಿದೆ.

1982 ಇಸ್ರೇಲಿ ದಾಳಿ ನಂತರ ಲೆಬನಾನ್ ಮೇಲೆ ಅತ್ಯಂತ ತೀವ್ರ ದಾಳಿ ಇದು. 1982 ರಲ್ಲಿ ಇಸ್ರೇಲಿ ಆಕ್ರಮಿಸಿಕೊಂಡು ದಕ್ಷಿಣ, ಲೆಬನಾನ್ ಪ್ರದೇಶಗಳನ್ನು ಇಸ್ರೇಲ್ ತನ್ನ 'ಭದ್ರತಾ ಪ್ರದೇಶ' ಎಂದು ಕರೆಯುತ್ತದೆ. ಈ ಇಸ್ರೇಲ್ ಆಕ್ರಮಿತ ಪ್ರದೇಶದ ಮೇಲಿನ ಪಡೆಗಳ ಮೇಲೆ ಗೆರಿಲ್ಲಾಗಳ ದಾಳಿ ನಡೆಯುತ್ತಿರುವುದು ಈ ಪ್ರದೇಶದಿಂದ ಇಸ್ರೇಲ್ ಹಿಂತೆಗೆಯುವಂತೆ ವಿಶ್ವಸಂಸ್ಥೆ ನಿರ್ಣಯ 425 ನಿರ್ದೇಶಿಸಿದೆ. ಆದರೆ ಅದು ಇಸ್ರೇಲ್ ಮೇಲಿನ ಎಲ್ಲಾ ನಿರ್ಣಯಗಳಂತೆ ನೆನೆಗುದಿಯಲ್ಲಿದೆ. ಇದನ್ನು ಇಸ್ರೇಲ್, ಅದರ ದೆಂಬಲಿಗ ಅಮೇರಿಕ, ಅದರ ಕಪಿಮುಷ್ಟಿಯಲ್ಲಿರುವ ಭದ್ರತಾ ಸಮಿತಿ ಮರೆಮಾಚುತ್ತಿವೆ. ಇಸ್ರೇಲಿ ನರಮೇಧ ಖಂಡಿಸಿ, ನಿರ್ಣಯ 425 ಪಾಲಿಸುವಂತೆ ನಿರ್ದೇಶಿಸುವ ಬದಲು ಕದನ ವಿರಾಮಕ್ಕೆ ಮಾತ್ರ ಕೋರಿವೆ. ಆಕ್ರಮಿತ ಪ್ರದೇಶಗಳನ್ನು ವಿವಾದಾಸ್ಪದ ಪ್ರದೇಶಗಳೆಂದು ಕರೆದಿವೆ. ಸೋಮಾಲಿಯಾ, ಇರಾಕ್‌ಗಳಲ್ಲಿ, ವಿಶ್ವಸಂಸ್ಥೆ ನಿರ್ಣಯದ ಉಲ್ಲಂಘನೆಯಾದಾಗ ರಾತ್ರೋರಾತ್ರಿ ಮಧ್ಯಪ್ರವೇಶಿಸುವ ಭದ್ರತಾ ಸಮಿತಿ ಕಿರುಬೆರಳೆತ್ತದೆ ಸುಮ್ಮನೆ ಕೂತಿದೆ.

ವರ್ಣ ಭೇದ ಉಳಿಸಲು ಸಾಧ್ಯವಿಲ್ಲ

ಎ.ಎನ್.ಸಿ.ಯ ಜನ ಬೆಂಬಲ, ಸಾಮೂಹಿಕ ಚಳುವಳಿ ಹಾಗೂ ಶಾಂತಿ ಮಾತುಕತೆಗಳನ್ನು ಜಾಣ್ಮೆಯಿಂದ ಉಪಯೋಗಿಸಿಕೊಂಡಿರುವ ರೀತಿ, ವರ್ಣಭೇದವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಶಕ್ತಿಗಳ ಪ್ರಯತ್ನ ಅಸಾಧ್ಯವೆನ್ನಿಸುವ ಮಟ್ಟ ಮುಟ್ಟಿದೆ. ಆದರೆ ಈ ಶಕ್ತಿಗಳು ಇನ್ನೂ ತೀವ್ರ ಪ್ರಯತ್ನ ನಡೆಸುತ್ತಲೇ ಇವೆ. ವರ್ಣಭೇದ ರಹಿತ, ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾದತ್ತ ಚಲನೆ ಹಿಂದಿರುಗಿ ಹೋಗಲಾಗದ ಘಟ್ಟ ಮುಟ್ಟಿದೆ. ಈ ವಾರ ತಯಾರಾದ ತಜ್ಞರ ಸಮಿತಿ ತಯಾರಿಸಿದ ಹಂಗಾಮಿ ಸಂವಿಧಾನ ಇದರಲ್ಲಿ ಒಂದು ಪ್ರಮುಖ ಮೈಲಿಗಲ್ಲು. 1994 ರ ಎಪ್ರಿಲ್ 27 ರಂದು ವರ್ಣಭೇದ-ರಹಿತ ಬಹುಪಕ್ಷೀಯ ಚುನಾವಣೆಯ ಬಗ್ಗೆ ನಿರ್ಧಾರ ಸಹ ಇಂತಹುದೇ ಒಂದು ಮೈಲಿಗಲ್ಲು.

ಈ ಸಂವಿಧಾನ ಇತರ ಪಕ್ಷಗಳ ಚಳುವಳಿಗಳ ಕಾಳಜಿಯನ್ನು ಒಳಗೊಳ್ಳಲು ಪ್ರಯತ್ನಿಸಿದೆ. ಈ ಸಂವಿಧಾನ ಫೆಡರಲ್ ಸ್ವರೂಪದ್ದು ರಾಜ್ಯ ಶಾಲಿ, ಪ್ರಾಂತ್ಯಗಳು ಅಥವಾ ಪ್ರದೇಶಗಳಿಗೆ ಸಾಕಷ್ಟು ಸ್ವಾಯತ್ತತೆ ಇರುತ್ತವೆ. ಈ ಪ್ರದೇಶಗಳು ತಮ್ಮದೇ ವಿಧಾಯಕ ಸಭೆ, ಸರಕಾರ, ಆರ್ಥಿಕ ಹಕ್ಕುಗಳನ್ನು ಹೊಂದಿರುತ್ತವೆ. ಶಿಕ್ಷಣ, ಆರೋಗ್ಯ ಕೃಷಿ ; ಕಾನೂನು ಪಾಲನೆಗಳ ಜವಾಬ್ದಾರಿ ಹೊಂದಿರುತ್ತವೆ.

ತಮ್ಮದೇ ಸಂವಿಧಾನವನ್ನು ರಚಿಸಬಹುದು. ಈ ರೀತಿ ನಿಜವಾದ ಫೆಡರಲ್ ತತ್ವಗಳಿಗೆ ಅವಕಾಶ ಕೊಟ್ಟಿದ್ದರೂ, ಜನಾಂಗೀಯ ವರ್ಣದ ಆಧಾರದ ಮೇಲೆ ಪ್ರತ್ಯೇಕತೆ ಉಳಿಸಿ ಬೆಳೆಸುವ ಶಕ್ತಿಗಳಿಗೆ ಅವಕಾಶವಾಗದಂತೆ ಜಾಗರೂಕತೆವಹಿಸಲಾಗಿದೆ. ಈ ರೀತಿಯ ಪ್ರಾದೇಶಿಕ ಸಂವಿಧಾನ 'ಜನಾಂಗೀಯ ವರ್ಣ, ಲಿಂಗದ ಆಧಾರದ ಮೇಲೆ ಯಾವ ರೀತಿಯ ಭೇದಭಾವಗಳನ್ನು ಹೊಂದಿರಬಾರದು. ಈ ಸಂವಿಧಾನಕ್ಕೆ ರಾಷ್ಟ್ರಮಟ್ಟದ ಸಂವಿಧಾನ ಸಭೆಯ ಮೂರನೇ ಎರಡು ಬಹುಮತ ದೊರಕಬೇಕು. ಬಲಪಂಥೀಯ ಕನ್ಸರ್ವೇಟಿವ್ ಪಕ್ಷ, ಹಾಗೂ ವರ್ಣಭೇದದ ಜತೆ ಸಹಕರಿಸದ ಕರಿಯರ ಪಕ್ಷ ಇಂಕಾತಾ ಇದನ್ನು ವಿರೋಧಿಸಿದೆ. ಅವು ಪ್ರದೇಶಗಳಲ್ಲಿ ವರ್ಣ ಭೇದ ಮುಂದುವರೆಸುವ ಪಕ್ಷದಲ್ಲಿದೆ.

ಚುನಾವಣೆ ನಡೆಯುವವರೆಗೆ ತಾತ್ಕಾಲಿಕ ಸರಕಾರವೊಂದು ಹಂಗಾಮಿ ಸಂವಿಧಾನದ ಪ್ರಕಾರ ಅಧಿಕಾರ ನಡೆಸುತ್ತದೆ. ಇದನ್ನು ತಡೆಯಲು ವರ್ಣಭೇದ-ಪರ ಶಕ್ತಿಗಳು ಹಿಂಸಾಚಾರ ಆರಂಭಿಸಿವೆ. ಬಲಪಂಥೀಯ ಬಿಳಿಯರು, ಫ್ಯಾಸಿಸ್ಟ್ ಪಕ್ಷಗಳು, ಪ್ರತ್ಯೇಕ ಕರಿಯ 'ಹೋಂಲ್ಯಾಂಡ್'ಗಳ ಆಳುವವರು ಸಹಕರಿಸುತ್ತಿದ್ದಾರೆ. ಇದರಲ್ಲಿ, ಈ ಶಕ್ತಿಗಳಿಗೆ ಹೆಚ್ಚಿನ ಜನಬೆಂಬಲವಿಲ್ಲ. ಆದ್ದರಿಂದ ಬಹುಪಕ್ಷೀಯ ಚುನಾವಣೆ ನಡೆದರೆ ಅವುಗಳ ಶಕ್ತಿ ವಿಪರೀತವಾಗಿ ಕ್ಷೀಣಿಸುತ್ತದೆ. ಹಿಂಸಾಚಾರದಿಂದ ಈ ಚಲನೆ ನಿಲ್ಲಿಸಲು ಸಾಧ್ಯವಿಲ್ಲ ಎಂದು ಎ.ಎನ್.ಸಿ. ಪುನಃ ಪುನಃ ತೋರಿಸಿದೆ.

ಲೋಕಸಂಚಾರ

ರಶ್ಯನ್ ರೂಬಲ್ ನೋಟು ಹಗರಣ

ರಶ್ಯಾದ ಕೇಂದ್ರೀಯ ಬ್ಯಾಂಕ್ ಈಗಾಗಲೇ ಅಲ್ಲೋಲಕಲ್ಲೋಲವಾಗಿರುವ ಜನಜೀವನ ಇನ್ನಷ್ಟು ಅಸ್ತವ್ಯಸ್ತಗೊಳಿಸುವ ನಿರ್ಧಾರ ಸರಕಾರ ಹಾಗೂ ಪಾರ್ಲಿಮೆಂಟು (ಸುಪ್ರಿಂಸೋವಿಯೆಟ್) ನಡುವೆ ತೀವ್ರ ಘರ್ಷಣೆಗೆ ಇನ್ನೊಂದು ಕಾರಣ ಒದಗಿಸಿದೆ.

ರಶ್ಯದ ಕೇಂದ್ರೀಯ ಬ್ಯಾಂಕ್ ಆಗಸ್ಟ್ 7ರ ಒಳಗೆ ಅಂದರೆ ಎರಡು ವಾರಗಳಲ್ಲಿ ಎಲ್ಲಾ ಹಳೆಯ ರೂಬಲ್ ನೋಟುಗಳನ್ನು ವಿನಿಮಯ ಮಾಡಿ ಹೊಸ ನೋಟುಗಳನ್ನು ಪಡೆಯಬೇಕೆಂಬ ಆಜ್ಞೆ ಹೊರಡಿಸಿತು. 1961 ರಿಂದ 1992 ರ ವರೆಗೆ ಹೊರಡಿಸಿರುವ ರೂಬಲ್‌ಗಳು ಜಾರಿಯಲ್ಲಿರುವುದಿಲ್ಲ. 35 ಸಾವಿರ ರೂಬಲ್‌ಗಳಿಗಿಂತ ಹೆಚ್ಚಿನ ವಿನಿಮಯ ಮಾಡುವಂತಿಲ್ಲ. ಅದಕ್ಕಿಂತ ಹೆಚ್ಚಿನ ರೂಬಲ್‌ಗಳನ್ನು 6 ತಿಂಗಳ ಡಿಪಾಸಿಟ್‌ನಲ್ಲಿಡಬೇಕು ಎಂಬುದು ಬ್ಯಾಂಕ್‌ನ ಆಜ್ಞೆಯಾಗಿತ್ತು.

ಬ್ಯಾಂಕ್‌ನ ಮುಂದೆ ಸ್ವಭಾವಿಕವಾಗಿಯೇ ಭಾರಿ ಕ್ಯೂಗಳು ಆರಂಭವಾದವು ಆತಂಕ, ಭಯ ತಾಂಡವವಾಡುತ್ತಿದ್ದವು. ಈ ನೀತಿ ತೀವ್ರ ಟೀಕೆಗೊಳಗಾಯಿತು. ಸುಪ್ರೀಂ ಸೋವಿಯೆಟ್ ನಾಯಕರು ಇಂತಹ ಮಹತ್ವದ ನಿರ್ಣಯವನ್ನು ಬ್ಯಾಂಕ್ ತಾನೇತಾನಾಗಿ ತೆಗೆದುಕೊಂಡಿದ್ದನ್ನು ತೀವ್ರವಾಗಿ ಟೀಕಿಸಿತು. ಒಬ್ಬ ನಾಯಕ 'ನಾವು ಇನ್ನೊಂದು ಬಾರಿ ಜಗತ್ತಿನ ಎದುರು ಹಾಸ್ಯಾಸ್ಪದವಾಗಿ ಕಾಣಿಸಿಕೊಳ್ಳುತ್ತಿದ್ದೇವೆ' ಎಂದು ಖಾರವಾಗಿ ಟೀಕಿಸಿದರು. ಇದು ಸರ್ಕಾರದ ನೀತಿಯ ಪ್ರಕಾರ ಹೊರಡಿಸಿದ ಆಜ್ಞೆಯೇ? ಇದರ ಉದ್ದೇಶ ಏನು? ಎಂಬ ಬಗ್ಗೆ ಯೆಲ್ಟ್‌ಸಿನ್ ಸರಕಾರದ ಒಳಗೆ ಸಾಕಷ್ಟು ಸಂಶಯ ಗೊಂದಲಗಳು ಕಂಡುಬಂದವು. ಈ ಹಗರಣ ಯೆಲ್ಟ್‌ಸಿನ್ ಸರಕಾರ ನಿಜವಾಗಲು "ಸರಕಾರ" ನಡೆಸುತ್ತಿದ್ದೆಯೇ ಎಂಬ ಬಗ್ಗೆ ಸಂಶಯಗಳಿಗೆ ಕಾರಣವಾಗಿದೆ.

ಆಮೇಲೆ ಅಧ್ಯಕ್ಷ ಯೆಲ್ಟ್‌ಸಿನ್ ಬ್ಯಾಂಕ್ ಆಜ್ಞೆಯನ್ನು ಬಹಳ ಮಟ್ಟಿಗೆ ಸಡಿಲಿಸಿದರು. 1 ಲಕ್ಷ ರೂಬಲ್‌ವರೆಗೆ ವಿನಿಮಯ ಮಾಡಬಹುದು ಅವಧಿಯನ್ನು ಆಗಸ್ಟ್ ಕೊನೆಯವರೆಗೆ ವಿಸ್ತರಿಸಲಾಯಿತು.

ಈ ಬಿಕ್ಕಟ್ಟು ರಶ್ಯಾದಲ್ಲಿ ಮಾತ್ರವಲ್ಲ ಇತರ ಮಾಜಿ ಸೋವಿಯೆಟ್ ಗಣರಾಜ್ಯಗಳಲ್ಲಿ ಗೊಂದಲ ಉಂಟುಮಾಡಿತ್ತು. ಏಕೆಂದರೆ ಈ ಗಣರಾಜ್ಯಗಳಲ್ಲಿ ರೂಬಲ್‌ಗಳನ್ನೇ ಇನ್ನು ಬಳಸಲಾಗುತ್ತಿದೆ.

ಮ್ಯಾಸ್‌ಟ್ರಿಕ್ಟ್ ಒಪ್ಪಂದಕ್ಕೆ ಅಸ್ತು ಕೊಡಿಸಲು ಸುತ್ತು ಹೊಡೆದ ಮೇಜರ್

ಬ್ರಿಟನ್‌ನ ಜಾನ್ ಮೇಜರ್‌ರವರ ಟೋರಿ ಸರ್ಕಾರ ಯುರೋಪಿಯನ್ ದೇಶಗಳ ಆರ್ಥಿಕ ರಾಜಕೀಯ ಒಕ್ಕೂಟದ ಸ್ವರೂಪ ನಿರ್ದೇಶಿಸಿರುವ ಮ್ಯಾಸ್‌ಟ್ರಿಕ್ಟ್ ಒಪ್ಪಂದಕ್ಕೆ ಪಾರ್ಲಿಮೆಂಟಿನ ಅಸ್ತು ಪಡೆಯಲು ಪೂರ್ತಿ ಸುತ್ತು ಹೊಡೆಯಬೇಕಾಯಿತು. ಈ ಪ್ರಯತ್ನದಲ್ಲಿ ಸರಕಾರ ಬೀಳುವ ಅಪಾಯದ ಅಂಚಿಗೆ ಬಂದಿತ್ತು. ಈ ಬಿಕ್ಕಟ್ಟು ತಪ್ಪಿಸಿಕೊಳ್ಳುವುದರಲ್ಲಿ ಸಫಲರಾದರೂ, ಜಾನ್ ಮೇಜರ್ ಟೋರಿ ಸರ್ಕಾರ ತೀರಾ ದುರ್ಬಲವಾಗಿದೆ. ಜನಪ್ರಿಯತೆ ಕಳೆದುಕೊಂಡಿದೆ.

ಟೋರಿ ಪಕ್ಷದಲ್ಲೇ ಯುರೋಪಿಯನ್ ಒಕ್ಕೂಟದ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಥ್ಯಾಚರ್ ನಾಯಕತ್ವದ ಬಣ ಅದನ್ನು ವಿರೋಧಿಸುತ್ತಿದೆ. ಮೇಜರ್ ಯುರೋಪಿಯನ್ ಒಕ್ಕೂಟದ ಮ್ಯಾಸೆಟ್ರಿಕ್ಟ್ ಒಪ್ಪಂದಕ್ಕೆ ಸಹಿ ಹಾಕುವಾಗ ಅದರಲ್ಲಿನ ಸಾಮಾಜಿಕ ಅಂಶಗಳ ಜಾರಿ ಬಗ್ಗೆ ಬ್ರಿಟನ್‌ಗೆ ವಿನಾಯಿತಿ ಪಡೆದುಕೊಂಡಿದ್ದರು. ಈ ವಿನಾಯಿತಿಯನ್ನು ಲೇಬರ್ ಪಕ್ಷ ವಿರೋಧಿಸುತ್ತಿದೆ. ಇದರಿಂದ ಬ್ರಿಟನ್‌ನ ಈಗಿನ ವ್ಯವಸ್ಥೆಗಿಂತ ಹೆಚ್ಚಾಗಿ ಕಾರ್ಮಿಕರ ಪರ ಇರುವ ಸಾಮಾಜಿಕ ಕಾನೂನುಗಳು ಜಾರಿಗೆ ಬರುತ್ತವೆ. ಆದ್ದರಿಂದ ಟೋರಿ ಪಕ್ಷ ಮಂಡಿಸಿದ ನಿರ್ಣಯವನ್ನು ವಿರೋಧಿಸಿತ್ತುತು ಮತ ಹಾಕಿದಾಗ ಮೊದಲ ಬಾರಿ ನಿರ್ಣಯದ ಪರ-ವಿರೋಧ ಸಮವಾಗಿ ಮತದಾನವಾಯಿತು. ಎರಡನೇ ಬಾರಿ ಸರಕಾರ ನಿರ್ಣಯ 8 ಮತಗಳಿಂದ ಸೋತು ಹೋಯಿತು. ಟೋರಿ ಭಿನ್ನಮತೀಯರು ವಿರೋಧಪಕ್ಷಗಳೊಂದಿಗೆ ಮತ ನೀಡಿದರು.

ಆಗ ಜಾನ್‌ಮೇಜರ್ ಸರ್ಕಾರದಲ್ಲಿ ವಿಶ್ವಾಸ ತೋರುವ ನಿರ್ಣಯ ಮುಂದ ತಂದರು. ವಿಶ್ವಾಸ ಮತದಲ್ಲಿ ತಾವು ಸೋತರೆ ಪಾರ್ಲಿಮೆಂಟು ವಿಸರ್ಜಿಸಿ, ಮರು ಚುನಾವಣೆ ನಡೆಸುವುದಾಗಿ ಟೋರಿ ಭಿನ್ನಮತೀಯರನ್ನು ಬೆದರಿಸಿದರು. 23 ಮತಗಳಿಂದ ಸರ್ಕಾರ ವಿಶ್ವಾಸ ಮತಗಳಿಸಿತು.

ಮ್ಯಾಸ್‌ಟ್ರಿಕ್ಟ್ ಒಪ್ಪಂದ ಸಹಿಹಾಕುವ ಅಧಿಕಾರವನ್ನೂ ಸರ್ಕಾರಕ್ಕೆ ಕೊಡಲಾಯಿತು.

ಆದರೆ ಇನ್ನೂ ಮ್ಯಾಸ್‌ಟ್ರಿಕ್ಟ್ ಒಪ್ಪಂದಕ್ಕೆ ಸಹಿಹಾಕಲು ಇನ್ನು ಒಂದು ಆತಂಕವಿದೆ. ಈ ಒಪ್ಪಂದದ ವಿರುದ್ಧ ಟೈಮ್ಸ್ ಮಾಜಿ ಸಂಪಾದಕರೊಬ್ಬರು ಕೋರ್ಟಿಗೆ ಹೋಗಿದ್ದಾರೆ. ಕೋರ್ಟು ತೀರ್ಮಾನಕ್ಕೆ ಕಾಯಬೇಕಾಗಿದೆ. ಇದೇ ರೀತಿ ಜರ್ಮನಿಯಲ್ಲೂ ಆಗಿದೆ.

ಮಿಲೇ ಸುರ್ ಮೇರಾ ತುಮ್ಹಾರ ಸುರ್ ಬಗೇ ಹಮಾರ

ಅಯೋಧ್ಯೆಯಲ್ಲಿ ಆಗಸ್ಟ್ 15 ರಂದು ಸಹಮತ್ ಕಾರ್ಯಕ್ರಮ

ದೇಶದ ಸಾಂಸ್ಕೃತಿಕ ರಂಗದಲ್ಲೂ ಹೆಚ್ಚುತ್ತಿರುವ ಕೋಮುವಾದಿಗಳ ಅರ್ಭಟವನನು ಎದುರಿಸುವಲ್ಲಿ ನಿರಂತರವಾಗಿ ತೊಡಗಿರುವ "ಕೋಮುವಾದದ ವಿರುದ್ಧ" ಕಲಾವಿದರು ಎಂಬ ಕಾರ್ಯಕ್ರಮಗಳನ್ನು ಮುಂಬೈ ಹಾಗೂ ದಿಲ್ಲಿಯಲ್ಲಿ ಯಶಸ್ವಿಯಾಗಿ ನಡೆಸಿದ ಹಾಗೂ ವಿವಿಧ ಪ್ರಖ್ಯಾತ ಕಲಾವಿದರ ವರ್ಣಚಿತ್ರಗಳ ಪ್ರದರ್ಶನವನ್ನು 20 ನಗರಗಳಲ್ಲಿ ನಡೆಸಿದ ದೆಹಲಿಯ 'ಸಹಮತ್' (ಖ್ಯಾತ ಕಲಾವಿದ ಹುತಾತ್ಮ ಸಫ್ದರ್ ಹಾಶ್ಮಿನೆನಪಿನ ಟ್ರಸ್ಟ್) ಈ ಆಗಸ್ಟ್ 14-15 ರಂದು ಅಯೋಧ್ಯೆಯ ಸರಯೂ ನದಿ ತೀರದಲ್ಲಿ ಇನ್ನೊಂದು ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಆಧುನಿಕ ಭಾರತದ ವೈವಿಧ್ಯಮಯ ಸಂಸ್ಕೃತಿಗೆ ತಮ್ಮ ತಮ್ಮ ಪ್ರಕಾರಗಳಲ್ಲಿ (ಚಿತ್ರಕಲೆ, ಸಂಗೀತ, ನೃತ್ಯ ವಾಸ್ತುಶಿಲ್ಪ, ವಿನ್ಯಾಸ ಇತ್ಯಾದಿ) ಗಣನೀಯ ಕೊಡುಗೆ ನೀಡಿದ ಕಲಾವಿದರ ಒಂದು ಅಪೂರ್ವ ಸಂಗಮವಾಗಲಿದೆ ಇದು.

ಆಗಸ್ಟ್ 14-15ರ ಮಧ್ಯ ರಾತ್ರಿ 46 ವರ್ಷಗಳ ಹಿಂದೆ ಭಾರತದ ಸ್ವಾತಂತ್ರ್ಯೋದಯದ ಸ್ಮರಣಾರ್ಥ ವರ್ಣಚಿತ್ರಮಯ ಹಾಯಿಗಳನ್ನು ಪಡೆದ ದೋಣಿಗಳು ಸರಯೂ ನದಿಯಲ್ಲಿ ತೇಲಿ ಹೋಗುತ್ತವೆ. ಅದರೊಂದಿಗೇ ಸಂಗೀತ ಸಮಾರಂಭ, ವಿವಿಧ ಭಾರತೀಯ ಭಾಷೆಗಳ ಕವಿಗಳಿಂದ ಸ್ವಂತ ಕೃತಿಗಳ ವಾಚನ ನಡೆಯುತ್ತದೆ. ಆಧುನಿಕ ಭಾರತದ ಸೃಜನಾತ್ಮಕ ಸ್ಫೂರ್ತಿಯ ವಿಭಿನ್ನ, ಹಲವಾರು ಶೈಲಿಗಳನ್ನು ಸಂಕೇತಿಸುವ ನೂರಾರು ವರ್ಣರಂಜಿತ ಕೊಡೆಗಳನ್ನು ಬಳಸಲಾಗುತ್ತದೆ ಎಂದು 'ಸಹಮತ್'ನ ಪ್ರಕಟಣೆ ತಿಳಿಸಿದೆ.

ರಾಷ್ಟ್ರಮಟ್ಟದ ದುಡಿಯುವ ಮಹಿಳೆಯರ ತರಬೇತಿ ಶಿಬಿರ

ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ) ಹಾಗೂ ಸಿಐಟಿಯು ಇತ್ತೀಚೆಗೆ ದುಡಿಯುವ ಮಹಿಳೆಯರ ಒಂದು ರಾಷ್ಟ್ರೀಯ ತರಬೇತಿ ಶಿಬಿರವನ್ನು ಏರ್ಪಡಿಸಿದ್ದವು. ಕೇರಳ, ಕರ್ನಾಟಕ, ಒರಿಸ್ಸಾ, ಬಿಹಾರ್, ಆಂಧ್ರ ಪ್ರದೇಶ, ತಮಿಳುನಾಡು ಉತ್ತರ ಪ್ರದೇಶ, ಮಧ್ಯಪ್ರದೇಶ, ಮತ್ತು ಮಹಾರಾಷ್ಟ್ರ ಮುಂತಾದ ರಾಜ್ಯಗಳಿಂದ ಪ್ರತಿನಿಧಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.

ಜುಲೈ 23ರಂದು ಮೊದಲಿಗೆ ಈ ಶಿಬಿರದ ಪರಿಚಯವನ್ನು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾಂ. ವಿಮಲಾ ರಣದಿವೆಯವರು ಮಾಡಿಕೊಟ್ಟರು.

ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳಾದ ಕಾಂ. ಎಮ್.ಕೆ. ಪಂಧೆಯವರು ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿವರಿಸಿದರು. ಜುಲೈ 24 ರಂದು ರಾಜ್ಯ ಸರಕಾರಿ ನೌಕರರ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಕಾಂ. ಸುಕೋಮಲ್ ಸೇನ್ ರವರು ಟ್ರೇಡ್ ಯೂನಿಯನ್‌ನ ಇತಿಹಾಸದ ಬಗ್ಗೆ ವಿವರಿಸಿದರು. ಅಂದು ಮಧ್ಯಾಹ್ನ ಐ.ಎಲ್.ಓ ಡಿಪ್ಯೂಟಿ ಡೈರೆಕ್ಟರ್ ಲೈಲಾ ಅಮೋಘ ರೆಡ್ಡಿಯವರು ಐ.ಎಲ್.ಓ ಮತ್ತು ದುಡಿಯುವ ಮಹಿಳೆ, ಬಾಲ ಕಾರ್ಮಿಕರ ಬಗ್ಗೆ ಐ.ಎಲ್.ಓ ಇದರ ಬಗ್ಗೆ ಚಿತ್ರಗಳ ಮುಖಾಂತರ ವಿವರಿಸಿ ಕೆಲವು ಪುಸ್ತಕಗಳನ್ನು ಅಲ್ಲಿನ ಪ್ರತಿಯೊಬ್ಬರಿಗೂ ಕೊಟ್ಟು ತನ್ನಿಂದ ಏನು ಸಹಾಯ ಬೇಕಾದರೂ ಕೇಳಬಹುದು ಎಂಬ ಭರವಸೆಯನ್ನು ನೀಡಿದರು. ಅಂದು ಸಾಯಂಕಾಲ ಕಾಂ. ಶ್ರೀಹರಿಯವರು 'ಹೊಸ ಆರ್ಥಿಕ ನೀತಿಯಿಂದ ದುಡಿಯುವ ಮಹಿಳೆಯರ ಮೇಲಾಗುವ ಪರಿಣಾಮಗಳನ್ನು ಉದಾಹರಣೆಗಳ ಮೂಲಕ ವಿವರಿಸಿದರು. ಜುಲೈ 25ರಂದು ಬೆಳಿಗ್ಗೆ ಕಾಂ. ಪಂಧೆಯವರು ಸಮಾಜವಾದಕ್ಕೆ ಉಂಟಾಗಿರುವ ಬಿಕ್ಕಟ್ಟು ಮತ್ತು ಅದರ ಬಗ್ಗೆ ನಮ್ಮ ನಿಲುವು ಎಂಬುದರ ಬಗ್ಗೆ ಮಾತನಾಡಿದರು. ಆಂಧ್ರಪ್ರದೇಶದ ಕಾಂ. ಪ್ರಸಾದ್‌ರಾವ್‌ರವರು ಟ್ರೇಡ್‌ಯೂನಿಯನ್ ಚಳುವಳಿ ಮತ್ತು ದುಡಿಯುವ ಮಹಿಳೆ ಈ ವಿಷಯದ ಬಗ್ಗೆ ವಿವರಿಸಿದರು.

ಎಲ್ಲಾ ರಾಜ್ಯಗಳಿಂದ ಬಂದ ಪ್ರತಿನಿಧಿಗಳು 'ಈ ತರಬೇತಿ ಶಿಬಿರ ತುಂಬಾ ಉಪಯುಕ್ತವಾಗಿವೆ ಎಂದೂ ದುಡಿಯುವ ಮಹಿಳೆಯರು ತಾವೇ ಸ್ವತಂತ್ರವಾಗಿ ಹೋರಾಡಲು ಹುಮ್ಮಸ್ಸು ನೀಡಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಶಿಬಿರಕ್ಕೆ ಕರ್ನಾಟಕದಿಂದ ಕಾಂ. ಖುರ್ಷಿದಾ ಬೇಗಂ. ಕಾಂ. ಎಂ.ಎಂ. ರಾಜಮ್ಮ ಮತ್ತು ಕಾಂ. ವರಲಕ್ಷ್ಮಿ ಬಾಗವಹಿಸಿದ್ದರು.

1970 ರಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ರಚಿತವಾಗಿದ್ದರೂ. ಇಂತಹ ಶಿಬಿರ ನಡೆದದ್ದು ಮಾತ್ರ ಇದೇ ಮೊಟ್ಟ ಮೊದಲು. ಇದಕ್ಕೆ ಮುಖ್ಯ ಕಾರಣ ಮಹಿಳೆಯರು ಟ್ರೇಡ್ ಯೂನಿಯನ್‌ನಲ್ಲಿ ಮುಂದೆ ಬಾರದೇ ಇದ್ದದ್ದು. ಆದರೆ ಈಗ ಸಿಐಟಿಯು ನಾಯಕರ ನಿರಂತರ ಶ್ರಮದ ಫಲವಾಗಿ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಇಂತಹ ಸಮಿತಿ ಇದ್ದರೂ ಇಲ್ಲದಿದ್ದರೂ ಸಹ ದುಡಿಯುವ ಮಹಿಳೆಯರು ಟ್ರೇಡ್ ಯೂನಿಯನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಿಐಟಿಯು ಸದಸ್ಯತ್ವ ಇರುವ ದುಡಿಯುವ ಮಹಿಳೆಯರು ಒಟ್ಟು 20,000. ಇವರಿಂದಾಗಿ ಅಖಿಲ ಭಾರತದಲ್ಲಿ 3 ನೇ ಸ್ಥಾನವನ್ನು ನಮ್ಮ ರಾಜ್ಯ ಸಿ.ಐ.ಟಿ.ಯು ಹೊಂದಿದೆ.

KRNM/BGS-405 MAG(2) PRB DECR 319-78/79

ಜನರ ಸಂಕಷ್ಟಗಳ ಮಧ್ಯೆ ಸ್ವಾತಂತ್ರ್ಯೋತ್ಸವ

-- ಎನ್.ಕೆ. ಉಪಾಧ್ಯಾಯ

"ಜನರ ಹೋರಾಟಗಳ ಮೂಲಕ ಈ ದೇಶದ ಐಕ್ಯತೆಯನ್ನು ಕಾಪಾಡುತ್ತೇವೆ, ಈ ದೇಶದ ಅಭಿವೃದ್ಧಿಯನ್ನು ಸಾಧಿಸುತ್ತೇವೆ, ಈ ದೇಶದ ಸ್ವಾತಂತ್ರ್ಯವನ್ನು ಸಾರ್ವಭೌಮತ್ವವನ್ನು ರಕ್ಷಿಸುತ್ತೇವೆ" ಎಂದು ಹೋದ ವರ್ಷ ನಲವತ್ತೈದನೇ ವಾರ್ಷಿಕೋತ್ಸವದ ದಿನ ಬಿಜೆಪಿಯನ್ನು ಬಿಟ್ಟು ಎಲ್ಲ ರಾಜಕೀಯ ಪಕ್ಷಗಳೂ ಸಾರ್ವಜನಿಕರೂ ಪ್ರತಿಜ್ಞೆ ಕೈಗೊಂಡಿದ್ದರು. ಸಿಪಿಐ(ಎಂ), ಸಿಪಿಐ, ಜನತಾದಳ,ಇತರ ರಾಷ್ಟ್ರೀಯ ರಂಗದಪಕ್ಷಗಳನ್ನೊಳಗೊಂಡ ರಾಷ್ಟ್ರೀಯ ಏಕತಾ ಸಮಿತಿ ಈ ರೀತಿಯ ಪ್ರತಿಜ್ಞೆ ಕೈಗೊಳ್ಳುವ ನಿರ್ಧಾರ ಕೈಗೊಂಡಿತ್ತು. ಅದೇ ಸಮಯದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳು ಗುಂಡು ನಿರೋಧಕ ಕವಚ ತೊಟ್ಟು ಬ್ಲಾಕ್‌ಕ್ಯಾಟ್‌ಗಳ ಬಿಗಿ ರಕ್ಷಣಾವ್ಯೂಹದ ನಡುವಿನಿಂದ ಹಣಿಕೆ ಹಾಕುತ್ತಾ ಗುಂಡುನಿರೋಧಕ ಗಾಜಿನ ಹಿಂದಿನಿಂದ ಜನಗಳಿಂದ ಬಹುದೂರದಲ್ಲಿ ಸ್ವಾತಂತ್ರ್ಯದ ಭಾಷಣ ಕೊಡಬೇಕಾದ ಸ್ಥಿತಿ ಏಕೆಬಂದಿತ್ತೆಂಬುದನ್ನು ಹೋದ ವರ್ಷದ "ಐಕ್ಯರಂಗ"ದಲ್ಲಿ ವಿವರಿಸಲಾಗಿತ್ತು. ಪ್ರಥಮ ಪ್ರಧಾನಿ ನೆಹರೂ ಕಾಲದಲ್ಲಿ ಪ್ರಾರಂಭಿಸಿದ್ದ ಪಂಚವಾರ್ಷಿಕ ಯೋಜನೆಯ ಮೂಲಕ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ವಿದೇಶಿ ಬಂಡವಾಳದಾರರ ತೆಕ್ಕೆಗೆ ಬೀಳದಂತೆ ನಲವತ್ತೈದು ವರ್ಷಕಾಲ ತಡೆದಿಡಲಾಗಿತ್ತು. ಬಂಡವಾಳಶಾಹಿ ವರ್ಗದ ಕಾಂಗ್ರೆಸ್ ಸರ್ಕಾರ ಇಂದು ಆ ಕೈಗಾರಿಕಾ ಧೋರಣೆಗೆ ತಿಲಾಂಜಲಿ ನೀಡಿ, ಇಡೀ ಭಾರತದೇಶದ ಅಗಾಂಗವನ್ನು ವಿದೇಶಿ ಗುತ್ತೇದಾರಿ ಬಂಡವಾಳದಾರರಿಗೆ ತೆರೆದಿಟ್ಟಿದೆ. ಹಲವಾರು ಕ್ಷೇತ್ರಗಳಲ್ಲಿ ವಿದೇಶೀ ಬಂಡವಾಳ ನೆಲೆ ನಿಲ್ಲಲು ಪ್ರಾರಂಭಮಾಡಿದೆ. ನಮ್ಮ ದೇಶದ ಕೈಗಾರಿಕೆ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆ ಅದರ ವಿಷಜ್ವಾಲೆ ಈಗಾಗಲೇ ಪರಿಣಾಮ ಬೀರಿದೆ. ಉದಾರೀಕರಣದ ಹೆಸರಲ್ಲಿ ಜಾಗತಿಕ ಅರ್ಥವ್ಯವಸ್ಥೆಯೊಂದಿಗೆ ಒಂದಾಗುವ ಕೇಂದ್ರಸರ್ಕಾರದ ನೀತಿ ಸಾಮ್ರಾಜ್ಯಶಾಹಿಗಳಿಗೆ ಅನುಕೂಲಮಾಡಿಕೊಟ್ಟಂತಾಗಿದೆ. ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಶ ಮಾಡಿಕೊಡಲಾಗುತ್ತಿದೆ. ಕಳೆದ ಒಂದು ವರ್ಷದಿಂದ ಈ ಕುರಿತಾದ ಲಕ್ಷಣಗಳು ಬಹಿರಂಗವಾಗಿಯೇ ಎದ್ದು ಕಾಣುತ್ತಿದ್ದು ಅದರ ವಿರುದ್ಧ ಹೋರಾಟದ ನೆಲೆ ರಚನೆಯಾಗಿದೆ. ಹೋರಾಟ ಮುಂದುವರಿದಿವೆ.

ನಮ್ಮ ದೇಶದ ಸಂಪತ್ತನ್ನು ದೋಚಿಕೊಂಡು ಹೋಗುತ್ತಿದ್ದ ನಮ್ಮನ್ನು ಗುಲಾಮಗಿರಿಯಲ್ಲಿಟ್ಟಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ 1942 ಆಗಸ್ಟ್ 9 ರಂದು ಬೃಹದಾಕಾರದ "ಭಾರತ ಬಿಟ್ಟು ತೊಲಗಿ" ಚಳುವಳಿ ಪ್ರಾರಂಭವಾಗಿತ್ತು. ಲಕ್ಷಾವಧಿ ಜನ ಭಾರತೀಯರು ಜೈಲು ತುಂಬಿದ್ದರು. ಅಮಾನುಷ ದಬ್ಬಾಳಿಕೆಗೆ ತುತ್ತಾಗಿದ್ದರು. ಸತತ ಜನಾಂದೋಲನದ ಪರಿಣಾಮವಾಗಿ ರೈತ ಕಾರ್ಮಿಕರ ಚಳುವಳಿ ತೀವ್ರಗೊಳ್ಳುತ್ತಿದ್ದಂತೆ ಸ್ವಾತಂತ್ರ್ಯ ಹೋರಾಟ ಅದೇ ರೀತಿ ಮುಂದುವರಿದರೆ ತಮ್ಮ ಜೊತೆಯಲ್ಲಿಯೇ ದೇಶೀ ಬಂಡವಾಳ ಶಾಹಿಗಳು ಭೂಮಾಲಕ ವರ್ಗದ ಅಧಿಕಾರವೂ ತಪ್ಪಿಹೋಗಿ ಕಮ್ಯುನಿಸ್ಟರ ಪ್ರಭಾವ ಬೆಳೆದು ತಮಗಿಬ್ಬರಿಗೂ ಅಪಾಯಕಾರಿಯಾಗಬಹುದೆಂದು ಮನಗಂಡೇ ಬ್ರಿಟಿಷರು ಭಾರತದ ಐಕ್ಯತೆ ಸಮಗ್ರತೆಯನ್ನು ಮುರಿದು ಭಾರತ ದೇಶದ ಹಿಂದುಸ್ಥಾನ- ಪಾಕಿಸ್ತಾನ ಎಂದು ವಿಭಜನೆ ಮಾಡಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿಗೆ ಅಧಿಕಾರ ಹಸ್ತಾಂತರಿಸಿದ್ದರು. ಸ್ವಾತಂತ್ರ್ಯ ಗಳಿಸಿದ ನಂತರ ನಲವತ್ತೈದು ವರ್ಷ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ದೇಶವನ್ನು ವಿಭಜಿಸಿ, ಅಸ್ಥಿರ ಗೊಳಿಸುವ ಬ್ರಿಟಿಷರ ಕುಟಿಲ ನೀತಿಯಿಂದ ಪಾಠ ಕಲಿಯದೆ, ದೇಶದ ಹಿತವನ್ನು ಸಂಪೂರ್ಣ ಕಡೆಗಣಿಸಿ ತಮ್ಮ ವರ್ಗದ ಅಧಿಕಾರವನ್ನು ಭದ್ರವಾಗುಳಿಸುವ ಏಕೈಕ ದೃಷ್ಟಿಯಿಂದ ಮತೀಯ ಶಕ್ತಿಗಳಿಗೂ, ಛಿದ್ರಕಾರಿಗಳಿಗೂ ಪ್ರತ್ಯೇಕತಾವಾದಿಗಳಿಗೂ, ಪಟ್ಟಭದ್ರ ಹಿತಾಸಕ್ತಿಗಳಿಗೂ ಪ್ರತ್ಯಕ್ಷ-ಅಪ್ರತ್ಯಕ್ಷ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಅಂಥ ಬಲಹೀನ, ಅಸಮರ್ಪಕ, ಅಪಾಯಕಾರಿ ನೀತಿಯಿಂದಾಗಿಯೇ ಹೋದ ವರ್ಷ ಸ್ವಾತಂತ್ರ್ಯ ದಿನದಂದು ದಿಲ್ಲಿಯ ಕೆಂಪು ಕೋಟೆಯಿಂದ ಭಾಷಣ ಮಾಡುತ್ತಾ ಬಾಬ್ರಿ ಮಸೀದಿಯನ್ನು ನೆಲಸಮಗೊಳಿಸಲು ಅವಕಾಶ ನೀಡುವುದೇ ಇಲ್ಲೆಂದು ಘಂಟಾಘೋಷವಾಗಿ ಸಾರಿದ ಪ್ರಧಾನಿ ನರಸಿಂಹರಾಯರು ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಬಾಬ್ರಿಮಸೀದಿಯನ್ನು ಆರ್.ಎಸ್.ಎಸ್.-ವಿ.ಹೆಚ್.ಪಿ., ಬಿಜೆಪಿ ಕಾರ್ಯಕರ್ತರು ಕೆಡವುತ್ತಿರುವಾಗ ದೇಶದ ಜನತೆಗಿತ್ತ ತನ್ನ ಆಶ್ವಾಸನೆ ಸುಳ್ಳಾಗುತ್ತಿದೆಯಲ್ಲಾ ಎಂದು ಚಿಂತೆಗೊಳಗಾಗದೆ, ಯಾವ ವಿಚಲತೆಯೂ ಇಲ್ಲದೆ, ನಿರ್ಲಿಪ್ತರಾಗಿ ಮಸೀದಿ ಕೆಡವುತ್ತಿರುವ ಚಿತ್ರವನ್ನು ಟ.ವಿ.ಯಲ್ಲಿ ನೋಡುತ್ತಿದ್ದ ದೃಶ್ಯ ಆಳುವ ಪಕ್ಷದ ಅಧೋಗತಿಯನ್ನು ಪ್ರದರ್ಶಿಸಿತ್ತು. ಕಳೆದ ಒಂದು ವರ್ಷದ ಕಾಂಗ್ರೆ ನೀತಿ ದೇಶದ ಐಕ್ಯತೆ ಸಮಗ್ರತೆಗಾಗಿ ಜನತೆ ಅರ್ಪಣೆ ಮಾಡಿದ ತ್ಯಾಗ- ಬಲಿದಾನಗಳಿಗೆ ಅಪಮಾನಕಾರಕವಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ನಿಲುಮೆಗೆ ಧ್ಯೇಯೋದ್ದೇಶಗಳಿಗೆ ಕಳಂಕಪ್ರಾಯವಾಗಿದೆ. ಭಗತ್‌ಸಿಂಗ್ ಸುಖದೇವ, ರಾಜಗುರು ಬ್ರಿಟಿಷರ ನೇಣುಗಂಬಕ್ಕೇರಿದ್ದು ಸ್ವಾತಂತ್ರ್ಯ ಪಡೆದ ನಂತರ ಅಸಮರ್ಪಕ ಆರ್ಥಿಕ, ಸಾಮಾಜಿಕ ನೀತಿಯಿಂದಾಗಿ ಯುವಕರು ಭಯೋತ್ಪಾದಕರಾಗಬೇಕೆಂಬ ಉದ್ದೇಶದಿಂದಲ್ಲ, ಜಲಿಯನ್‌ವಾಲಾಬಾಗಿನಲ್ಲಿ ನೂರಾರು ಜನ ಬ್ರಿಟಿಷರ ಗೋಳಿಬಾರಿಗೆ ಎದೆಯೊಡ್ಡಿ ಪ್ರಾಣತೆತ್ತು ವೀರಗಾಥೆ ರಚಿಸಿದ್ದು, ದೇಶದಲ್ಲಿಯ ಬಡತನ, ನಿರುದ್ಯೋಗ ನಿವಾರಿಸಿ ರೈತರಿಗೆ ಭೂಮಿ, ಕೃಷಿ ಕಾರ್ಮಿಕರಿಗೆ, ಉದ್ಯೋಗಿಗಳಿಗೆ ಜೀವನ ನಡೆಸಲು ಸರಿಯಾದ ವೇತನ ಸೌಲಭ್ಯಗಳು, ಸಿಗುವಂತಾಗಬೇಕೆಂದೂ ಬಡತನವಿಲ್ಲದೆ ಸಮೃದ್ಧ ಭಾರತ ದೇಶ ನಿರ್ಮಿಸಬೇಕೆಂಬ ಮಹೋದ್ದೇಶದಿಂದಲೇ ಎಂಬುದನ್ನು ಈಗಿನ ಆಳುವವರು ಮನಗಾಣುತ್ತಿಲ್ಲ. ಬ್ರಿಟಿಷರು ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಬೇಕೆಂಬ ದುರುದ್ದೇಶದಿಂದಲೇ ಹಿಂದೂ-ಮುಸಲ್ಮಾನರೊಳಗೆ ವೈಷಮ್ಯ ಉಂಟುಮಾಡಿ ಕಾಲಕಾಲದಲ್ಲಿ ಮತೀಯ ಗಲಭೆಗಳನ್ನೆಬ್ಬಿಸಿ ಹಿಂದೂ-ಮುಸ್ಲಿಂ ಐಕ್ಯತೆಗೆ ಭಂಗ ತರುತ್ತಿದ್ದರು. ಅಂಥ ಪರಿಸ್ಥಿತಿಯಲ್ಲಿ ಹಿಂದೂ-ಮುಸಲ್ಮಾನರು ಯಾತಕ್ಕಾಗಿ ಚಾಕು-ಚೂರಿ, ದೊಂಕಿ ಉಪಯೋಗಿಸುತ್ತಿದ್ದೆಂಬುದನ್ನು ಮರೆತು ಭೀಕರ ದಂಗೆಗಳಲ್ಲಿ ತೊಡಗಿದ್ದಾಗ ಲಕ್ಷಾಂತರ ದುಡಿಯುವ ಜನಗಳನ್ನೊಳಗೊಂಡು ದೇಶಪ್ರೇಮಿಗಳು ಜೀವದ ಹಂಗು ತೊರೆದು ಚಾಕು ಚೂರಿಗಳನ್ನೆದುರಿಸಿ ದೊಂಕಿಯೊಳನುಗ್ಗಿ ನಿರಪರಾಧಿ ಹಿಂದೂ-ಮುಸಲ್ಮಾನ ಬಾಂಧವರನ್ನು ಮಹಿಳೆಯರು, ಮಕ್ಕಳನ್ನು ರಕ್ಷಿಸಿದ್ದಾಗಲೀ "ಹಿಂದೂ ಮುಸ್ಲಿಂ ಐಕ್ಯತೆ ಚಿರಾಯುವಾಗಲಿ" "ಕಾಂಗ್ರೆಸ್-ಲೀಗ್ ಏಕಹೋ" (ಬ್ರಿಟಿಷರ ವಿರುದ್ಧ ಕಾಂಗ್ರೆಸ್ ಲೀಗ್ ಒಂದಾಗಲಿ) ಎಂಬ ಘೋಷಣೆಯೊಂದಿಗೆ ಹಿಂದೂ-ಮುಸ್ಲಿಂ ಐಕ್ಯತೆ ಹಾಗೆಯೇ ದೇಶದ ಐಕ್ಯತೆ ಕಾಪಾಡಬೇಕೆಂದು ಪ್ರಬಲವಾಗಿ ಹೋರಾಡಿದ್ದು, ಅಂಥ ಹೋರಾಟಗಳಲ್ಲೂ ನೂರಾರು ಜೀವ ಬಲಿಯಾಗಿರುವುದು ಸ್ವಾತಂತ್ರ್ಯ ಸಿಕ್ಕನಂತರ 45 ವರ್ಷದಲ್ಲಿ 500 ವರ್ಷ ಹಳೆಯದಾದ ಬಾಬ್ರಿಮಸೀದಿಯನ್ನು ಕೆಡವಿ, ದೇಶಾದ್ಯಂತ ಅತ್ಯಂತ ಭಯಾನಕ ರೀತಿಯ ಹಿಂದೂ-ಮುಸ್ಲಿಂ ದಂಗೆ ನಡೆದು ಎರಡೂ ಜಾತಿಯವರು ಅಪಾರ ಜೀವ ಆಸ್ತಿ ಹಾನಿಗೆ ತುತ್ತಾಗುವಂತೆ ಮಾಡಬೇಕೆಂಬ ಉದ್ದೇಶದಿಂದಲ್ಲ ಎಂಬುದನ್ನು ಮನಗಾಣಬೇಕು.

ಕೇಂದ್ರದಲ್ಲಿ ಅಧಿಕಾರ ಪಡೆದ ಬಂಡವಾಳಶಾಹಿ - ಭೂಮಾಲಕ ವರ್ಗದ ಕಾಂಗ್ರೆಸ್ ಸರ್ಕಾರ ಬ್ರಿಟಿಷರಿಂದ ಅಧಿಕಾರ ಹಸ್ತಾಂತರಗೊಂಡ ಕ್ಷಣದಿಂದಲೂ ತನ್ನ ವರ್ಗದ ಹಿತರಕ್ಷಣೆಗಾಗಿಯೇ "ಸಮತಾವಾದ" "ಗರೀಬಿ ಹಟಾವೋ" "20 ಅಂಶದ ಕಾರ್ಯಕ್ರಮ" "25 ಅಂಶದ ಕಾರ್ಯಕ್ರಮಗಳ" ಸುರಿಮಳೆಯನ್ನೇ ದೇಶದ ಜನತೆಯ ಮೇಲೆ ಸುರಿಯುತ್ತಾ, ಚುನಾವಣೆ ಬಂದಾಗ ಜನತೆ ತಮ್ಮ ಅಪಾರ ಸಂಕಷ್ಟಗಳನ್ನೆಲ್ಲ ಮರೆತು ಕಾಂಗ್ರೆಸ್ಸಿಗರ ವಾಗ್ದಾನಗಳ ಅಫೀಮು ಗುಳಿಗೆಗಳನ್ನು ನುಂಗಿ ಮತ್ತೊಮ್ಮೆ ಕಾಂಗ್ರೆಸ್‌ಗೆ ಮತ ಹಾಕುವಂತೆ ಮಾಡುತ್ತಾ ಬಂದಿದೆ.

ಕಾಂಗ್ರೆಸ್ಸಿನ ಹಳೆ ನೀತಿಗಿಂತಲೂ ಅಪಾಯಕಾರಿಯಾದ ಧೋರಣೆಯನ್ನು ನರಸಿಂಹರಾವ್ ಸರಕಾರ ಅನುಸರಿಸುತ್ತಿದೆ. ಮದ್ರಾಸಿನಲ್ಲಿ ನಡೆದ ಸಿಪಿಐ(ಎಂ) ಪಕ್ಷದ 14 ನೇ ಅಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ ನಿರ್ಣಯದಲ್ಲಿ "ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದ ನಂತರ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಆಳುವ ವರ್ಗ ಬಲಕ್ಕೆ ವಾಲಿರುವುದನ್ನು ತೋರಿಸುತ್ತದೆ. ಹೊಸ ವ್ಯಾಪಾರ ನೀತಿಗಳು, ಚಿನ್ನವನ್ನು ಅಡವಿಟ್ಟು ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಹೊಸ ಔದ್ಯಮಿಕ ನೀತಿ ಇವೆಲ್ಲವೂ ಹಿಂದಿನ ಸೀಮಿತವಾದರೂ ಸ್ವಾವಲಂಬನೆಯ ಪರವಾದ ನೀತಿಗೆ ಐವತ್ತರ ದಶಕದಲ್ಲಿ ಅನುಸರಿಸಿದ ಔದ್ಯಮಿಕ ನೀತಿಗೆ ವಿರುದ್ಧವಾಗಿವೆ. ಈ ಹೊಸ ಆರ್ಥಿಕ ನೀತಿ ಸಾಮ್ರಾಜ್ಯಶಾಹಿ ಪ್ರಾಯೋಜಿತ ಖಾಸಗೀಕರಣ, ಸಾರ್ವಜನಿಕ ವಲಯದ ರದ್ದತಿ ಮತ್ತು ಜಾಗತಿಕ ಅರ್ಥವ್ಯವಸ್ಥೆಯೊಡನೆ ಸಮ್ಮಿಳನವಾಗುವ ಕೂಗನ್ನು ಪ್ರತಿನಿಧಿಸುತ್ತದೆ ಎಂದು ಎಚ್ಚರಿಸಿದೆ ಮಾತ್ರವಲ್ಲ ಈ ಸವಾಲುಗಳನ್ನು ಸ್ವೀಕರಿಸಿ ಹೋರಾಡುವ ಗುರುತರವಾದ ಜವಾಬ್ದಾರಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲಿದೆಂದೂ ಅವರ ನಾಯಕತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಅಗಾಧ ಬೆಂಬಲ ಅವರಿಗಿದೆಂದೂ ಹೇಳಿದೆ."

ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಲು, ಮತೀಯ ಶಕ್ತಿಗಳನ್ನು ಸೋಲಿಸಲು, ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡಲು ಸ್ವಾತಂತ್ರ್ಯ ಪಡೆದ 46 ವರ್ಷಗಳ ನಂತರ ಮತ್ತೊಮ್ಮೆ ಜೈಲಭರೋ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಹೊಸ ಪೀಳಿಗೆಗೆ ದೊರೆತಿದೆ. ದೇಶಕ್ಕೂ ದೇಶದ ಜನತೆಗೂ ಬಾಧಕವಾದ, ದೇಶದ ಐಕ್ಯತೆ-ಸಮಗ್ರತೆಗೆ ಅಪಾಯಕಾರಿಯಾದ, ಮತೀಯ ಶಕ್ತಿಗಳಿಗೆ ಪ್ರೋತ್ಸಾಹದಾಯಕವಾದ ನೀತಿಗಳನ್ನು ಕೈಬಿಡಬೇಕೆಂದು ದೇಶದ ಸಂಘಟಿತ ಕಾರ್ಮಿಕ ವರ್ಗ ಹಾಗೆಯೇ ಇಡೀ ಜನತೆ ಹೋದ ವರ್ಷದಿಂದಲೇ ನಾನಾ ತರದ ಹೋರಾಟಗಳನ್ನು ನಡೆಸುತ್ತಾಬಂದರೂ, ಅವುಗಳ ನಿರ್ಲಕ್ಷಿಸಿ ವಿಚಲಿತರಾಗದೆ, ತನ್ನ ಅಪಾಯಕಾರಿ ನೀತಿಯನ್ನೇ ಮುಂದುವರಿಸುತ್ತಿರುವ ನರಸಿಂಹರಾವ್ ಸರಕಾರದ ವಿರುದ್ಧ ಈ ವರ್ಷ ಮತ್ತೆ ಜೈಲ್‌ಭರೋ ಕಾರ್ಯಕ್ರಮ ನಡೆಸಬೇಕಾಗಿದೆ. ಯಾವ ಒಂದು ಮಹೋದ್ದೇಶವನ್ನಿಟ್ಟುಕೊಂಡು 1942ರಲ್ಲಿ ಚಲೋ ಜಾವೋ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೋ, ಅದಕ್ಕಿಂತಲೂ ಅಪಾಯಕಾರಿಯಾದ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿ ಹಾಗೂ ಮತೀಯ ಶಕ್ತಿಗಳ ವಿರುದ್ಧ ನರಸಿಂಹರಾವ್ ಹಟಾವೋ ಚಳುವಳಿ ನಡೆಸಬೇಕಾಗಿದೆ. ಹಿಂದಿನ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ತಮ್ಮ ಚಳುವಳಿಗೆ ರಕ್ಷಣೆ ನೀಡಲು ಸೋವಿಯತ್ ಯೂನಿಯನ್ ಇತ್ತು. ಆಗ ಸಾಮ್ರಾಜ್ಯಶಾಹಿ ಶಕ್ತಿಗಳು ಈಗಿನಷ್ಟು ತಾಂತ್ರಿಕತೆಯಲ್ಲಿ, ಆಧುನಿಕತೆಯಲ್ಲಿ ಮುಂದುವರಿದಿದ್ದಿಲ್ಲ. ಈಗ ಸಾಮ್ರಾಜ್ಯಶಾಹಿಗಳನ್ನೆದುರಿಸಲು ಸೋವಿಯೆತ್ ರಶ್ಯಾ ಇಲ್ಲ. ಈಗಿನ ಸಾಮ್ರಾಜ್ಯಶಾಹಿಗಳು ಅತ್ಯಾಧುನಿಕ ತಂತ್ರಜ್ಞಾನ, ಆರ್ಥಿಕ ಪ್ರಾಬಲ್ಯ ಹೊಂದಿದವರಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಹೊಂದಿರುವ ಕಾಂಗ್ರೆ ಸರಕಾರ ದೇಶದ ಸ್ವಾತಂತ್ರ್ಯ ಮತ್ತು ಐಕ್ಯತೆ ಸಮಗ್ರತೆಯನ್ನು ಉಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿತ್ತು. ಕಾಂಗ್ರೆ ಪಕ್ಷ ಮತ್ತು ಅದರ ಸರಕಾರ ಅವುಗಳಿಗೆಲ್ಲ ತಿಲಾಂಜಲಿಯನ್ನಿತ್ತಿದೆ.

ಆ ಕಾರಣದಿಂದಲೇ ದೇಶದ ಸಂಘಟಿತ ಕಾರ್ಮಿಕ ವರ್ಗ, ರೈತರು, ವಿದ್ಯಾರ್ಥಿಗಳು, ಯುವಜನತೆಯನ್ನೆಲ್ಲ ಅಣಿಗೊಳಿಸಿ ಆಗಸ್ಟ್ 19 ರಂದು ಜೈಲ್‌ಭರೋ ಕಾರ್ಯಕ್ರಮವನ್ನೂ ಸೆಪ್ಟೆಂಬರ್ 9 ರಂದು ಭಾರತ್ ಬಂದ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಎರಡೂ ಕಾರ್ಯಕ್ರಮಗಳಿಗೆ ಕಾಂಗ್ರೆ ಬಿಜೆಪಿಗಳನ್ನು ಬಿಟ್ಟು ಇತರ ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲ ನೀಡಿವೆ. ಸ್ವಾತಂತ್ರ್ಯ ಸಂಗ್ರಾಮ ಕಾಲದ ಹೋರಾಟಗಳನ್ನು ನೆನಸುತ್ತ ದೇಶದ ಸ್ವಾಯತ್ತತೆಗಾಗಿ, ಸ್ವಾತಂತ್ರ್ಯದ ರಕ್ಷಣೆಗಾಗಿ ಐಕ್ಯ ಹೋರಾಟ ನಡೆಸಬೇಕಾಗಿದೆ.

ಈ ಹೋರಾಟದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗಿದೆ. ರಾಷ್ಟ್ರೀಯ ಶೌರ್ಯದಿಂದ ಹೋರಾಡುತ್ತಾ ಪಂಜಾಬ್, ಅಸ್ಸಾಂ, ತ್ರಿಪುರಾ, ಡಾರ್ಜಿಲಿಂಗ್‌ಗಳಲ್ಲಿ ಬಲಿದಾನ ತ್ಯಾಗಮಾಡಿದ ಸಿಪಿಐ(ಎಂ) ಕಾರ್ಯಕರ್ತರು ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಮುಂದಿನ ವರ್ಷಗಳಲ್ಲಿ ವ್ಯಾಪಕ ತ್ಯಾಗ ಮತ್ತು ಶೌರ್ಯದ ಹೆಚ್ಚಿನ ಅವಶ್ಯಕತೆಯಿದೆ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲೂ ರೈತ-ಕಾರ್ಮಿಕರನ್ನೂ ವಿದ್ಯಾರ್ಥಿ ಯುವ ಜನತೆಯನ್ನೂ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಧುಮುಕುವಂತೆ ಮಾಡಲು ಸಾಧ್ಯವಾಗಿದೆ. ಹೋರಾಟದ ಫಲವಾಗಿ ಬ್ರಿಟಿಷರನ್ನು ಓಡಿಸಲು ಸಾಧ್ಯವಾಗಿದೆ.

ಅಂದಿನ ಆ ತ್ಯಾಗ ಬಲಿದಾನ ಇಂದಿನ ಹೋರಾಟಗಳಿಗೆ ಸ್ಫೂರ್ತಿನೀಡಲಿ. ನೇಣು ಕಂಬಕ್ಕೇರಿದ ಒಬ್ಬ ಭಗತ್‌ಸಿಂಗ್‌ನ ಬದಲಾಗಿ ಸಾವಿರಾರು ಭಗತ್‌ಸಿಂಗರು ತಯಾರಾಗಲಿ. ಜಲಿಯನ್‌ವಾಲ್‌ಬಾಗಿನ ಮಾರಣ ಹೋಮದ ರಕ್ತದ ಹೊಳೆ ಯುವಕರಲ್ಲಿ ಶೌರ್ಯ ತುಂಬಿ ಹೋರಾಟದಲ್ಲಿಳಿಸಲಿ. ಹಿಂದೂ- ಮುಸಲ್ಮಾನರ ದಂಗೆಯ ಮಧ್ಯೆ ಪ್ರವೇಶಿಸಿ ಐಕ್ಯತೆ ಸಾಧಿಸಿದ ಮಾದರಿಯಲ್ಲಿ ಮತೀಯ ಶಕ್ತಿಗಳನ್ನು ಮ[illegible]ಸಲು ಎದೆ ಗುಂದದೆ ಜನ ಮುಂ[illegible].

ಈ ವರ್ಷ ಸ್ವಾತಂತ್ರ್ಯ ದಿನೋತ್ಸವದ ಸಮಯದಲ್ಲಿ ಬರುವ ಜೈಲ್‌ಭರೋ ಭಾರತ್‌ಬಂದ್ ಕಾರ್ಯಕ್ರಮ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯ ಬದಲಾವಣೆಗೆ ನಾಂದಿಯಾಗಲಿ.

ಧರ್ಮ ಮತ್ತು ರಾಜಕೀಯವನ್ನು......

ಪುಟ 1ರಿಂದ

ಮೂರನೆಯದಾಗಿ, ಯಾವುದೇ ರಾಜಕೀಯ ಪಕ್ಷದ ರಿಜಿಸ್ಟ್ರೇಶನ್ ಆಗಬೇಕಾದರೆ "ಸಮಾಜವಾದ, ಜಾತ್ಯತೀತತೆ, ಹಾಗೂ ಪ್ರಜಾಪ್ರಭುತ್ವ" ಕ್ಕೆ ಬದ್ಧತೆಯನ್ನು ಆ ಪಕ್ಷ ತನ್ನ ಸಂವಿಧಾನದಲ್ಲಿ ಒಳಗೊಂಡಿರಬೇಕು. ಇದು ಅಸ್ಪಷ್ಟ ಹಾಗೂ ಇದರಿಂದ ರಾಜಕೀಯ ಪಕ್ಷಗಳು ಸುಲಭವಾಗಿ ತಪ್ಪಿಸಿಕೊಳ್ಳಬಹುದು. ಏಕೆಂದರೆ ಯಾವುದೇ ನ್ಯಾಯಾಲಯ ಈ ತತ್ವಗಳ ಬಗ್ಗೆ ನಿರ್ಣಯ ನೀಡುವುದು ಸುಲಭವಲ್ಲ. ಇದರ ಬದಲು ರಾಜಕೀಯ ಪಕ್ಷಗಳನ್ನು ಅಮಾನ್ಯಗೊಳಿಸುವ ಅಂಶಗಳನ್ನು ಸ್ಪಷ್ಟವಾಗಿ ಪಟ್ಟಿಮಾಡಬೇಕು. ಉದಾಹರಣೆಗೆ ಧಾರ್ಮಿಕ ಚಿಹ್ನೆಗಳೂ ಸೇರಿದಂತೆ ಧರ್ಮವನ್ನು ಚುನಾವಣಾ ಹಾಗೂ ಇತರ ರಾಜಕೀಯ ಉದ್ದೇಶಗಳಿಗೆ ಬಳಸುವುದು, ಪೂಜಾಸ್ಥಳಗಳ ಸ್ಥಾನಮಾನವನ್ನು ಬದಲಿಸುವುದು, ಕೋಮುಗಳು, ಧಾರ್ಮಿಕ ಗುಂಪುಗಳ ನಡುವೆ ದುರ್ಭಾವನೆ, ದ್ವೇಷ, ವೈರತ್ವವನ್ನು ಹರಡುವುದು, ಮತೀಯ ಪ್ರಭುತ್ವದ ಪ್ರತಿಪಾದನೆ, ಒಂದು ಸಂಯುಕ್ತ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯಿರುವ ಸಮಾಜದಲ್ಲಿ ಯಾವುದೋ ಒಂದು ಧರ್ಮ ಅಥವಾ ಸಂಸ್ಕೃತಿ ಉಳಿದೆಲ್ಲಕ್ಕಿಂತಲೂ ದೊಡ್ಡದು ಎಂಬ ಪ್ರತಿಪಾದನೆ ಇತ್ಯಾದಿ. ಈಗಿರುವ ಕಲಮುಗಳು ಅಸ್ಪಷ್ಟವಾಗಿದ್ದು ನ್ಯಾಯಾಂಗ ಹಾಗೂ ಚುನಾವಣಾ ಆಯೋಗ ಅವನ್ನು ದುರುಪಯೋಗ ಪಡಿಸಿಕೊಳ್ಳಲು ಅವಕಾಶವಿದೆ. ಚುನಾವಣೆಯ ದಿನದ ಮೊದಲು ಒಬ್ಬ ಅಭ್ಯರ್ಥಿಯನ್ನು ಅನರ್ಹಗೊಳಿಸುವ ಕಲಮಿನ ಬಗ್ಗೆ ಚರ್ಚೆ ನಡೆಯಬೇಕು. ಇದರ ತೀರ್ಮಾನವನ್ನು ಜಿಲ್ಲಾ ಚುನಾವಣಾಧಿಕಾರಿಗೆ ಬಿಡಲಾಗದು.

ಕೊನೆಯದಾಗಿ, ಈ ಮಸೂದೆಗಳ ಮುಖ್ಯ ಕೊರತೆಯೆಂದರೆ ಧರ್ಮ ಮಾತ್ರವಲ್ಲ, ಭಾಷೆ, ಜಾತಿ, ಜನಾಂಗ ಜನಸ್ಥಳ ಇತ್ಯಾದಿಗಳ ಆಧಾರದಲ್ಲಿ ಸಾಮರಸ್ಯಕ್ಕೆ ತೊಂದರೆ ತರುವುದನ್ನೂ ಸೇರಿಸಲಾಗಿದೆ. ಇದು ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಉದ್ದೇಶಕ್ಕೆ ಮಾರಿದ್ದು. ಇದು ಸರಕಾರಕ್ಕೆ ದೇಕಾಬಿಟ್ಟಿ ಅಧಿಕಾರ ನೀಡುವ ಅಪಾಯಕಾರಿ ಅಂಶ. ಭಾಷೆ, ಜಾತಿ ಸಂಕುಚಿತವಾದ ಇತ್ಯಾದಿಗಳನ್ನು ರಾಜಕೀಯವಾಗಿಯೇ ಎದುರಿಸಬೇಕು, ಕಾನೂನಿನ ಮೂಲಕ ಅಲ್ಲ.

ಹೀಗೆ ಈ ಮಸೂದೆಗಳಲ್ಲಿ ಧರ್ಮದ ದುರುಪಯೋಗದ ವ್ಯಾಪ್ತಿಯನ್ನು ಮೀರಿದ ಅಂಶಗಳನ್ನು ಕೈಬಿಡಲು, ದುರುಪಯೋಗಕ್ಕೆ ಅವಕಾಶವಿಲ್ಲದಂತೆ ಮಾಡುವ ಅವುಗಳನ್ನು ಸೇರಿಸಲು ಸೂಕ್ತ ಬದಲಾವಣೆಗಳನ್ನು ತಂದರೆ ಇವು ಶಾಸನವಾಗದಂತೆ ತಡೆಯಲು ಬಿಜೆಪಿಗೆ ಸಾಧ್ಯವಾಗುವುದಿಲ್ಲ ಎಂದು ಕಾಂ. ಪ್ರಕಾಶ್ ಕಾರಟ್ ಹೇಳಿದ್ದಾರೆ.

ಇಂತಹ ಬದಲಾವಣೆಗಳೊಡನೆ ಈ ಶಾಸನಗಳು ಕೋಮುವಾದವನ್ನು ಆಡಳಿತಾತ್ಮಕವಾಗಿ, ಕಾನೂನು ದೃಷ್ಟಿಯಿಂದ ಎದುರಿಸಲು ನೆರವಾಗಬಲ್ಲವು. ಆದರೆ ಕೇವಲ ಶಾಸನಗಳಿಂದಲೇ ಇದು ಸಾಧ್ಯವಾಗುವುದಿಲ್ಲ. ಈ ಶಾಸನಗಳನ್ನು ಜಾರಿಗೆ ತರುವ ರಾಜಕೀಯ ಇಚ್ಛಾಶಕ್ತಿಯೂ ಆಳುವವರಿಗೆ ಇರಬೇಕು. ಎಲ್ಲಕ್ಕೂ ಮಿಗಿಲಾಗಿ ಈ ಶಾಸನಗಳು ಪರಿಣಾಮಕಾರಿಯಾಗಬೇಕಾದರೆ ಜನಗಳನ್ನು ರಾಜಕೀಯವಾಗಿ ಅಣಿನೆರಸುವುದೂ ಅಷ್ಟೇ ಅಗತ್ಯ ಎಂದು ಕಾಂ. ಪ್ರಕಾಶ್ ಕಾರಟ್ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಉಳ್ಳಾಲವನ್ನು ಪುರಸಭೆ ಮಾಡಲು ಸಿಪಿಐ(ಎಂ) ಒತ್ತಾಯ

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಮಂಡಲ ಪಂಚಾಯತ್ ಹಿಂದೆ ಉಳ್ಳಾಲ ಟೌನ್ ಪಂಚಾಯತ್ ಆಗಿ ಇತ್ತು ಈಗ ಗ್ರಾಮದಲ್ಲಿ 31 ಸಾವಿರದಷ್ಟು ಜನಸಂಖ್ಯೆ ಇದೆ. ಇಲ್ಲಿಯ ಜನರು ಅನೇಕ ವರ್ಷಗಳಿಂದ ವಿವಿಧ ಸವಲತ್ತುಗಳನ್ನು ಪಡೆದಿರುವುದು ಗಮನಾರ್ಹ. ಈ ಸವಲತ್ತುಗಳು ಗ್ರಾಮ ಪಂಚಾಯತ್‌ಗಳಿಗೂ ವಿಸ್ತರಿಸಬೇಕೆಂದು ಇಲ್ಲಿಯ ಜನರು ಹಿಂದಿನಿಂದಲೂ ಕೇಳಿಕೊಂಡು ಬಂದಿರುವಾಗ ಹಾಗೂ ಈ ಕ್ಷೇತ್ರದಲ್ಲಿ ಶಾಲಾ ಕಾಲೇಜುಗಳೂ, ಇಂಜಿನಿಯರಿಂಗ್ ಕಾಲೇಜುಗಳಿಗೂ ಇದ್ದು ಮುಂದೆ ಸರಕಾರದಿಂದ ಈ ಕ್ಷೇತ್ರದಲ್ಲಿ ದೊಡ್ಡ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳು ನಡೆಸಲು ಈಗಾಗಲೇ ಜನರ ಒತ್ತಾಯ ಇರುವಾಗ ಉಳ್ಳಾಲ ಮಂಡಲ ಪಂಚಾಯತ್‌ನ್ನು ಉಳ್ಳಾಲ ಪುರಸಭೆಯನ್ನಾಗಿ ಮಾರ್ಪಡಿಸಬೇಕೆಂದು ಸಿಪಿಐ(ಎಂ) ಉಳ್ಳಾಲ ಪ್ರದೇಶ ಸಮಿತಿ ಜಿಲ್ಲಾಧಿಕಾರಿಯವರನ್ನು ಒತ್ತಾಯಪಡಿಸಿದೆ. ಉಳ್ಳಾಲ ಮಂಡಲ ಪಂಚಾಯಿತನ್ನು ಗ್ರಾಮಪಂಚಾಯಿತನ್ನಾಗಿ ಪರಿವರ್ತಿಸುವ ಸರ್ಕಾರದ ಸೂಚನೆಯ ಹಿನ್ನೆಲೆಯಲ್ಲಿ ಈ ಒತ್ತಾಯ ಮಾಡಲಾಗಿದೆ.

ಜನಸಂಖ್ಯೆ ಏರುತ್ತಿರುವ ಈ ಪರಿಸರದಲ್ಲಿ ಆರೋಗ್ಯದ ದೃಷ್ಟಿಯಿಂದ ಒಳಚರಂಡಿಯ ಅವಶ್ಯಕತೆಯೂ ಇರುವುದರಿಂದ ಈ ಎಲ್ಲಾ ಸವಲತ್ತುಗಳನ್ನು ಪಡೆಯುವಂತಾಗಲು ಪುರಸಭೆಯನ್ನಾಗಿ ಮಾಡಬೇಕಾದುದು ಅನಿವಾರ್ಯವಾಗಿದೆ ಎಂದು ಸಿಪಿಐ(ಎಂ) ಪ್ರದೇಶ ಸಮಿತಿ ಹೇಳಿದೆ.